# ಕರ್ಣಾಟಕ ಕಾವ್ಯಮಂಜರಿ.

ತಿರುಮಲಾರ್ಯ ವಿರಚಿತ

## — ಅ ಪ್ರ ತಿ ಮ ವೀ ರ ಚ ರಿ ತಂ —

[೮]

ಎಸ್. ಜಿ. ನರಸಿಂಹಾಚಾರ್,

ಮ. ಆ. ರಾಮಾನುಜೈಯ್ಯಂಗಾರ್,

ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,

ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೮೯೩.

[ಕ್ರಯ [illegible] ರೂಪಾಯಿ.

ರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾ. ಪ್ರೊಪ್ರೈಟರು, ಮ. ಕೆ. ನಾರಸ್ವಾಮಿ ತಿರುಮಲಾಚಾರ್, ಆ. ಅನಂದಾಳ್ವಾರ್ ಇವರಲ್ಲಿ ದೊರೆಯುತ್ತವೆ.

UNIVERSAL LIBRARY
OU_200530
UNIVERSAL LIBRARY

Registered according to ACT XXV 1867.

( All rights reserved. )

# ವಿಷಯಾನುಕ್ರಮಣಿಕೆ.

## — ಪ್ರಥಮಪ್ರಕರಣಂ.—

ಪುಟ.

೧. ಗ್ರಂಥಾವತಾರಂ ... ... ೧
೨. ನಾಲ್ಕುಂ ಪ್ರಕರಣಗಳ ಅರ್ಥಸಂಗ್ರಹಂ ... ... ೩
೩. ಉತ್ತಮ ಕಾವ್ಯಲಕ್ಷಣಂ ... ... ೪
೪. ಮಧ್ಯಮ ಕಾವ್ಯಲಕ್ಷಣಂ ... ... ೫
೫. ಸಾಧಾರಣ ಕಾವ್ಯಲಕ್ಷಣಂ ... ... ,,
೬. ಕಾವ್ಯದ ಶಬ್ದಗುಣಂಗಳ್, ಪತ್ತು ... ... ೭
    ೧. ಓಜಸ್ಸು ... ... ,,
    ೨. ಪ್ರಸಾದಂ ... ... ೮
    ೩. ಶ್ಲೇಷಂ ... ... ,,
    ೪. ಸಮತೆ ... ... ,,
    ೫. ಸಮಾಧಿ ... ... ೯
    ೬. ಮಾಧುರ್ಯಂ ... ... ,,
    ೭. ಸೌಕುಮಾರ್ಯಂ ... ... ೧೦
    ೮. ಉದಾರತೆ ... ... ... ,,
    ೯. ಅರ್ಥವ್ಯಕ್ತಿ ... ... ೧೧
    ೧೦. ಕಾಂತಿ ... ... ,,
೭. ಅರ್ಥಗುಣಂಗಳ್, ಪತ್ತು ... ... ೧೨
  ೧. ಓಜಸ್ಸು, ಐದುಂ ತೆಱಂ — ... ... ,,
    (1) ಪದಾರ್ಥದೊಳ್ವಾಕ್ಯರಚನಂ ... ೧೩
    (2) ವಾಕ್ಯಾರ್ಥದೊಳ್ಪದರಚನಂ ... ,,
    (3) ಪೇೞ್ದರ್ಥಮನೇ ಬಿತ್ತರಿಪುದು ... ,,

(4) ಪೇೞ್ದರ್ಥಮಂ ಸಂಗ್ರಹಿಸಿ ಪೇೞ್ವುದು ... ೧೪
(5) ಸಾಭಿಪ್ರಾಯಮಾಗಿ ಪದಂಗಳಂ ಪೇೞ್ವುದು ,,
೨. ಪ್ರಸಾದಂ ... ... ,,
೩. ಶ್ಲೇಷಂ ... ... ... ೧೫
೪. ಸಮತೆ ... ... ,,
೫. ಸಮಾಧಿ ... ... ೧೬
೬. ಮಾಧುರ್ಯಂ ... ... ,,
೭. ಸೌಕುಮಾರ್ಯಂ ... ... ೧೭
೮. ಉದಾರತೆ ... ... ,,
೯. ಅರ್ಥವ್ಯಕ್ತಿ ... ... ೧೮
೧೦. ಕಾಂತಿ ... ... ... ,,

— ದ್ವಿತೀಯ ಪ್ರಕರಣಂ. —

೧. ರೀತಿ, ಮೂಱುಂ ತೆಱಂ— ... ... ೨೦
(1) ಪಾಂಚಾಲರೀತಿ ... ... ,,
(2) ವೈದರ್ಭರೀತಿ ... ,,
(3) ಗೌಡೀರೀತಿ ... ... ೨೧
೨. ಶಯ್ಯೆ ... ... ೨೨
೩. ಪಾಕಂ, ಎರಡುಂ ತೆಱಂ — ... ... ,,
(1) ದ್ರಾಕ್ಷಾಪಾಕಂ ... ... ,,
(2) ನಾಳಿಕೇರಪಾಕಂ ... ... ೨೩
೪. ವೃತ್ತಿ, ನಾಲ್ಕುಂ ತೆಱಂ — ... .. ೨೪
(1) ಕೈಶಿಕೀವೃತ್ತಿ ... ... ,,
(2) ಭಾರತೀವೃತ್ತಿ ... ... ೨೫
(3) ಆರಭಟೀವೃತ್ತಿ ... ... ೨೬
(4) ಸಾತ್ವತೀವೃತ್ತಿ ... ... ೨೭
೫. ಅಲಂಕಾರಂಗಳ್ ... ... ೨೮
ಶಬ್ದಾಲಂಕಾರಂಗಳ್ ... ... ,,
(1) ಛೇಕಾನುಪ್ರಾಸಂ ... ... ೨೯
(2) ವೃತ್ತ್ಯನುಪ್ರಾಸಂ ... ... ೩೦
(3) ಯಮಕಂ .. ... ೩೧

## —ತೃತೀಯ ಪ್ರಕರಣಂ.—


ಅರ್ಥಾಲಂಕಾರಂಗಳ್

| | | |
|---|---|---|
| | ಉಪಮಾಲಂಕಾರಂ ... ... | ೩೩ |
| i | ಪೂರ್ಣೋಪಮೆ ... ... | ,, |
| ii | ಲುಪ್ತೋಪಮೆ ... ... | ,, |
| (1) | ವಾಚಕಲುಪ್ತೋಪಮೆ ... ... ... | ೩೪ |
| (2) | ಧರ್ಮಲುಪ್ತೆ ... ... ... | ,, |
| (3) | ಧರ್ಮವಾಚಕಲುಪ್ತೆ ... ... ... | ೩೫ |
| (4) | ವಾಚಕೋಪಮೇಯಲುಪ್ತೆ ... ... | ,, |
| (5) | ಉಪಮಾನಲುಪ್ತೆ ... ... ... | ೩೬ |
| (6) | ವಾಚಕೋಪಮಾನಲುಪ್ತೆ ... ... ... | ೩೭ |
| (7) | ಧರ್ಮೋಪಮಾನಲುಪ್ತೆ ... ... | ,, |
| (8) | ಧರ್ಮೋಪಮಾನವಾಚಕಲುಪ್ತೆ ... ... | ೩೮ |
| ೨. | ಅನನ್ವಯಾಲಂಕಾರಂ ... ... ... | ೩೮ |
| ೩. | ಉಪಮೇಯೋಪಮೆ ... ... ... | ೩೯ |
| ೪. | ಪ್ರತೀಪಾಲಂಕಾರಂ, ಐದುಂ ತೆಱಂ ... ... | ,, |
| ೫. | ರೂಪಕಾಲಂಕಾರಂ ... ... ... | ೪೧ |
| (1) i | ಅನುಭಯಾಭೇದರೂಪಕಂ ... ... | ೪೨ |
| ii | ನ್ಯೂನಾಭೇದರೂಪಕಂ ... ... | ,, |
| iii | ಅಧಿಕಾಭೇದರೂಪಕಂ ... ... | ೪೩ |
| (2) i | ಅನುಭಯತಾದ್ರೂಪ್ಯರೂಪಕಂ ... | ,, |
| ii | ನ್ಯೂನತಾದ್ರೂಪ್ಯರೂಪಕಂ ... ... | ,, |
| iii | ಅಧಿಕತಾದ್ರೂಪ್ಯರೂಪಕಂ ... ... | ,, |
| ೬. | ಪರಿಣಾಮಾಲಂಕಾರಂ ... ... ... | ೪೪ |
| ೭. | ಉಲ್ಲೇಖಾಲಂಕಾರಂ, ಎರಡುಂ ತೆಱಂ ... ... | ೪೪ |
| ೮. | ಸ್ಮೃತಿಮದಲಂಕಾರಂ } ... ... | ೪೫ |
| ೯. | ಭ್ರಾಂತಿಮದಲಂಕಾರಂ } ... ... | ೪೬ |
| ೧೦. | ಸಂದೇಹಾಲಂಕಾರಂ } | |

೧೧. ಅಪಹ್ನವಾಲಂಕಾರಂ, ಆಱುಂ ತೆಱಂ ... ... ೪೬

೧೨. ಉತ್ಪ್ರೇಕ್ಷಾಲಂಕಾರಂ, ಮೂಱುಂ ತೆಱಂ— .... ೪೯

(1) i ಉಕ್ತವಸ್ತೂತ್ಪ್ರೇಕ್ಷೆ ... ... ೫೦

ii ಅನುಕ್ತವಸ್ತೂತ್ಪ್ರೇಕ್ಷೆ .. ... ,,

(2) i ಸಿದ್ಧಕಾರಣೋತ್ಪ್ರೇಕ್ಷೆ ... ... ೫೧

ii ಅಸಿದ್ಧಕಾರಣೋತ್ಪ್ರೇಕ್ಷೆ .. ... ,,

(3) i ಸಿದ್ಧಫಲೋತ್ಪ್ರೇಕ್ಷೆ .. ... ... ,,

ii ಅಸಿದ್ಧಫಲೋತ್ಪ್ರೇಕ್ಷೆ .. ... ೫೨

೧೩. ಅತಿಶಯೋಕ್ತಿ, ಎಂಟುಂ ತೆಱಂ— ... ... ,,

(1) ರೂಪಕಾತಿಶಯೋಕ್ತಿ ... ... ... ೫೨

(2) ಸಾಪಹ್ನವಾತಿಶಯೋಕ್ತಿ ... ... ,,

(3) ಭೇದಕಾತಿಶಯೋಕ್ತಿ ... ... ... ೫೩

(4) ಸಂಬಂಧಾತಿಶಯೋಕ್ತಿ ... ... ... ,,

(5) ಅಸಂಬಂಧಾತಿಶಯೋಕ್ತಿ ... ... ೫೪

(6) ಅಕ್ರಮಾತಿಶಯೋಕ್ತಿ ... ... ... ,,

(7) ಚಪಲಾತಿಶಯೋಕ್ತಿ ... ... ೫೫

(8) ಅತ್ಯಂತಾತಿಶಯೋಕ್ತಿ ... ... ,,

೧೪. ಸಮುಯೋಗಿತಾಲಂಕಾರಂ, ನಾಲ್ಕುಂ ತೆಱಂ ... ೫೬

೧೫. (1) ದೀಪಕಾಲಂಕಾರಂ .. ... ೫೭

(2) ಆವೃತ್ತಿದೀಪಕಂ .. ... ... ೫೮

i ಶಬ್ದಾವೃತ್ತಿದೀಪಕಂ ... ... ,,

ii ಅರ್ಥಾವೃತ್ತಿದೀಪಕಂ ... ... ೫೯

iii ಉಭಯಾವೃತ್ತಿದೀಪಕಂ ... ... ,,

೧೬. ದೃಷ್ಟಾಂತಾಲಂಕಾರಂ ... ... ... ೬೦

೧೭. ಪ್ರತಿವಸ್ತೂಪಮಾಲಂಕಾರಂ, ಎರಡುಂ ತೆಱಂ ... ,,

೧೮. ನಿದರ್ಶನಾಲಂಕಾರಂ ನಾಲ್ಕುಂ ತೆಱಂ— ... ೬೧

(1) ವಾಕ್ಯಾರ್ಥವೃತ್ತಿ ... ... ... ,,

(2) ಪದಾರ್ಥವೃತ್ತಿ ... ... ... ,,

(3) ಅಸದರ್ಥಬೋಧನಂ ... ... ೬೨

(4) ಸದರ್ಥಬೋಧನಂ ... ... ,,

೧೯. ವ್ಯತಿರೇಕಾಲಂಕಾರಂ ... ... ... ೬೩
೨೦. ಸಹೋಕ್ತ್ಯಲಂಕಾರಂ ... ... ... ೬೪
೨೧. ವಿನೋಕ್ತ್ಯಲಂಕಾರಂ, ಎರಡುಂ ತೆಱಂ ... ... ,,
೨೨. ಸಮಾಸೋಕ್ತ್ಯಲಂಕಾರಂ ... ... ... ೬೫
೨೩. ಪರಿಕರಾಲಂಕಾರಂ ... ... ... ೬೬
೨೪. ಪರಿಕರಾಂಕುರಂ ... ... ,,
೨೫. ಶ್ಲೇಷಾಲಂಕಾರಂ, ಮೂಱುಂ ತೆಱಂ— ... ... ೬೭
(1) ವರ್ಣ್ಯಶ್ಲೇಷಂ ... ... ... ,,
(2) ಅವರ್ಣ್ಯಶ್ಲೇಷಂ ... ... ... ೬೮
(3) ವರ್ಣ್ಯಾವರ್ಣ್ಯೋಭಯಶ್ಲೇಷಂ ... ... ,,
೨೬. ಅಪ್ರಸ್ತುತಪ್ರಶಂಸೆ, ಐದುಂ ತೆಱಂ— ... ೬೯
(1) ಕಾರ್ಯನಿಬಂಧನೆ ... ... ... ,,
(2) ಕಾರಣನಿಬಂಧನೆ ... ... ... ೭೦
(3) ಸಾಮಾನ್ಯನಿಬಂಧನೆ ... ... ... ೭೧
(4) ವಿಶೇಷನಿಬಂಧನೆ ... ... ... ,,
(5) ಸಾದೃಶ್ಯನಿಬಂಧನೆ ... ... ... ,,
೨೭. ಪ್ರಸ್ತುತಾಂಕುರಂ ... ... ... ೭೨
೨೮. ಪರ್ಯಾಯೋಕ್ತಾಲಂಕಾರಂ, ಎರಡುಂ ತೆಱಂ ... ೭೩
೨೯. ವ್ಯಾಜಸ್ತುತಿ } ... ... ... ೭೪
೩೦. ವ್ಯಾಜನಿಂದೆ } ... ... ... ೭೫
೩೧. ಆಕ್ಷೇಪಾಲಂಕಾರಂ, ಮೂಱುಂ ತೆಱಂ ... ... ,,
೩೨. ವಿರೋಧಾಭಾಸಾಲಂಕಾರಂ ... ... ... ೭೮
೩೩. ವಿಭಾವನಾಲಂಕಾರಂ, ಆಱುಂ ತೆಱಂ ... ... ,,
೩೪. ವಿಶೇಷೋಕ್ತ್ಯಲಂಕಾರಂ ... ... ೮೨
೩೫. ಅಸಂಭವಾಲಂಕಾರಂ ... ... ... ,,
೩೬. ಅಸಂಗತ್ಯಲಂಕಾರಂ, ಮೂಱುಂ ತೆಱಂ ... ೮೩
೩೭. ವಿಷಮಾಲಂಕಾರಂ, ಮೂಱುಂ ತೆಱಂ ... ... ೮೫
೩೮. ಸಮಾಲಂಕಾರಂ, ಮೂಱುಂ ತೆಱಂ ... ... ೮೭
೩೯. ವಿಚಿತ್ರಾಲಂಕಾರಂ ... ... ... ೮೯

೪೦. ಅಧಿಕಾಲಂಕಾರಂ, ಎರಡುಂ ತೆಱಂ ... ... ೮೯
೪೧. ಅಲ್ಪಾಲಂಕಾರಂ ... ... ... ೯೧
೪೨. ಅನ್ಯೋನ್ಯಾಲಂಕಾರಂ ... ... ... ,,
೪೩. ವಿಶೇಷಾಲಂಕಾರ, ಮೂಱುಂ ತೆಱಂ ... ... ೯೨
೪೪. ವ್ಯಾಘಾತಾಲಂಕಾರಂ, ಎರಡುಂ ತೆಱಂ ... ... ೯೪
೪೫. ಗುಂಭಾಲಂಕಾರಂ ... ... ... ೯೫
೪೬. ಏಕಾವಳ್ಯಲಂಕಾರಂ ... ... ... ೯೬
೪೭. ಮಾಲಾದೀಪಕಂ ... . ... ,,
೪೮. ಸಾರಾಲಂಕಾರಂ ... ... ೯೭
೪೯. ಯಥಾಸಂಖ್ಯಾಲಂಕಾರಂ ... ... ,,
೫೦. ಪರ್ಯಾಯಾಲಂಕಾರಂ, ಎರಡುಂ ತೆಱಂ ... ... ೯೮
೫೧. ಪರಿವೃತ್ತ್ಯಲಂಕಾರಂ ... ... ... ೯೯
೫೨. ಪರಿಸಂಖ್ಯಾಲಂಕಾರಂ ... ... ... ,,
೫೩. ವಿಕಲ್ಪಾಲಂಕಾರಂ ... ... ... ೧೦೦
೫೪. ಸಮುಚ್ಚಯಾಲಂಕಾರಂ, ಎರಡುಂ ತೆಱಂ ... ,,
೫೫. ಕಾರಕದೀಪಕಂ ... ... ೧೦೧
೫೬. ಸಮಾಧ್ಯಲಂಕಾರಂ ... ... ... ೧೦೨
೫೭. ಪ್ರತ್ಯನೀಕಾಲಂಕಾರಂ ... ... ೧೦೩
೫೮. ಕಾವ್ಯಾರ್ಥಾಪತ್ತಿ ... ... ... ,,
೫೯. ಕಾವ್ಯಲಿಂಗಂ, ಎರಡುಂ ತೆಱಂ ... ... ೧೦೪
(1) ಪದಾರ್ಥಹೇತುಕಂ ... ... ... ,,
(2) ವಾಕ್ಯಾರ್ಥಹೇತುಕಂ ... ... ... ೧೦೫
೬೦. ಅರ್ಥಾಂತರನ್ಯಾಸಂ, ಎರಡುಂ ತೆಱಂ— ... ... ,,
(1) ಸಾಮಾನ್ಯದಿಂ ವಿಶೇಷಸಮರ್ಥನಂ ... ... ,,
(2) ವಿಶೇಷದಿಂ ಸಾಮಾನ್ಯಸಮರ್ಥನಂ ... ೧೦೬
೬೧. ವಿಕಸ್ವರಾಲಂಕಾರಂ ... ... ... ,,
೬೨. ಪ್ರೌಢೋಕ್ತಿ ... . . ೧೦೭
೬೩. ಸಂಭಾವನೆ ... ... ೧೦೮
೬೪. ಮಿಥ್ಯಾಧ್ಯವಸಿತಿ ... ... ,,
೬೫. ಲಲಿತಾಲಂಕಾರಂ ... ... ... ೧೦೯

೬೬. ಪ್ರಹರ್ಷಣಾಲಂಕಾರಂ, ಮೂಱುಂ ತೆಱಂ ... ... ೧೦೯
೬೭. ವಿಷಾದನಾಲಂಕಾರಂ ... ... ... ೧೧೧
೬೮. ಉಲ್ಲಾಸಾಲಂಕಾರಂ, ನಾಲ್ಕುಂ ತೆಱಂ— ... ೧೧೨
(1) ಗುಣದಿಂ ಗುಣನಿರೂಪಣಂ ... ... ,,
(2) ದೋಷದಿಂ ದೋಷನಿರೂಪಣಂ ... ... ೧೧೩
(3) ಗುಣದಿಂ ದೋಷನಿರೂಪಣಂ ... ... ,,
(4) ದೋಷದಿಂ ಗುಣನಿರೂಪಣಂ ... ೧೧೪
೬೯. ಅವಜ್ಞಾಲಂಕಾರಂ, ಎರಡುಂ ತೆಱಂ— ... ... ,,
(1) ಗುಣದಿಂ ಗುಣವೊಂದದಿರ್ಪುದು ... ... ,,
(2) ದೋಷದಿಂ ದೋಷವಾಗದಿರ್ಪುದು ... ... ೧೧೫
೭೦. ಅನುಜ್ಞಾಲಂಕಾರಂ ... ... ,,
೭೧. ಲೇಶಾಲಂಕಾರಂ ... ... ೧೧೬
೭೨. ಮುದ್ರಾಲಂಕಾರಂ ... ... ... ೧೧೭
೭೩. ರತ್ನಾವಳಿ ... ... ... ,,
೭೪. ತದ್ಗುಣಾಲಂಕಾರಂ ... ... ... ೧೧೮
೭೫. ಪೂರ್ವರೂಪಾಲಂಕಾರಂ, ಎರಡುಂ ತೆಱಂ ... ೧೧೯
೭೬. ಅತದ್ಗುಣಾಲಂಕಾರಂ ... ... ೧೨೦
೭೭. ಅನುಗುಣಾಲಂಕಾರಂ ... ... ... ,,
೭೮. ಮೀಲಿತಾಲಂಕಾರಂ ... ... ... ೧೨೧
೭೯. ಸಾಮಾನ್ಯಾಲಂಕಾರಂ ... ... ೧೨೨
೮೦. ಉನ್ಮೀಲಿತಾಲಂಕಾರಂ } ... ... ... ,,
೮೧. ವಿಶೇಷಕಂ ... } ... ... ... ೧೨೩
೮೨. ಗೂಢೋತ್ತರಾಲಂಕಾರಂ ... ... ,,
೮೩. ಚಿತ್ರೋತ್ತರಾಲಂಕಾರಂ, ಎರಡುಂ ತೆಱಂ— ... ೧೨೪
(1) ಪ್ರಶ್ನೋತ್ತರಂಗಳೇಕಮಾಗಿರ್ಪುದು ... ... ,,
(2) ಪಲವುಂ ಪ್ರಶ್ನಂಗಳ್ಗೊಂದೇ ಉತ್ತರಂ ... ೧೨೫
೮೪. ಸೂಕ್ಷ್ಮಾಲಂಕಾರಂ ... ... ... ,,
೮೫. ಪಿಹಿತಾಲಂಕಾರಂ ... ... ... ೧೨೬
೮೬. ವಾಜೋಕ್ತಿ ... ... ... ೧೨೭
೮೭. ಗೂಢೋಕ್ತಿ ... ... ... ,,

೮೮. ವಿವೃತೋಕ್ತಿ, ಎರಡು ತೆಱಂ— ... ... ೧೨೮
(1) ಕವಿನಿಬದ್ಧವಕ್ತೃಗುಪ್ತಾವಿಷ್ಕರಣಂ ... ... ,,
(2) ಕವಿಗುಪ್ತಾವಿಷ್ಕರಣಂ ... ... ೧೨೯
೮೯. ಯುಕ್ತ್ಯಲಂಕಾರಂ ... ... ... ,,
೯೦. ಲೋಕೋಕ್ತಿ ... ... ... ... ೧೩೦
೯೧. ಛೇಕೋಕ್ತಿ ... ... ೧೩೧
೯೨. ವಕ್ರೋಕ್ತಿ, ಎರಡುಂ ತೆಱಂ— ... ... ,,
(1) ಶ್ಲೇಷದಿಂ ಕಲ್ಪಿಪುದು ... ... ... ,,
(2) ಕಾಕುಸ್ವರದಿಂ ಕಲ್ಪಿಪುದು ... ... ೧೩೨
೯೩. ಸ್ವಭಾವೋಕ್ತಿ ... ... ೧೩೩
೯೪. ಭಾವಿಕಾಲಂಕಾರಂ ... ... ... ,,
೯೫. ಉದಾತ್ತಾಲಂಕಾರಂ, ಎರಡುಂ ತೆಱಂ— ... ೧೩೪
(1) ಋದ್ಧ್ಯುದಾತ್ತಂ ... ... ... ,,
(2) ಚರಿತೋದಾತ್ತಂ ... ... ,,
೯೬. ಅತ್ಯುಕ್ತ್ಯಲಂಕಾರಂ, ಎರಡುಂ ತೆಱಂ— ... ೧೩೫
(1) ಶೌರ್ಯಾತ್ಯುಕ್ತಿ ... ... ... ೧೩೬
(2) ಔದಾರ್ಯಾತ್ಯುಕ್ತಿ ... ... ,,
೯೭. ನಿರುಕ್ತ್ಯಲಂಕಾರಂ ... ... ,,
೯೮. ಪ್ರತಿಷೇಧಾಲಂಕಾರಂ ... ... ೧೩೭
೯೯. ವಿಧ್ಯಲಂಕಾರಂ ... ... ... ೧೩೮
೧೦೦. ಕಾರಣಾಲಂಕಾರಂ, ಎರಡುಂ ತೆಱಂ ... ,,

## —ಚತುರ್ಥ ಪ್ರಕರಣಂ—

ರಸಾಲಂಕಾರಂಗಳ್, ಏೞು :— ... ... ೧೪೦
೧. ರಸವದಲಂಕಾರಂ ... ... ... ೧೪೧
ಒಂದು ರಸಂ ಪೆಱತೊಂದು ರಸಕ್ಕಂಗಮಾಗಿರ್ಪುದು ... ,,
ಒಂದು ರಸಂ ಒಂದು ಭಾವಕ್ಕಂಗವಾಗಿರ್ಪುದು ... ,,
೨. ಪ್ರೇಯೋಲಂಕಾರಂ ... ... ... ೧೪೨
೩. ಊರ್ಜಸ್ವಿ ... ... ,,
೪. ಸಮಾಹಿತಾಲಂಕಾರಂ ... ... ... ೧೪೩

೫. ಭಾವೋದಯಾಲಂಕಾರಂ ... ... ... ೧೪೪
೬. ಭಾವಸಂಧಿ ... ... ... ೧೪೫
೭. ಭಾವಶಬಳತ್ವಂ ... ... ... ... ೧೪೬
ಪ್ರಮಾಣಾಲಂಕಾರಂಗಳ್, ಎಂಟು :—
೮. ಪ್ರತ್ಯಕ್ಷಾಲಂಕಾರಂ ... ... ೧೪೭
೯. ಅನುಮಾನಾಲಂಕಾರಂ ... ... ೧೪೮
೧೦. ಉಪಮಾನಾಲಂಕಾರಂ ... ... ,,
೧೧. ಶಬ್ದಾಲಂಕಾರಂ ... ... ... ೧೪೯
೧೨. ಅರ್ಥಾಪತ್ತ್ಯಲಂಕಾರಂ ... ... ೧೫೦
೧೩. ಅನುಪಲಬ್ಧ್ಯಲಂಕಾರಂ ... ... ೧೫೧
೧೪. ಸಂಭವಾಲಂಕಾರಂ ... ... ... ,,
೧೫. ಐತಿಹ್ಯಾಲಂಕಾರಂ ... ... ... ೧೫೨
ಈ ಅಲಂಕಾರಂಗಳ ಬೆರಕೆ, ಎರಡುಂ ತೆಱಂ :— ... ೧೫೩
೧. ಸಂಸೃಷ್ಟಿ, ಮೂಱುಂ ತೆಱಂ ... ... ,,
೨. ಸಂಕರಂ, ನಾಲ್ಕುಂ ತೆಱಂ— ... ... ೧೫೫
1 ಅಂಗಾಂಗಿಸಂಕರಂ ... ... ,,
2 ಸಮಪ್ರಧಾನಸಂಕರಂ ... ... ೧೫೬
3 ಸಂದಿಗ್ಧಸಂಕರಂ ... ... ೧೫೭
4 ಏಕವಾಚಕಾನುಪ್ರವಿಷ್ಟಸಂಕರಂ ... ೧೫೮—೧೫೯

# ಕರ್ಣಾಟಕ ಕಾವ್ಯಮಂಜರಿ.

## ಅಪ್ರತಿಮವೀರಚರಿತಂ

### ಪ್ರಥಮ ಪ್ರಕರಣಂ

ಕಂ|| ಶ್ರೀವರನಖಿಲಜಗಜ್ಜ |
ನ್ಮಾವನಮುಖ ದಿವ್ಯಲೀಲನಾಶ್ರಿತಸುಲಭಂ ||
ದೇವಂ ಚಿಕದೇವೇಂದ್ರಂ |
ಗಾವಗಮೊಲ್ದೀಗೆ ಸಕಲಸಂಪತ್ತುಗಳಂ ||೧

ಸಿರಿದರನ ಬಗೆಯೊಳೊಗೆದಾ |
ಗಿರಿಶನ ಸಿರದಲ್ಲಿ ನೆಲಸಿ ಸನ್ಮಾರ್ಗದೊಳೇ ||
ಚರಿಸುವ ಚಂದ್ರನ ವಂಶಂ |
ಪರಿಶುದ್ಧತೆವೆತ್ತುನೆಗಳ್ವುದೇನಚ್ಚರಿಯೋ ? ||೨

ಆ ವಂಶದ ತಿಶಯಂಗಳ |
ನಾಮಂ ತಿಳಿದೊರೆವನಲ್ಲಿ ಪುಟ್ಟಿದ ದೊರೆಗಳ್ ||
ದೇವೇಂದ್ರನೆಣೆಗೆ ಸಂದರ್ |
ಗೋವಿಂದನುಮುದಿಸಿವಂದ ನಿರ್ಮೈಯ್ಯಿಂದಂ ||೩||

ಆ ಕೃಷ್ಣವಂಶದೊಳ್ಮನು |
ಜಾಕೃತಿವೆತ್ತೆಸೆವ ರಾಜಧರ್ಮಮೆನಲ್ಕ ||
ಪ್ರಾಕೃತಚರಿತಂ ವೈರಿನಿ |
ರಾಕೃತಿಕೃತಿ ನೆಗಳ್ದನೊಗೆದು ದೊಡದೇವೇಂದ್ರಂ ||೪

ಕಂ॥ ಆ ದೊಡದೇವೇಂದ್ರನೊಳ |
ತ್ಯಾದರದಿಂ ಭವ್ಯಶೀಲನಾಶ್ರಿತಸುಲಭಂ ॥
ಯಾದವಗಿರಿ ನಾರಾಯಣ |
ನಾದಂ ಚಿಕದೇವರಾಯ ವೆಸೆಱೊಳ್ಗವರಂ ॥೫

ಪಿಂತಣ ವಿಕ್ರಮ ನಳದು |
ಷ್ಯಂತಾತ್ಮಜ ರಂತಿದೇವರಂತಪ್ರತಿಮಂ ॥
ತಾಂ ತಳೆದಿಳೆಯುಂ ಧರ್ಮದೊ |
ಳಂತೆಂಬಱ ಗಂಡ ಬಿರುದನಾಂತೆಸೆದಿರ್ಕ್ಕುಂ ॥೬

ಇಂತಪ್ಪ ಚಿಕದೇವಮಹಾರಾಯಂ ಶ್ರೀರಂಗಪಟ್ಟಣದೊಳ್ ರತ್ನಸಿಂಹಾಸನಾರೂಢನಾಗಿ ಸಾಮ್ರಾಜ್ಯಂಗೆಯ್ಯುತ್ತಿರೆ ; ಇವನಾ—

ಕಂ॥ ಪಡುವಣ ಮೂಡಣ ತೆಂಕಣ |
ಗಡಿಗೋಂಟೆಯ ಕಾಪುಗೊಂಡ ಪಡೆವಳರಾಯಾ ॥
ಕಡೆಯ ಕಡಲ್ತಡಿದೊರೆಗಳ |
ಪಡೆಯುಂ ಗೆಲ್ದಪ್ಪಿರ್ನಿಂದೆ ಕಪ್ಪಂಗೊಂಬರ್ ॥೭

ಬಡಗಣ ಗಡಿಗಾಪಿನವರ್ |
ಗುಡುಗಾಡಿಸಿ ಗೋಲಕೊಂಡ ವಿಜಯಾಪುರಮಂ ॥
ಕಡಿದು ಮರಾಟರ ಪಡೆಯುಂ |
ಪೊಡವಿಯ ಬಲ್ಪೊಱೆಯ ನಿಱಿಪಿ ಬಣ್ಣಿಗೆವಡೆವರ್ ॥೮

ಇಂತೆಣ್ದೆಸೆ ಗೆಲ್ದಾಯಾ |
ಅಂತರವಱತಲ್ಲಿ ನಿಲಿಸಿ ನಿಜಸೇವಕರಂ ॥
ಸಂತತಮುಂ ಸಕಲಪ್ರಜೆ |
ಸಂತಸಮಿರ್ಪಂತೆ ಕಾಪುಗೆಯ್ದನುಗೊಳಕುಂ ॥೯

ಈ ತೆಱಮಿರುತೆಡೆಯೆಡೆ ಸಂ |
ಗೀತದ ಸಾಹಿತ್ಯದೊಳ್ಪನಾರಯ್ದದಱಿಂ ॥

ಖ್ಯಾತಿಗೆ ವಂದಪ್ರತಿಮಂ ।
ಪ್ರೀತಿಯೊಳಾದರಿಕುಮಖಿಲ ವಿದ್ವಜ್ಜನಮಂ ॥೧೦

ಅನಿಬರ್ನಲ್ಗಬ್ಬಿಗರೊಳ್ ।
ಮನಿತರಸಾಧಾರಣಾಭಿಮಾನಂ ಬಿಡದಾ ॥
ವನ ನಪ್ರತಿಮಂ ಬಳೆಯಿಕು ।
ಮನುವೆತ್ತ ತಿರುಮಲಾರ್ಯನಂತುಟು ನೆಗಳ್ಗಂ ॥೧೧

ನರಪತಿ ಚಿಕದೇವೇಂದ್ರಂ ।
ಕರೆದೊಲ್ಮೆಯೊಳೊರ್ಮೆ ತಿರುಮಲಾರ್ಯನೊಳೊರೆವಂ ॥
ನಿರವಿಸು ನೀಂ ಕಬ್ಬದ ನುಡಿ ।
ಪುರುಳ್ಗಳೊಳ್ಪಡವಿನಿರವನೆಂದಪ್ರತಿಮಂ ॥೧೨

ತನ್ನ ಸಿರಿ ತನ್ನ ಸೇವಂ ।
ತನ್ನೊಳ್ಗಳೆ ತನ್ನ ಭಾಗ್ಯಮೀ ಚಿಕದೇವೇ ॥
ನ್ದ್ರನ್ನೇಮವಿತ್ತನೆಂದೊಲ ।
ವಿನ್ನಿರವಿಸಿ ತಿರುಮಲಾರ್ಯನುನ್ನತಿವೆತ್ತಂ ॥೧೩

ಅಕ್ಕರಿಗರೆರ್ದೆಗೆ ಸಂತಸ ।
ಮಕ್ಕೆಂದಪ್ರತಿಮವೀರಚರಿತಾಭಿಧೆಯಿಂ ॥
ಸಕ್ಕದದಿಂ ಲಕ್ಕಣಮಂ ।
ಲಕ್ಕಮನೊಳ್ಗನ್ನಡಂಗಳಿಂ ವಿವರಿಸಿದಂ ॥೧೪

ಈ ಯಪ್ರತಿಮವೀರ ಚರಿತವೆಂಬ ಲಂಕಾರ ಗ್ರಂಥದ ನಾಲ್ಕುಂ ಪ್ರಕರಣಂಗಳೊಳರ್ಥಸಂಗ್ರಹಮೆಂತೆನೆ:—

ಕಂ॥ ಕಬ್ಬದ ಲಕ್ಕಣಮಂ ನ ।
ಲ್ಗಬ್ಬಂ ಮುಂತಾದ ಭೇದದಿರವಂ ಬಱಿಕಾ ॥
ಕಬ್ಬದ ನುಡಿಪುರುಳೆರಡಱ ।
ಸಬ್ಬಗುಣಂಗಳುಮನವಱೊಳೊರ್ಮೊದಲುಸಿರ್ದಂ ॥೧೫

ಕಂ|| ರೀತಿಗಳಿರವಿದು ಶಯ್ಯೆಯು ।
ಜಾತಿಯುದಿಂತಿಂತು ಪಾಕವೃತ್ತಿವಿಭೇದಂ ||
ಮಾತಿನ ಮೆಯ್ಸಿರಿದೊಡವುಗ ।
ಳೀ ತೆಱನೆಂದಾ ಬೞಿಕ್ಕೆ ಬಗೆವುಗೆ ಪೇೞ್ದಂ ||೧೬

ಮೀಱುವದನೆಳವದಂಗ ।
ಳ್ತೋಱವವೊಲ್ಪವಣಿದೆಂದು ಬಗೆಯೆ ಬುಧರ್ಕಳ್ ||
ನೂಱುವುರುಳ್ದೊಡವುಗಳಂ ।
ಬೇಱೆನೆ ಬಣ್ಣಿಸಿದನವಱ ಭೇದಂಗಳುಮಂ ||೧೭

ಆ ಬೞಿಕ್ಕೆ

ಇರವಂ ತಿಳಿದು ಪ್ರೊಸಂಬರ್ ।
ನಿರವಿಸಿದಾ ಪತ್ತುಮಯ್ದುವೊಳ್ದೊಡವುಗಳಂ ||
ಬೆರೆಕೆಗಳ ಬಗೆಗಳಯ್ದುಮ ।
ನೊರೆದಂ ಚಿಕದೇವರಾಯನೊಪ್ಪುವ ತೆಱದಿಂ ||೧೮

ಇದಱೊಳ್ ಕಾವ್ಯಲಕ್ಷಣದೊಳ್ ಉತ್ತಮಕಾವ್ಯಮೆಂಬುದು—

"ತದದೋಷೌ ಶಬ್ದಾರ್ಥೌ ಸ
ಗುಣಾವನಲಂಕೃತೀ ಪುನಃ ಕ್ವಾಪಿ ||"

(ವೃತ್ತಿ) ಶ್ಲೇಷಪ್ರಸಾದಾದಿ ಗುಣಂಗಳುಂ, ಪ್ರಾಸಂ ಮೊದಲಾದ ಶಬ್ದಾಲಂಕಾರಂಗಳುಂ, ಉಪಮೋತ್ಪ್ರೇಕ್ಷೆ ಮೊದಲಾದರ್ಥಾಲಂಕಾರಂಗಳುಮುಳ್ಳುದಾಗಿ, ದೋಷಂಗಳನುೞಿಪಪ್ಪ ನುಡಿಯುಂ ಪುರುಳುಂ ಕಬ್ಬಮೆನಿಪ್ಪುದು. ಇದಱೊಳೆತ್ತಾನುಮೊಂದುಬೞಿಯೊಳಲಂಕಾರಮಿಲ್ಲದೊಡಂ ಕೊಱತೆಯಿಲ್ಲ. ಇದು ಉತ್ತಮಮೆಂದುಂ, ಮಧ್ಯಮಮೆಂದುಂ, ಸಾಧಾರಣಮೆಂದುಂ ಮೂಱುಂ ತೆಱನಾಗಿರ್ಕುಂ.

ಅದೆಂತೆನೆ:—

"ಇದಮುತ್ತಮಮತಿಶಯಿನಿ ವ್ಯಂಗ್ಯೇ
ವಾಚ್ಯಾದ್ಧ್ವನಿರ್ಬುಧೈಃ ಕಥಿತಃ ||"

[ವೃತ್ತಿ] ವಾಚ್ಯಾರ್ಥದತ್ತಣಿಂ, ವ್ಯಂಗ್ಯವಾಗಿತೋರ್ಪರ್ಥಂ ವ್ಯಕ್ತವಾಗಿ ಮನೋಹರವಾಗಿರೆ ಯದು ಉತ್ತಮಕಾವ್ಯಮೆನಿಪ್ಪುದು. ಇದರ್ಕೆ ಧ್ವನಿಯೆಂದುಂ ಪೆಸರ್.

ಅದೆಂತೆನೆ :—

ವೃ॥ ಸುಗುಣಂಗಳ್ಪುದಿದೋಜೆಗೊಳ್ದು ಚಿಕದೇವೇಂದ್ರಂ ಕ
ಳಾಕೋವಿದಂ । ತೆಗೆದು ತ್ಸಂಗದೊಳಟ್ಟು ಲೀಲೆ ಮಿಗೆ
ವಕ್ಷೋರಂಗದೊಳ್ಸಾರ್ಚೆ ಸೆ ॥ ಳ್ಳುಗುರ್ಗೆಯ್ತಂ ಪವ
ಣೊಂದೆ ಮೇಳದಿರವಂ ರಾಗೋಚಿತಂ ಗೆಯ್ವಿನಂ । ಸೊಗ
ಸಿಂ ಸೂಳ್ಪಡಿಕುಂ ಕಳಾವತಿ ಕಳಾರಾವಂಗಳಂ ಪಾಂಗಿನಿಂ ॥೧೯

ಮಧ್ಯಮ ಕಾವ್ಯಮೆಂತೆನೆ :—

“ ಅತಾದೃಶಿ ಗುಣೀಭೂತ ವ್ಯಂಗ್ಯಂ
ವ್ಯಂಗ್ಯೇತು ಮಧ್ಯಮಂ ॥ ”

[ವೃತ್ತಿ] ವಾಚ್ಯಾರ್ಥದತ್ತಣಿಂ ವ್ಯಂಗ್ಯಾರ್ಥಮತಿಶಯಿತಮಲ್ಲದಿರೊಡೆ ಮಧ್ಯಮಕಾವ್ಯಂ. ಇದರ್ಕೆ ಗುಣೀಭೂತವ್ಯಂಗ್ಯಮೆಂದುಂ ಪೆಸರ್

ಅದೆಂತೆನೆ:—

ಕಂ॥ ನೀರಕ್ಷೀರಂಗಳನೊ ।
ನ್ದೇ ರೀತಿಯೊಳಱವರಱಿಗೆ ಬೇರ್ಕೆಯ್ದದಱೊಳ್॥
ನೀರಸಮನುೞಿದು ಸಾರಮ ।
ನಾರಯ್ದಱ ರಾಜಹಂಸನೊರ್ವನೆ ಸವಿಗುಂ ॥೨೦

ಸಾಧಾರಣ ಕಾವ್ಯಮೆಂತೆನೆ:—

“ ಶಬ್ದಚಿತ್ರಂ ವಾಚ್ಯಚಿತ್ರ
ಮವ್ಯಂಗ್ಯಂ ತ್ವವರಂಸ್ಮೃತಂ ॥ ”

[ವೃತ್ತಿ] ಅನುಪ್ರಾಸಯಮಕಾದಿ ಶಬ್ದಾಲಂಕಾರಂಗಳುಂ, ಉಪ

ಮೋತ್ಪ್ರೇಕ್ಷಾದ್ಯರ್ಥಾಲಂಕಾರಂಗಳುಮುಳ್ಳೊಡಂ ವ್ಯಂಗ್ಯಾರ್ಥಮಿಲ್ಲದೊಡೆ, ಸಾಧಾರಣ ಕಾವ್ಯಮೆನಿಪುದು.

ಅನುಪ್ರಾಸಪ್ರಧಾನಮೆಂತೆನೆ:—

ಉ॥ ವೃ॥ ಒಂದು ಕಡೆಯೊಳ್ತುರುಕರೊಂದು ಕಡೆಯೊಳ್ಮರಸ
ರೊಂದೆಡೆಯೊಳಾರೆಯರ ಬೃಂದಮುಳವಿಂ ಬೇ | ಱೊಂದು
ಬಱಿಯೊಳ್ತಗುಳರೊಂದಿರವಿನೊಳ್ಕೊಡಗರೊಂದು ಕೆಲ
ದೊಳ್ಮಲೆಯರೊಂದುವೆರೆದೆಲ್ಲರ್ ॥ ಸಂದಣಿಸಿ ಕಾಳಗಕೆ
ಮುಂದುವರಿವನ್ನಮುಧಟಿಂದವಱ ಥಟ್ಟುಗಳ ಪಂದಲೆಗಳಂ
ದಿ | ಗ್ಬೃಂದಬಲಿಯಿತ್ತು ಗೆಲವಿಂದೆ ಚಿಕದೇವನೃಪನು
ದುಮಿಗೆ ಪೆರ್ಜಸಮನೊಂದಿ ಸೊಗವಾಳ್ದಂ ॥೧

ಯಮಕಪ್ರಧಾನಮೆಂತೆನೆ:—

ಕಂ॥ ನೆಲನಚ್ಚರಿಯಂಪಡೆ ಯಂ |
ಡಲೆದಂ ಚಿಕದೇವನಾ ಮರಾಟರ ಪಡೆಯಂ ॥
ಛಲದಿಂ ಕಾಣಿಸಿ ಕಡೆಯಂ |
ತಲೆಗೊಯ್ದಂ ತಱಬಿ ದಾದಜೀಕಾಕಡೆಯಂ ॥೨

ಅರ್ಥಾಲಂಕಾರಪ್ರಧಾನಮೆಂತೆನೆ:—

ವೃ॥ ಒಲೆಯುತೆ ಲೀಲೆಯೊಳ್ಕರಚಮತ್ಕೃತಿಯಿಂ ಚಿಕದೇವ ತಾವಕಾ|
ಸಿ ಲಲನೆ ಸಂಗರಾಂಕಣದೊಳೊಳ್ಜಸವೆಣ್ಪೊಸಗೆಲ್ಲವೆಣ್ಣುಮ॥
ಗ್ಗಲಿಸೆ ಗತಾಗತಕ್ರಮದೆ ಜೈತಜಿ ದಾದಜಿ ಕಾಕಡಾದಿ ದು | ರ್ಲಲಿ
ತ ಮರಾಟರೊಳ್ಪಡೆಯ ಪಂದಲೆಯಿಂ ತಿಱಿಕಲ್ಲನಾಡಿದಳ್ ॥೩

ಇಂತಪ್ಪ ಕಾವ್ಯಂ ಗದ್ಯಮಯಂ, ಪದ್ಯಮಯಂ, ಗದ್ಯಪದ್ಯಮಯಮೆಂದು ಮೂಱುಂ ತೆಱಂ. ಇವಱೊಳ್ ಚಿಕದೇವರಾಜವಂಶಾವಳಿ ಮುಂತಾದುವು ಗದ್ಯಕಾವ್ಯಂಗಳ್; ಚಿಕದೇವರಾಜಶತಕಂ ಮುಂತಾದುವು ಪದ್ಯಕಾವ್ಯಂಗಳ್; ಚಿಕದೇವರಾಜವಿಜಯಂ ಮುಂತಾದುವು ಗದ್ಯ

ಪದ್ಯೋಭಯಾತ್ಮಕವಾದ ಕಾವ್ಯಂಗಳ್ ; ಇದಕ್ಕೆ ಚಂಪುವೆಂದುಂ ವಸ್ತುಕಮೆಂದುಂ ಪೆಸರ್.

ಇಂತಪ್ಪ ಕಾವ್ಯಗುಣಂಗಳ್ ಮೂಱೇ ಸರಿಯೆಂದು ಕಾವ್ಯಪ್ರಕಾಶದೊಳ್ ಮಮ್ಮಟಂ ಪೇೞ್ದಂ ; ಇರ್ಪತ್ತುನಾಲ್ಕೆಂದು ಪ್ರತಾಪರುದ್ರೀಯದೊಳ್ ವಿದ್ಯಾನಾಥಂ ಪೇೞ್ದಂ ; ಇರ್ಪತ್ತುಂ ಗುಣಂಗಳೆಂದಲಂಕಾರಸೂತ್ರದೊಳ್ ವಾಮನಂ ಪೇೞ್ದಂ ; ಈ ಪಕ್ಷಂಗಳೊಳ್ ಓಜಃಪ್ರಸಾದಮಾಧುರ್ಯಂಗಳೆಂಬ ಮೂಱೇ ಗುಣಂಗಳೆಂದೊಡೆ, ಪ್ರಸಿದ್ಧನಾದ ಶ್ಲೇಷಸೌಕುಮಾರ್ಯಾದಿ ಗುಣಂಗಳ್ತೞಿಯದೇ ಪೋಕುಂ ; ಶಬ್ದಾರ್ಥಗುಣಂಗಳಂ ಬೇರ್ಪಡಿಸಿ ಪೇೞದೆ, ಇರ್ಪತ್ತುನಾಲ್ಕುಂ ಗುಣಂಗಳೆಂದೊಡೆ, ವಿವೇಕಂ ತೋಱದು. ಅದಱಿಂ ಶಬ್ದಗುಣಂಗಳ್ ಪತ್ತು ಅರ್ಥಗುಣಂಗಳ್ ಪತ್ತು ಎಂಬ ಪಕ್ಷಮೆ ಲೇಸು.

ಅವಾವುವೆನೆ —

ಸೂತ್ರಂ॥ " ಓಜಃ ಪ್ರಸಾದ ಶ್ಲೇಷ ಸಮತಾ ಸಮಾಧಿ
ಮಾಧುರ್ಯ ಸೌಕುಮಾರ್ಯೋದಾರತಾ
ರ್ಥವ್ಯಕ್ತಿಕಾಂತಯೋ ಬಂಧಗುಣಾಃ ॥ "

೧. ಇವಱೊಳೋಜಸ್ಸೆಂಬುದು :—

" ಪದನ್ಯಾಸಸ್ಯ ಗಾಢತ್ವಂ
ವದಂತ್ಯೋಜಃ ಕವೀಶ್ವರಾಃ ॥ "

[ವೃತ್ತಿ] ಪದಸಂದರ್ಭಂ ಬಿಗುಪಾಗಿರೆ ಯದು ಓಜಸ್ಸೆನಿಪುದು.

ಎಂತೆನೆ:—

ವೃ॥ ಅಳವಿಂದಂ ತಳ್ತು ಪೂರ್ವೋತ್ತರವೆರಡುಂ ಪಕ್ಷಂಗಳೊಳ್ಯು
ಕ್ತಿಜಾಲಂ । ಗಳ ಸಾರಾಸಾರಮಂ ಸೋದಿಸಿ ಕಳೆದದಱೊಳ್ಪೊ
ಟ್ಟನೊಳ್ಗಟ್ಟಿಯುಂ ಕೂ॥ ತೊೞಕೊಂಡಿರ್ಪೊಳ್ಪನಿಂ ತತ್ತ್ವ
ದ ನೆಲೆಯುೞಿತಾ ಮಾರ್ಗದಿಂದತ್ತಲಿತ್ತ । ಲ್ಪೊಳೆದೆತ್ತಂ ಪೋಗ
ದಂತಿರ್ಕೆಳಸುತೆ ಬುಧರಂ ತರ್ಕಿಕುಂ ಚಿಕ್ಕದೇವಂ ॥೨೮

೨. ಪ್ರಸಾದವೆಂಬುದು :—

" ಶ್ಲಥತ್ವಮೋಜಸಾಮಿಶ್ರಂ
ಪ್ರಸಾದಂ ತಂ ಪ್ರಚಕ್ಷತೇ ॥ "

[ವೃತ್ತಿ] ಮುಂ ಪೇಳ್ದೋಜಸ್ಸಿನೊಡನೆ ಕೂಡಿ ಪದಸಂದರ್ಭಂ ಮೆಲ್ಪಿಡಿದಿರೆಯದು ಪ್ರಸಾದಮೆನಿಪ್ಪುದು.

ಎಂತೆನೆ :—

ವೃ॥ ಶ್ರೀಮಂತಂ ಯದುಶೈಲವಲ್ಲಭಪದಾಂಭೋಜಾತಭೃಂಗಂ ಗುಣಾ | ರಾಮಂ ಪಶ್ಚಿಮರಂಗಧಾಮನಗರೀಸಿಂಹಾಸನಾಧೀಶನು ॥ ದ್ದಾಮಶ್ರೀಯದುವಂಶಕಲ್ಪಕತರುಪ್ರಾಥಪ್ರವಾಳಂ ಜಗ | ತ್ಪ್ರೇಮಂ ಬೆತ್ತು ನೆಗಳ್ಗೆ ಬಾಳ್ಗೆ ಚಿಕದೇವೇಂದ್ರಂ ಮಹೀಚಂದ್ರಮಂ ॥೨೫

೩. ಶ್ಲೇಷವೆಂಬುದು :—

" ಮಿಥಸ್ಸಂಶ್ಲಿಷ್ಟಪದತಾ
ಶ್ಲೇಷ ಇತ್ಯಭಿಧೀಯತೇ ॥ "

[ವೃತ್ತಿ] ಪದಂಗಳ್ ಒಡವೆರೆದಿರ್ಪಂದದಿಂದೊಂದೇ ಪದದಂತೆ ತೋರ್ಪಯದು ಶ್ಲೇಷಮೆನಿಪ್ಪುದು.

ವೃ॥ ಗಂಡರಗಂಡನುಕ್ಕುರ್ವರಮಕ್ಕಳಗಂಡನಿದಿರ್ಚೆ ಕೈದು ಕೈ | ಗೊಂಡರಗುಂಡನಾಡಿ ನುಡಿದಪ್ಪುವರಾಯರಗಂಡನಾಹವೋ ॥ ದ್ದಂಡರಗಂಡನೆಂಬ ಪಲವುಂ ಬಿರುದುಂ ಚಿಕದೇವರಾಯನೊಳ್ | ಮಂಡಿತಮಲ್ತೆ ವೊತ್ತು ವೊದಲೊಂದಿದ ಸತ್ಯಪರಾಕ್ರಮಾಂಕದಿಂ ॥೨೬

೪. ಸಮತೆಯೆಂಬುದು :—

" ಅವೈಷಮ್ಯೇಣ ಭಣನಂ
ಸಮತಾ ಸಾ ನಿಗದ್ಯತೇ ॥ "

[ವೃತ್ತಿ] ನಾಲ್ಕುಂ ಚರಣಂಗಳುಮೊಂದಕ್ಕೊಂದು ದೊರೆಕೊಂಡಿರೆಯದು ಸಮತ್ವಮೆನಿಪ್ಪುದು.

ಎಂತೆನೆ :—

ವೃ॥ ನೆಗಳ್ವನ್ನಂ ಬಿಡುಗಣ್ಣರನ್ನರಚನಾಸಂಪನ್ನದಿಂ ಜನ್ನದಿಂ ।
ನೆಗಳ್ವನ್ನಂ ದ್ವಿಜರಗ್ರಹಾರಕಲನಾಸನ್ಮಾನದಿಂ ದಾನದಿಂ ॥
ನೆಗಳ್ವನ್ನಂ ಪ್ರಜೆಗಳ್ ಸ್ವಜಾತ್ಯುಚಿತತತ್ತದ್ಧರ್ಮದಿಂ ಶರ್ಮದಿಂ ।
ನೆಗಳ್ದಂ ಶ್ರೀಚಿಕದೇವರಾಯನಿಳೆಯೊಳ್ಸಾಮ್ರಾಜ್ಯದಿಂ
ಪ್ರಾಜ್ಯದಿಂ ॥೧೭

೫. ಸಮಾಧಿಯೆಂಬುದು :—

"ಆರೋಹಂತ್ಯವರೋಹಂತಿ ।
ಕ್ರಮೇಣ ಮತಯೋ ಹಿ ಯತ್ ॥
ಸಮಾಧಿರ್ನಾಮ ಸಗುಣಃ ।
ಪ್ರೋತಾ ತೇನ ಸರಸ್ವತೀ ॥"

[ವೃತ್ತಿ] ಸಂದರ್ಭದೊಳ್ ಕ್ರಮದಿಂ ಬಿಗುಪೇಱು ಬರ್ಪುದುಂ, ಕ್ರಮದಿಂದಿಳಿತರ್ಪ್ಪುದುಂ, ಸಮಾಧಿಯೆನಿಪ್ಪುದು.

ಎಂತೆನೆ:—

ವೃ॥ ಆನಂದೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ ।
ಸೇನಾಚಕ್ರವಿಮರ್ದಿತಾಹಿತಮಹೀಚಕ್ರಂಗೆ ವೈಕುಂಠನ ॥
ನ್ಯೂನೋಪಾಯವಿಕುಂಠಿತಾರಿಧರಣೀಭೃದ್ದುರ್ಗವರ್ಗಂಗೆ ಲ ।
ಕ್ಷ್ಮೀನಾರಾಯಣನೀವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮಂ ॥

೬. ಮಾಧುರ್ಯಮೆಂಬುದು:—

"ಯತ್ಪೃಥಕ್ಪದತಾ ವಾಕ್ಯೇ
ತನ್ಮಾಧುರ್ಯಂ ಪ್ರಕೀರ್ತ್ಯತೇ ॥"

(ವೃತ್ತಿ) ಪದಂಗಳ್ ಕಿಱುಕಿಱಿದಾಗಿ ಯುಂದಮಾಗಿರೆ ಮಾಧುರ್ಯಮೆನಿಪುದು.

ಎಂತೆನೆ:—

ವೃ|| ನೆವಮಿನಿತಿಲ್ಲದೊಲ್ದು ಮೊಸೆಗುಂ ನೆನೆಗುಂ ಬರಿಕುಂ ದ
ಯಾರಸಂ | ಕವಿತರೆ ನಿಟ್ಟಕುಂ ನಲಿಗುಮಾದರಿಕುಂ
ಮನವಾರೆ ಮನ್ನಿಕುಂ || ಸವಿನುಡಿದೋಱುಗುಂ ತಿರುಮ
ಲಾರ್ಯನೊಳಪ್ರತಿಮಪ್ರಭಾವದಿಂ | ದವನಿಯನಾಳ್ಗೆ ಬಾ
ಳ್ಗೆ ಸತತಂ ಚಿಕದೇವನರೇಂದ್ರಚಂದ್ರಮಂ ||೨೯

೨. ಸೌಕುಮಾರ್ಯಮೆಂಬುದು:—

" ಸುಕುಮಾರಾಕ್ಷರಪ್ರಾಯಂ
ಸೌಕುಮಾರ್ಯಂ ತದುಚ್ಯತೇ || "

(ವೃತ್ತಿ) ಅನುಸ್ವಾರದೊಡಗೂಡಿ ಮೆಲ್ಪಿಡಿದಕ್ಷರಂಗಳಿರೆ ಸೌಕುಮಾರ್ಯಮೆನಿಪುದು.

ಎಂತೆನೆ :—

ಲ|| ವೃ|| ಅಂದಿವನಿನಳ್ಕಿ ಭಯದಿಂದೆ ಮಣಿದಿರ್ದ ನೃಪಪ್ಪುಂದಮ
ನಿತುಂ ಭರದೊಳೊಂದು ವೆರದೊಳ್ಪಿಂ | ಸಂದಿಸಿ ಸಿವಾಜಿ
ಗನುವಿಂದೊರೆದು ಮರ್ಮಮನವಂದಿರೊಡಗೂಡಿ ಯವನಂ
ದು ಕವಡಿಂದಂ || ಸಂದಣಿಯ ಕಾಳಗದೊಳೊಂದಿನಿಸು
ಮುಂಬರಿಯೆ ಬಂದೆಱಗಿ ಪಾವುಗಳ ಗೊಂದಣದೆ ವಿಷ್ಣು|
ಸ್ಯಂದನದ ಮಾಟ್ಕೆಯೊಳೆ ಕೊಂದು ಕೊಲೆಯಾಡಿದಳ
ವಿಂದೆ ಚಿಕದೇವ ನೃಪನಿಂದು ಸೊಗವಾಳ್ಗಂ ||೩೦

೪. ಉದಾರತೆಯೆಂಬುದು :—

" ವಿಕಟತ್ವಂ ಹಿ ಬನ್ಧಸ್ಯ
ಕಥಯನ್ತ್ಯುದಾರತಾಂ ||

ನೃತ್ಯನ್ತೀವ ಪದಾನೀತಿ
ಭವೇದ್ಯತ್ರ ಹಿ ವರ್ಣನಾ ॥"

[ವೃತ್ತಿ] ಸಂದರ್ಭದೊಳ್ ಪದಂಗಳ್ ನಲಿದಾಡುವಂತೆ ತೋಱ್ಪ ಯಾದಾರ್ಯಮೆನಿಪುದು.

ಎಂತೆನೆ:—

ವೃ॥ ತೆಗೆತೆಗೆದೀಂಟಯೀಂಟ ಕಿವಿಸೇರೆಗಳಂ ಸವಿಗಬ್ಬಗಬ್ಬದಿಂ । ಮಗಮಗಿಸುತ್ತೆ ಪಾಯ್ವ ರಸದಿಂಚರಿಯಂ ಸವಿವನ್ನೆಗಂ ಕರಂ ॥ ಮೊಗಸಿರಿ ದೋಱ್ಪ ಮೀಱ್ಪ ನವಿರುಂ ಸೆರೆಗಳ್ಬಗುಪೇಱ್ಪ ಗದ್ಗದಂ । ಮಿಗೆ ಯುಗೆಯಾಲಿನೀರ್ನೆಱ್ಪ ಸೊಗಂ ಬಡೆಗುಂ ಚಿಕದೇವಭೂವರಂ ॥೩೧

೯. ಅರ್ಥವ್ಯಕ್ತಿಯೆನೆ:—

" ಪಶ್ಚಾದಿವ ಗತಿರ್ವಾಚಾಂ ।
ಪುರಸ್ತಾದಿವ ವಸ್ತುನಃ ॥
ಯತ್ರಾರ್ಥವ್ಯಕ್ತಿಹೇತುತ್ವಾ ।
ತ್ಸೋರ್ಥವ್ಯಕ್ತಿಸ್ಸ್ಮೃತೋಗುಣಃ ॥"

[ವೃತ್ತಿ] ಪದಮಂ ಕೇಳ್ದಾಗಳೆ ಯರ್ಥಂ ತೋಱುವರೆ, ಅರ್ಥವ್ಯಕ್ತಿಯೆನಿಪುದು.

ಎಂತೆನೆ:—

ವೃ॥ ಚದುರಂ ಚಾಗಿ ಯಲಂಪುಗಾಣನೆಱೆಯಂ ಸಂಗೀತಸಾಹಿತ್ಯಕೋ । ವಿದನುತ್ಸಾಹಿ ವಿವೇಕಶಾಲಿ ನಯಶೀಲಂ ನೇಮಗಾಣ್ಮಂ ಕಲಾ ॥ ವಿದನೊಳ್ಪಾತುಗನೋಜೆಗಾಣನುಚಿತಜ್ಞಂ ಭಾವುಕಂ ಭಾಮಿನೀ । ಹೃದಯಗ್ರಾಹಿ ದಯಾಪಯೋಧಿ ಚಿಕದೇವೇಂದ್ರಂ ಮಹೀಚಂದ್ರಮಂ ॥೩೨

೧೦. ಕಾಂತಿಯೆಂಬುದು:—

" ಅತ್ಯುಜ್ಜ್ವಲತ್ವಂ ಬಂಧಸ್ಯ
ಕಾವ್ಯೇ ಕಾಂತಿರಿತೀಷ್ಯತೆ ‖ "

(ವೃತ್ತಿ) ಪದಸಂದರ್ಭಂ ಪುರಾಣಚ್ಛಾಯೆಯಲ್ಲದೆ ಪೊಗರೇಱಿರೆ ಕಾಂತಿಯೆನಿಪ್ಪುದು.

ಎಂತೆನೆ:—

ವೃ‖ ನಿಗುರಿಸಿ ಗೋಣ್ಗಳಂ ದಿಗಿಭಸಂತತಿ ಸಂತಸಮಿರ್ಪನು
ಮುಹೋ । ರಗಪತಿ ವಿಶ್ರಮಂ ದಳೆದು ಮೆಯ್ಯುಮ್ಮಱಿಮಂ
ತಲೆಯೆತ್ತಿ ಬಾಳ್ವನಂ ‖ ಸೊಗಮಿಡಿದಾಳ್ವನಂ ಕಳೆದು
ಜಿಂ ಜಿಮುರಂ ಕಮಠಂ ಧರಿತ್ರಿಯಂ । ಬಗೆಗೊಳೆ ಬಾಹು
ಪೂರ್ಧದೆಸಕಂ ತಳೆದೈ ಚಿಕದೇವಭೂವರಾ ‖೩೩

ಇಂತಿವು ಪತ್ತುಂ ಶಬ್ದಗುಣಂಗಳ್.

***

ಇನ್ನರ್ಥಗುಣಂಗಳೆಂತೆನೆ:—

ಇವುಂ ಓಜಃಪ್ರಸಾದಾದಿಭೇದಂಗಳಿಂ ಪತ್ತುಂ ತೆಱಂ.

೧ ಇದಱೊಳೋಜಸ್ಸೆಂಬುದು —

ಸೂತ್ರಂ‖ " ಅರ್ಥಸ್ಯ ಪ್ರೌಢಿರೋಜಃ ‖ "

[ವೃತ್ತಿ] ಅರ್ಥದೊಳ್ ಪ್ರೌಢಿಯುಂಟಾಗಿರೆ, ಓಜಸ್ಸೆನಿಪ್ಪುದು.

" ಪದಾರ್ಥೇವಾಕ್ಯರಚನಂ ವಾಕ್ಯಾರ್ಥೇಚಪದಾಭಿಧಾ ।
ಪ್ರೌಢಿರ್ವ್ಯಾಸಸಮಾಸೌಚ ಸಾಭಿಪ್ರಾಯತ್ವಮಸ್ಯಚ ‖ "

ಒಂದು ಪದದೊಳ್ಪೇೞ್ದರ್ಥಮನೊಂದು ವಾಕ್ಯದಿಂ ಪ್ರತಿಪಾದಿಪ್ಪುದೆಂದುಂ, ಒಂದು ವಾಕ್ಯದರ್ಥಮನೊಂದು ಪದದೊಳ್ಪ್ರತಿಪಾದಿಪ್ಪುದೆಂದುಂ, ಪೇೞ್ದರ್ಥಮನೆ ಬಿತ್ತರಿಪ್ಪುದೆಂದುಂ, ಬಿತ್ತರಮಾದರ್ಥಮಂ ಸಂಗ್ರಹಿಸಿ ಪೇೞ್ವುದೆಂದುಂ, ಸಾಭಿಪ್ರಾಯಮಾಗಿ ಪದಂಗಳಂ ಪೇೞ್ವುದೆಂದುಂ, ಐದುಂ ತೆಱಂ.

(1) ಪದಾರ್ಥದೊಳ್ವಾಕ್ಯರಚನಮೆಂತೆನೆ :—

ವೃ॥ ಪವಣಱಿತಾಂತು ಬಾಜಿಸುವಿನಂ ಚಿಕದೇವನ ಬೀಣೆಯಿಂಚ
ರಂ । ಕಿವಿವೊಡೆವೊಕ್ಕು ಪಾಯೆ ಹೃದಯಾಬ್ಜಕೆ ಚೇತ
ನವೃತ್ತಿವೊತ್ತದೊಳ್ ॥ ಕವಿದು ತದಾತ್ಮಭಾವಮನೊ
ಡಂಬಡಲೀ ಸಕಲಪ್ರಪಂಚಮುಂ । ಸವಿದನಿಯಿಂದಮೇ
ಸಮೆದುದೆಂಬ ವಿಕಲ್ಪದೆ ತೋಱ್ಪುದನ್ನೆಗಂ ॥೩೪

ಇದಱೊಳ್ ಕೇಳ್ವನಮೆಂಬರ್ಥದೊಳ್ "ಕಿವಿವೊಡೆವೊಕ್ಕು ಪಾಯೆ ಹೃದಯಾಬ್ಜಕೆ" ಎಂದು ವಾಕ್ಯಮಂ ಪೇೞ್ದುದಱಿಂದಿದು ಪದಾರ್ಥದೊಳ್ವಾಕ್ಯರಚನಂ.

(2) ವಾಕ್ಯಾರ್ಥದೊಳ್ ಪದಾಭಿಧಾನಮೆಂತೆನೆ :—

ಕಂ॥ ಈ ಜಗತಿ ಪಿಂತೆ ಪಲವ್ರುಂ ।
ರಾಜರಿನಾದತ್ತು ರಾಜವತಿ ದಿಟಮೀಗಳ್ ॥
ರಾಜನ್ವತಿಯಾದುದು ರಾ ।
ರಾಜಿಪ ಚಿಕದೇವರಾಜ ರಾಜಾಗ್ರಣಿಯಿಂ ॥೩೫

ಇದಱೊಳ್ ಮುನ್ನಾಳ್ದ ಪಲವ್ರುಂ ರಾಯುರತ್ತಣಿಂದುತ್ತಮನಾದ ರಾಯನಿಂ ಪಾಲಿಸಲ್ಪಡೆಗುಮೆಂಬೀ ವಾಕ್ಯಾರ್ಥದೊಳ್ 'ರಾಜನ್ವತಿ' ಯೆಂಬ ಪದಂ ಪೇೞಲ್ಪಟ್ಟುದಱಿಂದಿದು ವಾಕ್ಯಾರ್ಥದೊಳ್ ಪದರಚನಂ.

(3) ಒಂದರ್ಥಮುಂ ಪೇೞ್ವುದನೇ ಬಿತ್ತರಿಪುದೆಂತೆನೆ :—

ವೃ॥ ಪದಪದದಕ್ಕರಕ್ಕರದ ವಾಕ್ಯದ ವಾಕ್ಯದ ವಿಶ್ರಮಂ ಲಯಂ ।
ಪುದಿದ ಬೆಡಂಗಿನಿಂ ಪುರುಳವಿಚ್ಚಿ ಪಳಚ್ಚನೆ ಮಿಂಚೆ ತೋ
ಱಿತ ॥ ತ್ತದುಚಿತಮಾಗಿ ಸೊಂಪು ಕಳೆ ಪೊಣ್ಮಿಡಿದುಣ್ಮ
ವ ನುಣ್ಚರಂಗಳಿಂ । ದೊದವೆ ರಸಂಗಳೋಜೆವಡೆದೋದು
ಗುಮೀ ಚಿಕದೇವಭೂವರಂ ॥೩೬

ಇದಱೊಳ್ " ಓಜೆವಡೆದೋದುಗುಂ " ಎಂಬರ್ಥಮನೇ ಬಿತ್ತರಿಸಿ ಪೇೞ್ದುದಱಿಂ ವ್ಯಾಸಮೆನಿಪ್ಪುದು.

(4) ಪೇೞ್ದರ್ಥಮಂ ಸಂಗ್ರಹಿಸಿ ಪೇೞ್ವುದೆಂತೆನೆ:—

ವೃ॥ ಮಲೆವರನೊಕ್ಕಲಿಕ್ಕಿ ಗುಡುಗಾಡಿಸಿ ಬೇಡರ ಪಾಳೆಯಂಗಳಂ ।
ತಲೆಗಳ ಕೊಯ್ದು ಕೊಯ್ದು ಜಗದೊಳ್ನೆಗೞ್ದ ಪರ್ಣ ತುರು
ಷ್ಕವೀರರಂ ॥ ಪಲವಗೆ ನಾಡ ಗೌಡವೊರಸರ್ಕಳನಿಕ್ಕಿ ತೆ
ಲುಂಗರೋಜೆಯಂ । ತೊಲಗಿಸಿ ಮರ್ದ್ದಿಸಿತ್ತು ಮಹಿಶೂರ
ಭಟಾಳಿ ಮರಾಟ ಕೋಟಿಯಂ ॥೩೩

(5) ಸಾಭಿಪ್ರಾಯಮೆಂತೆನೆ:—

ವೃ॥ ಡಿಳ್ಳಿಯಕೊಳ್ಳೆಗೊಂಡೆವೆಮಗಿಲ್ಲಿದಿರೆಲ್ಲಿಯುಮೆಂದು ಬಂ
ದವೀ । ಕಳ್ಳಿಯ ಬೇಲಿವಳ್ಳಿಯೊಳಗಳ್ಳಿರಿದಾಡುತೆ ಜಳ್ಳು
ವೋದವೇಂ ॥ ತೆಳ್ಳನೆ ಗೆಯ್ದರೆಂಮನಮಮಾ! ಮಹಿಶೂ
ರವರೆಂಡಿಗೆಂಡಿಗೀ । ತಳ್ಳಿಯನೊಲ್ಲೆವೆಂದು ಪರಿವರ್ ಚಿಕ
ದೇವನೃಪಾ ಮರಾಟಿಗಳ್ ॥೩೪

ಇದಱೊಳ್ " ಮಹಿಶೂರವರ್ " ಎಂಬಿವುಮೊದಲಾದ ಪದಂಗಳ್ ಸಾಭಿಪ್ರಾಯಂಗಳ್.

ಇಂತೋಜಸ್ಸು ಐದುಂ ತೆಱಂ

೨. ಪ್ರಸಾದಮೆನೆ:—

ಸೂತ್ರಂ ॥ " ವೈಮಲ್ಯಂ ಪ್ರಸಾದಃ ॥ "

[ವೃತ್ತಿ] ಪ್ರಕೃತೋಪಯುಕ್ತಮಾದ ವಿಶೇಷಣಂಗಳನೇ ಪೇೞ್ವುದು ಪ್ರಸಾದಂ.

ಎಂತೆನೆ:—

ವೃ॥ ಅರಸಂನೇಹಿಗನೊಲ್ಮೆಗಂ ನೆರವಿಗಂ ಕಾವಂ ಹಿತಂ ತೆತ್ತಿ

ಗಂ | ಸರಸಂ ಮನ್ನಿವನಾವಗಂ ತಿರುಮಲಾರ್ಯಂಗೆಂಬಿನಂ
ಕೋವಿದರ್ || ಪೊರೆದೋತೊಲ್ದೊಡನಾಡಿ ಯೋವಿ ಪ್ರ
ದಿವಿತ್ತ ಚ್ಕತುರ್ಪ ಪೆಂಪೇೞುಗುಂ | ಬಿರುದಂತೆಂಬಱ ಗಂ
ಡನ ಪ್ರತಿಮವೀರಂ ಬಲ್ಲರೊಳ್ಬಲ್ಲಹಂ ||೩೯

೩. ಶ್ಲೇಷ ಮೆಂಬುದು:—

ಸೂತ್ರಂ || "ಘಟನಾ ಶ್ಲೇಷಃ ||"

[ವೃತ್ತಿ] ಒಂದರ್ಥಸಂದರ್ಭಮುಂ ಕೇಳ್ದೊಡೆ ಸಂದೆಯಂ ಪುಟ್ಟ ಪರಿಹರಿಪಂತುಟಲ್ಲದೆ ಕೇಳ್ವಾಗಳೇ ಸಂಗತಮೆನಿಸಿ ತೋಱುವುದು ಶ್ಲೇಷಂ.

ಎಂತೆನೆ:—

ವೃ|| ತೆಪ್ಪನೆ ಬೀಣೆವಾಡದೊಳಗಾಡುವ ವಾಣಿಯ ನೂಪುರ
ಸ್ವರಂ | ಕೊಪ್ಪಿನರಲ್ದೊಡಂಬೆಗೆ ಕಡಂಗುವ ತುಂಬಿಯ
ಬಂಬಲೊಳ್ಸ್ವರಂ || ತಪ್ಪದೆ ಕಯ್ಯೊಳಿರ್ಪ್ಪ ಗಿಳಿವಾತಿನ
ನುಣ್ಚರಮಿಂತಿವೆಲ್ಲಮುಂ | ಮುಪ್ಪುರಿಗೊಂಡವೊಲ್ಮೆಱು
ಗುಮೀ ಚಿಕದೇವನ ಬೀಣೆಯಿಂಚರಂ ||೪೦

೪. (ಅವೈಷಮ್ಯವೆಂಬುದು:—)

ಸೂತ್ರಂ || "ಅವೈಷಮ್ಯಂ ಸಮತಾ ||"

[ವೃತ್ತಿ] ಪೇೞ್ವರ್ಥದೊಳ್ ಕ್ರಮಂ ತಪ್ಪದಿರೆ ಯದು ಸಮತೆಯೆನಿಪುದು.

ಎಂತೆನೆ;—

ವೃ|| ಭಿನಯದ ಬಿತ್ತು ಬಿನ್ನಣದ ಪೆರ್ಮೆಗಳೆ ಬಿಜ್ಜೆಯ ಬೇರ್
ವಿವೇಕದೊ | ಳ್ಗನರನುಗೆಯ್ತದೊತ್ತರದ ದಾಂಗುಡಿ

ನಲ್ಕೆಯ ಮೆಲ್ದಳಿರ್ಜನಾ ॥ ನುಸಯದ ಮೊಗ್ಗು ನನ್ನಿ
ಯಲರಾರ್ಪಿನ ಕಾಯನುವಾತುವಣ್ಣಬಿ । ಣ್ಗೊನೆಯೆನೆ
ಚಿಕ್ಕದೇವನೆಸೆದಂ ಗುಣಸಾಂದ್ರನು ಪೇಂದ್ರವೈಭವಂ ॥೪೧

ಸಮಾಧಿಯೆನೆ:—

ಸೂತ್ರಂ॥ "ಅರ್ಥಸ್ಯ ದೃಷ್ಟಿಸ್ಸಮಾಧಿಃ ॥"

(ವೃತ್ತಿ) ಒಂದಱ ಬಗೆಯನೊಂದರ್ಕ್ಕಾರಿಸಿ ಪೇೞ್ವ ಸಮಾಧಿಯೆನಿಪ್ಪುದು.

ಎಂತೆನೆ:—

ಕಂ॥ ಕೂಡಿಸಿ ದವದೊಳ್ದಾವವು ।
ಸೇಡಿಸಿ ನೀರ್ವುಗಿಸಿ ಬಾಡಬಾನಲವಂ ಬೆ ॥
ನ್ನಾಡಿ ಬಿಡದಿನನನೋಡಿಸಿ ।
ಕಾಡಿಸುವಪ್ರತಿಮನೋಜಗೇಂ ದೊರೆ ಜಗದೊಳ್ ॥೪೨

ಇದಱೊಳ್ ಕೂರಾಳ ಬಗೆ ಪೇೞಲ್ಪಟ್ಟುದು.

೬. ಮಾಧುರ್ಯಮೆನೆ:—

ಸೂತ್ರಂ॥ "ಉಕ್ತಿವೈಚಿತ್ರ್ಯಂ ಮಾಧುರ್ಯಂ ॥"

(ವೃತ್ತಿ) ಪ್ರಕೃತಾರ್ಥಮಂ ಪ್ರತಿಪಾದಿಸುವ ನುಡಿ ಪೆಱತೊಂದುಂದವಾಗಿ ವಿಚಿತ್ರಮಾಗಿರೆ ಮಾಧುರ್ಯಮೆನಿಪ್ಪುದು.

ಎಂತೆನೆ:—

ವೃ॥ ಅಂದವಿಗೋಪರ್ಸೈಸೆ ಮರುಳೊಂದಿದರಿಂದು ಲಯಸ್ವರ
ಜ್ಞರಾ । ನಂದದೊಳಟ್ಟು ಬಾಟ್ಟರಮಮಾ ಚಿಕದೇವ
ನ ಕೈಮೆ ಯೆಂತುಟೋ ॥ ಕೆಂದಳಮಿಂದು ಬೀಣೆಯೆಡೆ
ಯಾಡುವುದಲ್ತಿದು ಹೃತ್ಸರೋಜದಾ । ನಂದದ ನಾಡಿ

ಯಂ ತೊನೆವ ಸೋಲಿಸಿ ಗಳ್ಕನೆ ಸೊರ್ಕ್ಕನೇಱುಕುಂ ॥೪೩

ಇದಱೊಳ್ ಶ್ರೀ ಕೃಷ್ಣನ ವೇಣುನಾದದತ್ತಣಿಂ ವೀಣಾನಾದ ಮತಿಶಯಮಾಗಿರ್ಪುದೆಂಬರ್ಥದೊಳ್ "ಕೆಂದಳಂ ಬೀಣೆಯೊಡೆಯಾಡುವುದಲ್ತು, ಹೃದಯಕಮಲದಾನಂದದ ನಾಡಿಯಂ ತೊನೆವುದು" ಎಂಬ ನುಡಿ ವಿಚಿತ್ರಮಾಗಿರ್ಕ್ಕುಂ.

೭. ಸೌಕುಮಾರ್ಯಮೆನೆ :—

ಸೂತ್ರಂ॥ "ಅಪೌರುಷ್ಯಂ ಸೌಕುಮಾರ್ಯಂ ॥"

[ವೃತ್ತಿ] ಬೆಟ್ಟಿತ್ತಾದ ಪುರುಳಂ ಮೆಲ್ನುಡಿಯಿಂದೊರೆಯೆ, ಸೌಕುಮಾರ್ಯಮೆನಿಪುದು.

ಕಂ॥ ಒಂದೊಂದುಂ ದೊರೆತನದೊಳ್ ।
ನಿಂದಿರೆ ಚಿಕದೇವರಾಯನೊಳಗದವರೇಂ ॥
ಕುಂದಿದರೇ ಪಗೆ ದೊರೆಗಳು ।
ಮೊಂದಿದರಾ ಬರ್ದಿಲ ನಾಡ ಬಾೞ್ತೆಯ ಸಿರಿಯಂ ॥೪೪

೮. ಉದಾರತೆಯೆಂಬುದು :—

ಸೂತ್ರಂ ॥ "ಅಗ್ರಾಮ್ಯತ್ವಮುದಾರತಾ ॥"

[ವೃತ್ತಿ] ನಾಣ್ಪುಟ್ಟುವರ್ಥಂಗಳಂ ಮಱೆಗೆಯ್ದು ಗಂಭೀರಮಾಗಿ ಪೇೞ್ವುದೌದಾರ್ಯಮೆನಿಪುದು.

ಎಂತೆನೆ :—

ವೃ॥ ಬಳೆಗಳ್ತೞ್ಗ ಕಡಂಗಿ ರನ್ನಗಡಗಂ ಕೀಲ್ವಿಚೆರ್ ಕೂ
ರ್ಪಾಸದೊಳ್ । ದಳೆಗಳ್ಬೀರ್ಪಡೆ ಕೂಡೆ ಕೀೞ್ತಿದಿರೆ
ಮುಕ್ತಾಹಾರಮೊಳ್ಪ್ವಾಸಿಗಂ ॥ ಕಳಿಪ್ರೊದಾಳ್ದ ಕಟಿಲ್ದ
ಬೀೞ್ ಯುಡೆನೂಲ್ ಪಚ್ಚೊರ್ಬಂದೆ ಪೊನ್ನೀವುರಂ । ಕ
ಳನಾದಂಗೊಳೆ ಪೊಂಗಿ ಸಿಂಗರಮುಯಿಲ್ಗೊಂಡೊಂದು

ವೇಂ ಗೆಲ್ಲಮಂ ॥೪೫

ಇದಱೊಳ್ ಅವಂ ಮುಂಬರಿದು ಎನ್ನಂ ಬರಸೆಳೆಯೆ * *

* * * * * *

ಸೊರ್ಕ್ಕಿ ಸೊಗಂ ಬಡೆವೆನೆಂದು ನಾಣುಱುವ ನುಡಿವ ಪುರುಳಂ ಮಱೆಗೆಯ್ದು ಪೊಸಯಿಸಿ ಪೇೞ್ವುದಱಿಂದೌದಾರ್ಯಮೆನಿಪುದು.

೯. ಅರ್ಥವ್ಯಕ್ತಿಯೆನೆ :—

ಸೂತ್ರಂ ॥ “ ವಸ್ತುಸ್ವಭಾವಸ್ಫುಟತ್ವಮರ್ಥವ್ಯಕ್ತಿಃ ॥ ”

[ವೃತ್ತಿ] ವರ್ಣಿಸುವ ವಸ್ತುವಿನಿರವು ವ್ಯಕ್ತವಾಗಿ ತೋಱೆ, ಅರ್ಥವ್ಯಕ್ತಿಯೆನಿಪುದು.

ವೃ॥ ಮೊಳೆವೆಳದಪ್ಪ ಕೂಡೆ ಕೊನರೇಱುವ ನೀಳ್ದು ಪೊದಳ್ದು
ಪೊಣ್ಮುವ । ಕರ್ಕ್ಕಳಿಸುವ ಕೊಂಕು ಗೊಳ್ವ ಪೊಳೆ
ವೋರಣಂ ಗೊಂಬ ತೊೞಲ್ವ ತೇಲ್ವ ಚಂ ॥ ಚಳಿಸುವ
ಭಾವವಾಂತೆಡೆಗಳೊಳ್ನಲೆ ನಿಲ್ವ ಬೆಡಂಗಿನಿಂದಮೇಂ । ಬ
ಳೆದುವೊ ಬಾಣಿನೋಟದ ವೊಲೀ ಚಿಕದೇವನ ತಾನದೊ
ಳ್ಪುಗಳ್ ॥೪೬

೧೦. ಕಾಂತಿಯೆನೆ :—

ಸೂತ್ರಂ ॥ “ ದೀಪ್ತರಸತ್ವಂ ಕಾಂತಿಃ ॥ ”

[ವೃತ್ತಿ] ಪದ್ಯಮಂ ಕೇಳ್ವಾಗಳೆ ರಸಂ ತೋಱುವರೆ ಕಾಂತಿ ಯೆನಿಪುದು.

ಎಂತೆನೆ:—

ವೃ॥ ನಸುನಸು ನಾಣ್ಚುತೊಂದಿನಿಸು ಬಾಗಿದ ನುಣ್ಮೊಗವೊಂ
ದು ಪಕ್ಕದೊ । ಳ್ಮಸಗಿ ಮಲರ್ದ್ದ ಮಾರ್ಪೊರ್ಗಳೆದು ಬೆಂ
ಗಱು ನೂಂಕಿ ಕಡಂಗಿ ಕೊಂಕುವಾ ॥ ಪೊಸವಗೆ ನೋಟ

ಮಂಡಲಿವ ಮೆಯ್ ನೆಲನಂ ಬರೆ ಪ್ರೋಜೆಯೊಪ್ಪುದೊಳ್ |
ಪೊಸ ಸಿರಿ ಯೊಂದಿ ನಿಂದಳದಿರೊಳ್ ಚಿಕದೇವ ನೃಪಾಲ
ಚಂದ್ರನಾ ||೪೩

ಇಂತಿವು ಪತ್ತುಮರ್ಥಗುಣಂಗಳ್.

ಇದು ಶ್ರೀಮನ್ಮಹಾ ರಾಜಾಧಿರಾಜ ರಾಜ ಪರಮೇಶ್ವರ ಪ್ರೌಢ ಪ್ರತಾಪಾ ಪ್ರತಿಮ ವೀರ ನರಪತಿ ಶ್ರೀ ಚಿಕದೇವ ಮಹಾರಾಜ ಕೃಪಾ ಪರಿಪಾಲಿತ ಶ್ರೀ ತಿರುಮಲಾರ್ಯ ವಿರಚಿತಮಪ್ಪ ಶ್ರೀಮದಪ್ರತಿಮ ವೀರಚರಿತಮೆಂಬಲಂಕಾರ ಗ್ರಂಥದೊಳ್ ಕಾವ್ಯನಿರೂಪಣಾದಿ ಪ್ರಥಮ ಪ್ರಕರಣಂ ಸಂಪೂರ್ಣಂ.

## ದ್ವಿತೀಯ ಪ್ರಕರಣಂ.

ಎರಡನೆಯ ಪ್ರಕರಣದೊಳ್,

೧. ರೀತಿಯೆನೆ :—

“ ರೀತಿರ್ನಾಮ ಗುಣಶ್ಲಿಷ್ಟ
ಪದಸಂಘಟನಾ ಮತಾ ॥ ”

[ವೃತ್ತಿ] ಇಂತಪ್ಪ ಶಬ್ದಾರ್ಥ ಗುಣಂಗಳುಳ್ಳ ಪದರಚನೆ ರೀತಿಯೆನಿಪ್ಪುದು. ಇದುಂ ಪಾಂಚಾಲಿಯೆಂದುಂ, ವೈದರ್ಭಿಯೆಂದುಂ, ಗೌಡಿಯೆಂದುಂ, ಮೂಱುಂ ತೆಱಂ.

(1) ಪಾಂಚಾಲಿಯೆನೆ :—

“ ಮಧುರಾಂ ಸುಕುಮಾರಾಂಚ
ಪಾಂಚಾಲೀಂ ಕವಯೋವಿದುಃ ॥ ”

[ವೃತ್ತಿ] ಅನಿತುಂ ಗುಣಂಗಳ್ ತಕ್ಕ ತಕ್ಕೆಡೆಯೊಳಿರ್ದೊಡೆ, ಮಾಧುರ್ಯ ಸೌಕುಮಾರ್ಯಂಗಳ್ಪೆರ್ಚಿರೆ ಯದು ಪಾಂಚಾಲಿ ಯೆನಿಪ್ಪುದು.

ಎಂತೆನೆ :—

ಕಂ ॥ ಆಯುಮನಭಿಮತನಿಖಿಲ ।
ಶ್ರೇಯಮನೊಡನಖಿಲಧರಣಿಮಂಡಲವಿಜಯ ॥
ಶ್ರೀಯುಂ ಚಿಕದೇವ ಮಹಾ ।
ರಾಯಂಗೊಲ್ದೀಗೆ ಚದುರಗೋವಳರಾಯಂ ॥೧

(2) ವೈದರ್ಭೀ ರೀತಿಯೆಂತೆನೆ :—

“ ಬಂಧಪಾರುಷ್ಯರಹಿತಾ
ಶಬ್ದ ಕಾಠಿನ್ಯವರ್ಜಿತಾ ॥

ನಾತಿದೀರ್ಘ ಸಮಾಸಾ ಚ
ವೈದರ್ಭೀ ರೀತಿರಿಷ್ಯತೇ ॥ ”

[ವೃತ್ತಿ] ಕಠಿನವಾದ ಶಬ್ದಾರ್ಥಂಗಳಲ್ಲದೆ, ಶ್ಲೇಷ ಪ್ರಸಾದ ಗುಣಂಗಳ್ ಪೆರ್ಚ್ಚಿರೆ, ವೈದರ್ಭೀ ರೀತಿ ಯೆನಿಪ್ಪುದು.

ಎಂತೆನೆ :—

ವೃ॥ ಜಗದೊಳ್ ಶ್ರೀ ಚಿಕದೇವನಿಂ ಪಿರಿಯರಿಲ್ಲೆತ್ತಾನು
ಮುಂಟಾದೊಡಂ । ಬಗೆಗೊಳ್ಗಂ ಪಳವಾತಿನೊಳ್ದೊ
ರೆಯುಮಿಲ್ಲೆತ್ತಾನು ಮುಂಟಾದೊಡಂ ॥ ಬಗೆಗೊ
ಳ್ಗಂ ಪ್ರತಿಬಿಂಬದೊಳ್ಮಲಿವರಿಲ್ಲೆತ್ತಾನು ಮುಂಟಾ
ದೊಡಂ । ಬಗೆಗೊಳ್ಗಂ ಪ್ರಣಯಾಪರಾಧವಿಧಿಯೊ
ಳ್ಮಯ್ದೋಱದಿನ್ನೆಲ್ಲಿಯುಂ ॥೨

(3) ಗೌಡೀ ರೀತಿ ಯೆನೆ :—

“ ಓಜಃ ಕಾಂತಿಗುಣೋಪೇತಾ
ಗೌಡೀಯಾ ರೀತಿರಿಷ್ಯತೇ ॥ ”

[ವೃತ್ತಿ] ಅನಿತುಂ ಗುಣಂಗಳುಳ್ಳೊಡಂ ಓಜಃಕಾಂತಿಗಳೆಂಬ ಗುಣಂಗಳ್ಪೆರ್ಚ್ಚಿರೆ ಗೌಡೀರೀತಿ ಯೆನಿಪ್ಪುದು.

ಎಂತೆನೆ:—

ವೃ॥ ಕಟ್ಟ್ಯದ ದಟ್ಟ್ಯ ಕೈದಳೆದ ಪೊಂಗಿಱುಗಟ್ಟ್ಯಗೆ ರನ್ನ ಬಂ
ಡಿ ಗೋ । ಲ್ಬಟ್ಟ್ಯತೆನಿಪ್ಪ ಚೊಲ್ಲೆಯದ ಮಟ್ಟ್ಯಯ ಸೀ
ಸಕ ಮಿಟ್ಟ್ಯನಾಮುದೊ ॥ ಳ್ಬಟ್ಟ್ಯ ಮನಂಗೊಳಲ್ಗರು
ಡಿಗೆಯ್ಮೆಯೊಳೀ ಚಿಕದೇವ ರಾಯನಂ । ನಿಟ್ಟ್ಯಪ ಜಟ್ಟ್ಯ
ಗಳ್ಗರುಡಿ ಗೋವಳ ನೀ ನೃಪನೆಂದು ವಂದಿಪರ್ ॥೩

೨. ಈ ರೀತಿಗಳ್ಗಾಶ್ರಯವಾದ ಪದಸಂದರ್ಭಂ ಶಯ್ಯೆಯೆನಿಪುದು. ಅದೊಂದೇ ತೆಱಂ.

"ಯಾ ಪದಾನಾಂ ಪರಾನ್ಯೋನ್ಯ
ಮೈತ್ರೀ ಶಯ್ಯೇತಿ ಕಥ್ಯತೇ ॥"

[ವೃತ್ತಿ] ಪದಂಗಳೊಂದಕ್ಕೊಂದು ಬೆರೆದು ನುಣ್ಪಾಗಿ ತೋರ್ಪ ಶಯ್ಯೆಯೆನಿಪುದು.

ಎಂತೆನೆ:—

ವೃ॥ ಪೊರೆಗೆಂದುಂ ಚಿಕದೇವರಾಯನಿಳೆಯಂ ಪುಣ್ಯಂ ಪೊದ
ೞ್ದಪ್ಪುದಗ್ರೈ । ಸಿರಿ ನಾಡೊಳ್ನೆಲಸಿರ್ಕೆ ತಕ್ಕರೆಱಕಂ
ದಾಳ್ದರ್ಕೆ ತಂತಂಮೊಳ ॥ ಕ್ಕರಿಗರ್ನೇಹದೊಳೊಂದು
ಗೊಕ್ಕಲಿಗರೊಳ್ಪಂಪಕ್ಕೆ ಮೇಣ್ಶಿಷ್ಟಂಗಳೊಳ್ । ತರದಿಂ
ಮೂವಱಿಯುಕ್ಕೆ ಮಿಕ್ಕು ಪರಿಗಾ ಕಾವೇರಿಯುಂ ಕಾಳ
ದೊಳ್ ॥೪

---

೩. ಅಂದವಾದ ಅರ್ಥಸಂದರ್ಭಂ ಪಾಕವೆನಿಪುದು:—

"ಅರ್ಥಗಂಭೀರಿಮಾ ಪಾಕಃ
ಸ ದ್ವಿಧಾ ಹೃದಯಂಗಮಃ ॥
ದ್ರಾಕ್ಷಾಪಾಕೋ ನಾಳಿಕೇರ
ಪಾಕಶ್ಚ ಪ್ರಸ್ಫುಟಾಂತರಾ ॥"

(1) ದ್ರಾಕ್ಷಾಪಾಕವೆನೆ:—

"ದ್ರಾಕ್ಷಾಪಾಕಸ್ಸ ಕಥಿತೋ
ಬಹಿರಂತಸ್ಸ್ಫುರದ್ರಸಃ ॥"

[ವೃತ್ತಿ] ಅರ್ಥಮುಂ ತಿಳಿವಾಗಳುಂ ತಾತ್ಪರ್ಯಮನೂಹಿಸುವಾಗಳುಂ ಒಂದೇ ಬಗೆಯಾಗಿ ಅಂದವಾಗಿರ್ಪುದಂ.

ಎಂತೆನೆ:—

ವೃ॥ ಕರಕರೆಯೇಕೆ ಸಾಕು ಚಿಕದೇವನೃಪಾಲಕನೊಲ್ಮೆವೆತ್ತನಿ।
ನ್ನರೆ ನೆಱೆ ದಿಂಗಳೊಳ್ ಮದುವೆ ಗೆಯ್ದಪೆನೆಂಬವಳೊ
ಳ್ಪಳಂಚಿಕೆ ॥ ಕ್ಕರಿಸಿದ ನೋಟವೊಂದಿನಿಸು ಕೊಂಕಿ
ದ ಸುಂಕುಗೊರಲ್ಪುಡಿಗೊಂಡ ಪುರ್ಬುಮು ॥ ಬ್ಬರಿಸುವ
ಮಾತುವೊತ್ತರಿಸೆ ಪುಯ್ಯಲ್ಗನಿಸಿಂ ಪೊಸನಾಣನಾಂಕಿದಳ್ ॥೫

(೨) ನಾಳಿಕೇರಪಾಕಮೆನೆ ;—

“ ಸ ನಾಳಿಕೇರಪಾಕ ಸ್ಯಾ
ದಂತರ್ಗೂಢ ರಸೋದಯಃ ॥ ”

[ವೃತ್ತಿ] ಅರ್ಥಂ ಬೆಟ್ಟಿತಾಗಿರ್ದೊಡಂ ತಾತ್ಪರ್ಯಮುಂ ತಿಳಿದಾಗಳಂದವಾಗಿರ್ಪುದಂ.

ಎಂತೆನೆ:—

ವೃ॥ ಒಂದೇ ತಾನ ಮಿಡಿನ್ನಿದರ್ಕ್ಕೆ ಜಗದೊಳ್ಜೋಡಿಲ್ಲವೆಂಬ
ನ್ನಮಾ । ದೊಂದುಂ ಮೀಱುವುದೊಂದು ತಾನಮದು
ಮುಂ ಮತ್ತೊಂದಿದಾ ಮಾನುಷಾ ॥ ನಂದಂ ನೂರ್ಮಡಿ
ಯಾಗಿ ಪೆರ್ಚ್ಚಿ ಪರಮಾನಂದಾಂತಮಾದಂತಿರಾ । ನಂದಂ
ಬಟ್ಟುದು ಬಾಜಿಪಂದು ಚಿಕದೇವಂ ತಾನ ಸಂತಾನಮುಂ ॥೬

ಇದಱೊಳ್ “ ಮಾನುಷಾನಂದಂ ನೂರ್ಮಡಿಯಾಗಿ ಪರಮಾನಂದಮಾದಂತೆ ” ಎಂಬವಾಕ್ಯಾರ್ಥಮುಪನಿಷದರ್ಥಮನೊಳಕೊಂಡಿರ್ಪುದಱಿಂ ತಿಳಿವುದರಿದಾಗಿ ತಿಳಿದ ಬೞಿಕ್ಕೆ ರಸ್ಯಮಾಗಿರ್ಪುದಱಿಂ ನಾಳಿಕೇರಪಾಕಂ.

೪. ಅರ್ಥಸಂದರ್ಭವಿಶೇಷಂಗಳಿಂ ರಸವಿಶೇಷಂಗಳಂ ಪ್ರತಿಪಾದಿಸೆ ವೃತ್ತಿಯೆನಿಪುದು. ಇದು

"ಕೈಶಿಕ್ಯಾರಭಟೀ ಚೈವ
ಸಾತ್ವತೀ ಭಾರತೀ ತಥಾ ॥"

ಎಂದು ನಾಲ್ಕುಂ ತೆಱಂ. ಇವಱೊಳ್

(1) (ಕೈಶಿಕೀ ವೃತ್ತಿಯೆನೆ :—)

"ಸುಕುಮಾರಾರ್ಥಸಂದರ್ಭಾ
ಕೈಶಿಕೀ ವೃತ್ತಿರಿಷ್ಯತೇ॥
ಮೃದೂ ಶೃಂಗಾರಕರುಣೌ
ಯಯಾ ವ್ಯಕ್ತಿಂ ಗಮಿಷ್ಯತಃ ॥"

[ವೃತ್ತಿ] ಮೆಲ್ಪಿಡಿದರ್ಥಸಂದರ್ಭದಿಂ ಮೃದುವಾದ ಶೃಂಗಾರ ಕರುಣ ರಸಂಗಳಂ ಪ್ರತಿಪಾದಿಸೆ ಯದು ಕೈಶಿಕೀ ವೃತ್ತಿಯೆನಿಪುದು.

ಎಂತೆನೆ:—

ಶೃಂಗಾರದೊಳ್

ವೃ॥ ನೆಱೆ ಸೊಗವಾಂತು ಕಂತುನಿಭನೀ ಚಿಕದೇವನರೇಂದ್ರ
ಚಂದ್ರಮಂ । ಪೊಱಮಡೆ ಮಾಡವೇಱಿ ಪುರಯೌವತ
ಮೊಯ್ಯ್ಯರವಾಂತು ನಿಂದು ಮೆ ॥ ಯ್ಮಱಸುತೆ ಕೂರ್ಮೆ
ಯಿರ್ಮಡಿಸೆ ಕೂಂಕುವ ಕೊಂಕುವ ಕೋಱೆನೋಟದಿಂ ।
ನೆಱೆಯಿಪುದೊಪ್ಪನುಪ್ಪಳದ ತಾವರೆಯೋರಣದೋರ
ಣಂಗಳಂ ॥೭

ಕರುಣದೊಳ್

ವೃ॥ ಮೊಲೆಬಿಣ್ಪಿಂ ಬಿದಿಯೇಕೆ ಪಾದತಳದೊಳ್ಕಣ್ಣೀರುಮಂ

ಬಾಯೊಳಂ । ತಲೆವೀ ಪೊೞ್ದುಡೆಪೆಂಪ್ರಮಂ ನಡುವಿನೊ
ಳ್ತಾಂ ಪಲ್ಲಟಂಗೆಯ್ಯನೀ ॥ ನೆಲದೊಳ್ಪೊಂದುವೆ(ವೇವೆ)
ಮೆಂದುೞ್ ಮರಾಟಸಿತ್ರೀಜನಂ ನಿಂದು ಕಾ । ೞ್ಪೊಲದೊ
ಳ್ಬಿಟ್ಟು ಪೊರಳ್ಗುಮಪ್ರತಿಮ ನಿನ್ನಾ ದಾೞಿಯೊಳ್ಗಣ್ಬಿನಂ ॥

(೨) ಭಾರತೀವೃತ್ತಿಯೆನೆ :—

" ಈಷನ್ಮೃದ್ವರ್ಥಸಂದರ್ಭಾ
ಭಾರತೀ ವೃತ್ತಿರಿಷ್ಯತೇ ।
ಯತ್ರೇಷನ್ಮೃದವೋ ಹಾಸ್ಯಾ
ದ್ಭುತಶಾಂತಾಸ್ಸಮಿಂಧತೇ ॥ "

[ವೃತ್ತಿ] ಒಂದಿಷ್ಟು ಮೃದುವಾದ ಸಂದರ್ಭದಿಂ ಹಾಸ್ಯಾದ್ಭುತಶಾಂತರಸಂಗಳಂ ನಿರವಿಸೆ ಯದು ಭಾರತೀ ವೃತ್ತಿ ಯೆನಿಪ್ಪುದು.

ಎಂತೆನೆ :—

ಹಾಸ್ಯದೊಳ್

ವೃ॥ ಎಲೆಗೇ ನಿಲ್ ತಲೆವಾಲದಾಕೆ ಪಲವಣ್ಣಂಗೊಂಡ ನುಣ್ಗ
ಲ್ಲಿದೇ । ನೆಲದೊಳ್ಪುಟ್ಟುಗುಮಾವ ಬೇನೆಗೊಡಲೊಳ್
ತೊಟ್ಟಪ್ಪೆ ನೀನುಟ್ಟ ಪೇ ॥ ಲೆಯೇವಾಳೆಯುದೆಂದು
ಸೋಲಗಿತಿಯುತ್ಕೇಳ್ವನ್ನೆಗಂ ನೊಂದು ಕೋ । ಟಲೆಗೊಂ
ಡಳ್ಕುವರಾಂಧ್ರಿಯರ್ಮಲೆವರೊಳ್ಗಂಡಾ ಭವದ್ಧಾಟಿಯೊಳ್ ॥೯

ಅದ್ಭುತದೊಳ್ :—

ವೃ॥ ವಸುಮತಿ ಪೆತ್ತುದೋ ದೆಸೆಗಳೀಂದುವೊ ನೇಸರುಗುಳ್ದ
ದೋ ಕಡಲ್ । ಮುಸಗಿ ನೆಗೞ್ಚಿತೋ ಮುಗಿಲುದಿರ್ಚಿ
ತೊ ಪೊೞ್ತು ಪೊದೞ್ದು ಸೂಚ್ಚಿತೋ ॥ ಪೊಸಮಿಸಿ

ಯಾಗಸಂ ನೆಲಕುರುಳ್ದತೊ ಪೆರ್ಚ್ಚಿರ್ತು ಪೆರ್ಚ್ಚಿರ್ತೆಂಬಿ
ನಂ । ಪಸರಿಸುವಾ ಮರಾಟಭಟರಂ ಸಧೆದಂ ಚಿಕದೇವ
ಭೂವರಂ ॥೧೦

ಶಾಂತದೊಳ್ :—

ವೃ॥ ಪುಟ್ಟದೆವೇಕೆ ಪುಟ್ಟದೊಡಮಂದಿಗೆ ಪೊಂದದೆ ಪೋದ
ವೇಕೆ ಮೆಯ್ । ಗೆಟ್ಟ ಶಿವಾಜಿ ಶಂಭುಜಿಗನೋಲಗದೊ
ಳ್ಬಗೆದೊಟ್ಟವೇಕೆ ಮೇಣ್ ॥ ಇಟ್ಟವದೇಕೆ ಪಜ್ಜೆಯ
ನಯೋ ! ಮಹಿಶೂರವರೆಲ್ಲಗೆಂದು ಬಾ । ಯ್ವಿಟ್ಟನುಗೆ
ಟ್ಟು ಕಾವಿಯುಡೆಯುಟ್ಟಪರಪ್ರತಿಮಾ ಮರಾಟಗಳ್ ॥೧೧

(3) ಆರಭಟೀ ವೃತ್ತಿ ಯೆಂತೆನೆ :—

" ಅತ್ಯುದ್ಧತಾರ್ಥಸಂದರ್ಭ ।
ವೃತ್ತಿರಾರಭಟೀ ಮತಾ ॥
ಉದ್ಧತೌ ರೌದ್ರಬೀಭತ್ಸೌ ।
ಪ್ರಕಾಶ್ಯೇತೇ ರಸೌ ಯಯಾ ॥ "

[ವೃತ್ತಿ] ಬಿಗುವಾದ ಸಂದರ್ಭದಿಂ ರೌದ್ರಬೀಭತ್ಸಂಗಳಂ ಪ್ರತಿಪಾದಿಸೆ ಯದು ಆರಭಟಯೆನಿಪ್ಪುದು.

ಎಂತೆನೆ :—

ರೌದ್ರದೊಳ್

ವೃ॥ ತೆಱಬುಱುಬಟ್ಟು ಮೆಟ್ಟು ತುಱಿ ಯೀಳ್ಪಡಿ ಪಾಯುಡಗ
ಟ್ಟು ಕುಟ್ಟು ಪೊ । ಯ್ಯೆಱಿ ತೆಱಿ ಕುತ್ತು ಕೆತ್ತು ಪೊಡೆ
ಸೀಳ್ಕಡಿ ಖಂಡಿಸು ನೆರ್ಗ್ಗು ನುರ್ಗ್ಗು ಕೊಯ್ ॥ ಕೊಱಿ
ಮುಱಿಯೆಂದು ನಿನ್ನ ಭಟರಡ್ಡರಿಸಲ್ಬಯದಿಂ ಮರಾಟ

ಗಳ್ । ತೊಱೆದೞಿವಾಪ್ಪರ್ ಕೂರ್ಪರನುೞಿದಿಂ ಪರಿವರ್
ಚಿಕದೇವಭೂವರಾ ॥೧೨

ಬೀಭತ್ಸದೊಳ್ ;—

ಕಂ॥ ಪೊಸ ಊರ ಮುಂದೆ ಮೂಗಱ ।
ದೆಸೆವಂತು ಪರಿಯೆ ಪಿಡಿದು ಪೊತನೆಯೊರ್ವಳ್ ॥
ಬಿಸುನೆತ್ತರೀಂಟೆ ಸಿಂಬಳ ।
ವೊಸವಿರ್ನೆಗಂ ಪೇಸಿ ಮೊಗದೊಳುಗುಳ್ದಳ್ಮಗುೞ್ದಂ॥೧೩

(4) ಸಾತ್ವತೀವೃತ್ತಿಯೆನೆ :—

" ಈಷತ್ಪ್ರೌಢಾರ್ಥಸಂದರ್ಭಾ
ಸಾತ್ವತೀ ವೃತ್ತಿರಿಷ್ಯತೇ ॥
ಯಯಾ ಸ್ಫುಟಂ ಪ್ರಕಾಶ್ಯೇತೇ
ರಸೌ ವೀರಭಯಾನಕೌ ॥ "

[ವೃತ್ತಿ] ಇನಿಸುಂ ಬಿಗುವಾದ ಸಂದರ್ಭದಿಂ ವೀರಭಯಾನಕ ರಸಂಗಳಂ ನಿರವಿಸೆ ಸಾತ್ವತೀ ವೃತ್ತಿಯೆನಿಪುದು,

ಎಂತೆನೆ ;—

ವೀರದೊಳ್ ;—

ವೃ॥ ಶರಧಿಯೊಳೇೞ್ದ ಪೆರ್ದೆರೆಗಳೆರ್ದೆಸೆಯೊಳ್ಕವಿದೊತ್ತಿಮು
ತ್ತನಿ । ಬ್ಬರದೊಳಗಂದು ನುಗ್ಗುರ್ನುಸಿಗೆಯ್ದು
ಪಳಂಚಿದ ಮಂದರಾದ್ರಿವೋಲ್ ॥ ಧರೆಯೊಳಗುಳ್ಳ ಬ
ಲ್ಪೊರೆಗಳೆಲ್ಲರುಮೊಟ್ಟಿನೊಳೇಕವೇಳೆಯೊಳ್ । ಪರಿ
ತರೆ ತೊತ್ತಳಂದುೞಿದನಪ್ರತಿಮಂ ಚಿಕದೇವಭೂವರಂ ॥೧೪

ಭಯಾನಕದೊಳ್ :—

ವೃ॥ ದೇವ ನಿನ್ನ ಧಾಟಿಯೊಳ್ಮರಾಟಗಳ್ಬೆಗುರ್ಬಿನಿಂ । ರಾವು
ರಾವು ಜೀವು ಜೀವು ಗಾವು ಮೀ ತುರುಘ್ಘಾ ಘುರೇ॥ ದೇವು
ದೇವು ಚಾರು ಪಾಯಿ ದೋನುಸಿಂಗ ಘೇವು ಭೇವ್ । ಜೀ
ವು ರಾವುವೆಂಬರಳ್ಕಿ ಚಿಕ್ಕದೇವರಾಯ ಕೇಳ್ ॥೧೪

ಇಂತಿವು ನಾಲ್ಕುಂ ವೃತ್ತಿಗಳೆನಿಪ್ಪುವು.

೫. ಅಲಂಕಾರಂಗಳೆಂದೊಡೆ :—

" ಉಪಕುರ್ವಂತಿ ತಂ ಸಂತಂ
ಯೇಂಗದ್ವಾರೇಣ ಸಂಗತಾಃ ॥
ಹಾರಾದಿವದಲಂಕಾರಾ 10
ಸ್ತೇನುಪ್ರಾಸೋಪಮಾದಯಃ ॥ "

[ವೃತ್ತಿ] ಶಬ್ದಗುಣಂಗಳುಂ ಅರ್ಥಗುಣಂಗಳುಮನುಳ್ಳ ಸುವರ್ಣ್ಣಂ ಕಾವ್ಯಕ್ಕೆ ಶರೀರಮಾಗಿಪ್ಪುದು. ಅದಕ್ಕೆ ಅನುಪ್ರಾಸ ಯಮಕಾದಿ ಶಬ್ದಾಲಂಕಾರಂಗಳ್ ಕಟಕ ಮಕುಟಾದಿ ಭೂಷಣಂಗಳಂತೆ ಪೊಂದಯುವವೊಳಪೊರ್ದ್ದಳ್ಪ ವಡಿಸುಗುಂ. ಉಪಮೋತ್ಪ್ರೇಕ್ಷಾದ್ಯರ್ಥಾಲಂಕಾರಂಗಳ್ ಶೌರ್ಯವೀರ್ಯಾದಿ ಗುಣಂಗಳಂತಂತರಂಗಮಾಗಿಯೊಳ್ಪುವಡಿಕುಂ. 17

ಶಬ್ದಾಲಂಕಾರಮುಂ ಅನುಪ್ರಾಸಮೆಂದುಂ ಯಮಕಮೆಂದುಂ ಎರಡುಂ ತೆಱಂ. ಅದಱೊಳನುಪ್ರಾಸಮುಂ ಛೇಕಾನುಪ್ರಾಸಮೆಂದುಂ ವೃತ್ತ್ಯನುಪ್ರಾಸಮೆಂದುಂ ಎರಡುಂ ತೆಱಂ.

(1) ಛೇಕಾನುಪ್ರಾಸಮೆಂಬುದು :—

" ಭವೇದವ್ಯವಧಾನೇನ
ದ್ವಯೋರ್ವ್ಯಂಜನ ಯುಗ್ಮಯೋಃ ॥
ಆವೃತ್ತಿರ್ಯತ್ರ ಸ ಬುಧೈಃ
ಛೇಕಾನುಪ್ರಾಸ ಇಷ್ಯತೇ ॥ "

[ವೃತ್ತಿ] ಒಂದು ಪದ್ಯದೊಳೆರಡೆರಡುಮಕ್ಕರಂ ಜತೆಜತೆಯಾಗಿ ಪಲವುಂ ಬೞಿಯೊಳ್ಬರೆ ಯದು ಛೇಕಾನುಪ್ರಾಸಮೆನಿಪ್ಪುದು.

ಎಂತೆನೆ:—

ಕಂ॥ ಕಂದಂ ಕವಿಕೋಕಿಲಮಾ ।
ಕಂದಂ ಕೋಮಲವಿಕಾಸಿ ಕೃತಿಕಲ್ಪಲತಾ ॥
ಕಂದಂ ವಿಸ್ಮಯರ ರಸದು ।
ಕ್ಕಂದಂ ಚಿಕದೇವರಾಯಚಂದನ ಚಂದಂ ॥೧೫

ಮತ್ತಮಿಂತು ಜತೆಯಾಗಿರ್ಪಕ್ಕರಂಗಳೊಳ್ ಸ್ವರಂಗಳ್ ಬೇಱೆ ವೇಱೆಯಾಗಿರ್ದೊಡಂ ಅದುವುಂ ಛೇಕಾನುಪ್ರಾಸಮೆನಿಪ್ಪುದು.

ಎಂತೆನೆ:—

ಕಂ॥ ಕೃತಿಪತಿ ಚಿಕದೇವೇಂದ್ರಂ
ಕೃತಿ ಚಿಕದೇವೇಂದ್ರವಿಜಯಮೀ ಕೃತಿವೇೞ್ದಂ ॥
ಕೃತಮತಿಯುವನೊಲ್ಮೆ ಪ್ಪುವೂ
ಕೃತಿವೆತ್ತೊಲೆಸೆವ ಸುಕೃತಿ ತಿರುಮಲೆಯಾರ್ಯಂ ॥೧೬

ಇದಱೊಳ್ ಕೃತಕೃತಿ ಯೆಂಬ ಜತೆಯಕ್ಕರಂಗಳ್ ಅಕಾರಮಿಕಾರಂ ಗಳೆಂಬ ಸ್ವರಂಗಳ್ ಬೇಱಾಗಿರ್ದೊಡಂ ವ್ಯಂಜನಾಕ್ಷರಂಗಳೆರಡುಂ

ಒಂದಾದುದಱಿಂದಿದುಂ ಛೇಕಾನುಪ್ರಾಸಮಾದುದು.

(2) ವೃತ್ಯನುಪ್ರಾಸಮೆಂಬುದು :—

" ಏಕದ್ವಿಪ್ರಭೃತೀನಾಂತು
ವ್ಯಂಜನಾನಾಂ ಯದಾ ಭವೇತ್ ॥
ಪುನರುಕ್ತಿರಸೌ ನಾಮ
ವೃತ್ಯನುಪ್ರಾಸ ಇಷ್ಯತೇ ॥ "

[ವೃತ್ತಿ] ಒಂದಕ್ಕರಮಾದೊಡಮೆರಡಕ್ಕರಮಾದೊಡಂ ಪಲವುಂ ವೇಳೆಯೊಳ್ ಬಳಸಿ ಬರುತ್ತಿರೆ ಯದು ವೃತ್ಯನುಪ್ರಾಸಮೆನಿಪ್ಪುದು.

ಎಂತೆನೆ :—

(ಒಂದಕ್ಕರದೊಳ್)

ವೃ॥ ಅಕ್ಕರವೋದುವಂದೆ ಕುಱುಪಾದುದು ರೂಢಿಯ ಸತ್ಯ
ವಾಕ್ಯಮೂ । ರ್ಮಕ್ಕಳೊಳಾಡುವಂದೆ ಕುಱುಪಾದುದು
ಸಂದ ಪರಾಕ್ರಮಂ ಕರಂ ॥ ತಕ್ಕುದು ಚಿಕ್ಕದೇವವಿಭುಗ
ಗ್ಗದ ಸತ್ಯಪರಾಕ್ರಮಾಂಕಮೇ । ನಕ್ಕುಮೆ ಮಿಕ್ಕ
ಸೊರ್ಕಿನರಮಕ್ಕಳ ಮೊಕ್ಕಳಕಿಂತು ಪೆರ್ಕಳಂ ॥೧೨

ಎರಡಕ್ಕರದೊಳ್

ವೃ॥ ಶರಣಂ ಶ್ರೀಚಿಕದೇವ ನಿನ್ನ ಚರಣಂ ಭೀತರ್ಗೆ ಮತ್ತಂ ಭಯೋ।
ತ್ತರಣಂ ನಿನ್ನ ಪದಾಬ್ಜರೇಣುಭರಣಂ ತಾನೇ ಮಗುೞ್ದಪ್ಪುದು ॥
ತ್ತರಣಂ ತಾವಕದಿವ್ಯನಾಮಕರಣಂ ಮತ್ತಂ ಮಗುೞ್ದಂ ಕುಲೋ।
ದ್ಧರಣಂ ನಿನ್ನನಘಾಂಘ್ರಿದಾಸ್ಯವರಣಂ ಬೇೞ್ಪಲ್ಲಬೇೞಲ್ಲಕೇಳ್॥

(3) ಯಮಕಮೆಂಬುದು :—

" ಯಮಕಂ ಪೌನರುಕ್ತ್ಯೇತು ।
ಸ್ವರವ್ಯಂಜನಯುಗ್ಮಯೋಃ ॥ "

[ವೃತ್ತಿ] ಸ್ವರಭೇದಮಿಲ್ಲದೆ ಪಲವುಮಕ್ಕರಂಗಳ್ ಎರಡುಂ ಪಾದದೊಳಾದೊಡಂ ನಾಲ್ಕುಂ ಪಾದಂಗಳೊಳಾದೊಡಂ ಮಿತಿಯೂದ ತಾಣದೊಳ್ ಬಳಸಿವರೆ ಯದು ಯಮಕಮೆನಿಪ್ಪುದು.

ಎಂತೆನೆ :—

(ನಾಲ್ಕುಂ ಪಾದದೊಳ್)

ಕಂ॥ ಪ್ರಕಟಕಪಟನಾಟಕನಂ ।
ಶಕಲಿಸಿ ದಿಗ್ಬಲಿಯುನಿತ್ತನತಿಖೇಟಕನಂ ॥
ಚಕಿತಜನೋತ್ಪಾಟಕನಂ ।
ಚಿಕದೇವಂ ಜಡಿದು ಜೈಯ್ತಜೀಕಾಟಕನಂ ॥೧೯

ಎರಡುಂ ಪಾದದೊಳ್

ಕಂ॥ ನೆಲನಚ್ಚರಿಯುಂ ಪಡೆಯುಂ ।
ಡಲೆದಂ ಚಿಕದೇವನಾ ಮರಾಟರ ಪಡೆಯುಂ ॥
ಚಲದಿಂ ಕಾಣಿಸಿ ಕಡೆಯುಂ ।
ತಲೆಗೊಯ್ದಂ ತಱುಬಿ ದಾದಜೀ ಕಾಕಡೆಯುಂ ॥೨೦

ಈ ಯಮಕಂ ಪಾದಾದಿಯೊಳಂ ಪಾದಮಧ್ಯದೊಳಂ ಒಳದು.

(ಪಾದಾದಿಯೊಳೆಂತೆನೆ :—)

ಕಂ ॥ ಅಱಿಕಲ್ಗೊಡೆಂದೇ ತಿಳ
ದಱಿಕಲ್ಗೊಡಾಸೆಯುಳದು ಕೃಷ್ಣಪಬಸವರ್ ॥

ಮುಱಿದಬಿರ್ಗುರ್ತುರ್ ಭರದೊಳ್

ಮುಱಿದಬಿರ್ಡುಗಣ್ಣುರೂರ ಪೇರಗುಳಗಳಂ ॥೨೧

ಪಾದಮಧ್ಯದೊಳೆಂತೆನೆ :—

ಕಂ॥ ತಱುಬಿ ಮಹಿಶೂರವರ್ ಪ್ರೊ

ಯ್ದುಱಿವರ್ ಮಹಿಶೂರರೆನಿಸಿ ಮಲೆನಾಡುಗರಂ ॥

ಮುಱಿದೋಡಿ ಕೆಳದಿಯವರುಂ

ಮೆಱೆದರ್ ಕೆಳದಿಯರ ತೆಱದ ಕೆಳೆತನದೊಳ್ಪಂ ॥೨೨

ಇಂತಿವು ಮುಂತಾದವು ಶಬ್ದಾಲಂಕಾರಂಗಳ್.

ಇದು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರಪ್ರೌಢಪ್ರತಾಪಾಪ್ರತಿಮವೀರ ನರಪತಿ ಶ್ರೀಚಿಕದೇವ ಮಹಾರಾಜ ಕೃಪಾಪರಿಪಾಲಿತ ಶ್ರೀ ತಿರುಮಲಾರ್ಯ ವಿರಚಿತಮಪ್ಪ ಶ್ರೀಮದಪ್ರತಿಮವೀರಚರಿತವೆಂಬ ಅಲಂಕಾರಗ್ರಂಥದೊಳ್ ರೀತಿಶಯ್ಯಾದಿ ನಿರೂಪಣಂ ದ್ವಿತೀಯಪ್ರಕರಣಂ ಸಂಪೂರ್ಣ್ಣಂ.

## — ತೃತೀಯ ಪ್ರಕರಣಂ —

ಅರ್ಥಾಲಂಕಾರಂಗಳುಂ ಉಪಮೋತ್ಪ್ರೇಕ್ಷಾದಿಭೇದಂಗಳಿಂ ಪಲವುಂ ತೆಱಂಗಳಾಗಿರ್ಪುವು. ಅವಱೊಳ್,

(೧) ಉಪಮಾಲಂಕಾರಮೆಂಬುದು :—

" ಉಪಮಾ ಯತ್ರ ಸಾದೃಶ್ಯ।
ಲಕ್ಷ್ಮೀರುಲ್ಲಸತಿ ದ್ವಯೋಃ ॥ "

[ವೃತ್ತಿ] ಪ್ರಸ್ತುತವಾದ ವಸ್ತುಗೆ ಪೆಱತೊಂದು ವಸ್ತುವಿನೊಡನೆ ಒಂದು ಧರ್ಮದಿಂ ಸಾದೃಶ್ಯಂ ವ್ಯಕ್ತವಾಗಿ ತೋಱುವುದು ಉಪಮೆಯೆನಿಪುದು.

ಎಂತೆನೆ :—

ಕಂ॥ ತಾಯಂತೆ ಪೊರೆದು ತಂದೆವೊ ।
ಲಾಯತಿಯೊಳ್ ಹಿತಮನೆಣಿಸಿ ಚಿಕದೇವಮಹಾ ॥
ರಾಯಂ ಪ್ರಜೆಯನಿತಂ ನಾ ।
ರಾಯಣನಂತೇೞ್ಗೆವಡಿಸಿಯಾಳ್ಗುಂ ಸೊಗದೊಳ್ ॥೧

1. ಇದಱೊಳ್ 'ಚಿಕದೇವಮಹಾರಾಯಂ' ಎಂದು ಉಪಮೇಯಮುಂ, 'ತಾಯ್ತಂದೆ ನಾರಾಯಣರ್' ಎಂದು ಉಪಮಾನಂಗಳಂ, 'ಪೊರೆದು' 'ಹಿತಮನೆಣಿಸಿ' 'ಏೞ್ಗೆವಡಿಸಿ' ಎಂದು ಸಮಾನಧರ್ಮಂಗಳಂ, 'ಅಂತೆ' 'ವೊಲ್' ಎಂದು ಉಪಮಾವಾಚಕಪದಂಗಳುಮುಂ ಪೇೞ್ದಿರ್ಪುದಱಿಂದಿದು ಪೂರ್ಣೋಪಮಾಲಂಕಾರಮೆನಿಪುದು.

II. ಲುಪ್ತೋಪಮೆಯೆಂಬುದು :—

" ವರ್ಣ್ಯೋಪಮಾನಧರ್ಮಾಣಾಂ ।

ಉಪಮಾವಾಚಕಸ್ಯ ಚ ||
ಏಕದ್ವಿತ್ರ್ಯನುಪಾದಾನಾತ್ |
ಭಿನ್ನಾ ಲುಪ್ತೋಪಮಾಷ್ಟಧಾ || ”

[ವೃತ್ತಿ] ಉಪಮೇಯಂ, ಉಪಮಾನಂ, ಸಮಾನಧರ್ಮ್ಮಂ, ಉಪಮಾವಾಚಕಪದಂ ಎಂಬೀನಾಲ್ಕಱೊಳ್ ಒಂದನಾದೊಡಮೆರಡನಾದೊಡಂ ಮೂಱನಾದೊಡಂ ಪೇೞದಿರೆ ಲುಪ್ತೋಪಮೆಯೆನಿಪ್ಪುದು.

ಅದುಂ (1) ವಾಚಕಲುಪ್ತೆಯೆಂದುಂ, (2) ಧರ್ಮ್ಮಲುಪ್ತೆಯೆಂದುಂ, (3) ಧರ್ಮ್ಮವಾಚಕಲುಪ್ತೆಯೆಂದುಂ, (4) ವಾಚಕೋಪಮೇಯಲುಪ್ತೆಯೆಂದುಂ, (5) ಉಪಮಾನಲುಪ್ತೆಯೆಂದುಂ, (6) ವಾಚಕೋಪಮಾನಲುಪ್ತೆಯೆಂದುಂ, (7) ಧರ್ಮ್ಮೋಪಮಾನಲುಪ್ತೆಯೆಂದುಂ, (8) ಧರ್ಮ್ಮೋಪಮಾನವಾಚಕಲುಪ್ತೆಯೆಂದುಂ ಎಣ್ಟುಂ ತೆಱಂ.

ಇವಱೊಳ್,

(1) ವಾಚಕಲುಪ್ತೆಯೆಂತೆನೆ :—

ಕಂ|| ಪಾರಾವಾರಗಭೀರಂ |
ವಾರಿಧರೋದಾರನಖಿಲಸುಜನಾಧಾರಂ ||
ಧೀರೋದಾತ್ತಗುಣೋತ್ತರ |
ನಾರಯೆ ಚಿಕದೇವರಾಯನತಿರವಿತೇಜಂ ||೭

ಇದಱೊಳ್ ಸಮುದ್ರನಂತೆ ಗಂಭೀರನುಂ, ಕಾಳಮೇಘದಂತೆ ದಾನಶೂರನುಂ ಎಂಬಲ್ಲಿ ಉಪಮಾವಾಚಕಮಾದ ಅಂತೆಯೆಂಬ ನುಡಿ ಇಲ್ಲದುದಱಿಂ ವಾಚಕಲುಪ್ತೆಯಾದುದು.

(2) ಧರ್ಮ್ಮಲುಪ್ತೆಯೆಂತೆನೆ :—

ಕಂ|| ಚಂದ್ರಂಗಿಂದ್ರಂಗೆ ಹರಿ |

ಶ್ಚಂದ್ರಂಗೆಣೆಯೆಂದೊಡಾವಚಂದಂ? ಚಿಕದೇ॥
ವೇಂದ್ರಂಗೆ ಸದ್ಗುಣಾಬ್ಧಿಗು ।
ಪೇಂದ್ರಂಗೆಣೆಯೆಂಬುದೊಂದೆಯುಂದಮೆನಿಕ್ಕುಂ ॥೩

ಇದಱೊಳ್ ಚಂದ್ರೇಂದ್ರ ಹರಿಶ್ಚಂದ್ರರಂ ದೊರೆಗೊಳಸುವೆಡೆಯೊಳಾಹ್ಲಾದಕರತ್ವೈಶ್ವರ್ಯಸತ್ಯವಾಕ್ಯತ್ವಂಗಳೆಂಬ ಸಮಾನಧರ್ಮಂಗಳಂ ಪೇೞದಿರ್ಪುದಱಿಂ ಧರ್ಮಲುಪ್ತೆಯಾದುದು.

(3) ಧರ್ಮವಾಚಕಲುಪ್ತೆಯೆಂತೆನೆ :—

ಕಂ॥ ನೆಱೆವೆಱೆವೊಗದೊಳ್ಪೊಣ್ಮಿಸೆ ।
ಕಿಱುವೆಸರಿವೆಣ್ಣನೊಲ್ದ ಚಿಕದೇವೇಂದ್ರಂ ॥
ಮಿಱುಗುವ ಸೆಯ್ದಲ್ಗಣ್ಣಂ ।
ಮಱೆನೆಯ್ದಲ್ಲೊಳ್ಪಮುಣ್ಮೆ ಮುಚ್ಚಿದಳೊರ್ವಳ್ ॥೪

ಇವಱಲ್ಲಿ, 'ನೆಱೆವೆಱೆವೊಗಂ' ಮುಂತಾದ ಪದಂಗಳೊಳ್ ಕಾಂತ್ಯಾದಿಧರ್ಮಂಗಳುಂ ಅಂತೆವೋಲ್ ಮೊದಲಾದ ವಾಚಕಪದಂಗಳುಮಿಲ್ಲದುದಱಿಂ, ಧರ್ಮವಾಚಕಲುಪ್ತೋಪಮೆಯಾದುದು.

(4) ವಾಚಕೋಪಮೇಯಲುಪ್ತೆಯೆಂತೆನೆ :—

ಕಂ॥ ಅಂದಾತ್ಮಾನಂ ಮಾನುಷ ।
ಮೆಂದು ನರಂಗೆತ್ತು ನಡೆಯೆ ಮಱೆಯಾದುದೆ ತಾಂ? ॥
ಇಂದುಂ ನರಪತಿಗೆತ್ತೊಡ ।
ಮೇಂ? ದಿಟಮಾದಾನವಾರಿ ಚಿಕದೇವೇಂದ್ರಂ ॥೫

ಮುಂ ರಾಮಾವತಾರದೊಳ್ "ಆತ್ಮಾನಂ ಮಾನುಷಂ ಮನ್ಯೇ" ಯೆಂದು ನುಡಿದು ತನ್ನಂ ಮಾನಿಸನಂತೆ ಭಾವಿಸಿ ನಡೆದೊಡಂ ಶಂಭು

ಧನುರ್ಭಂಜನಭಾರ್ಗವನಿಗ್ರಹಣಾದ್ಯತಿಮಾನುಷಚರಿತ್ರಂಗಳಿಂ ಶ್ರೀನಾರಾಯಣನೆಂಬುದೇ ಪ್ರಕಟಮಾದುದು. ಈಗಳೀಚಿಕದೇವರಾಜಾವತಾರದೊಳ್ ತನ್ನಂ ನರಪತಿಯೆಂದೆಣಿಸಿ ನಡೆವೊಡು ದಾನವಾಂಶದಿಂದುದಿಸಿದ ಜೆಯ್ತಾಜಿ ದಾದಜಿ ಹರಜಿ ಶಾಹಜಿ ಶಂಭುಜಿ ಮುಂತಾದ ಮರಾಟರು ಮೂಲೋತ್ಪಾಟನಂಗೆಯ್ದುದಱಿಂದಾನಾರಾಯಣನೆಂಬುದೇ ವ್ಯಕ್ತಮಾದುದೆಂದು ಪದ್ಯಾರ್ಥಂ. 6

ಇದಱೊಳ್ ದುಷ್ಟನಿಗ್ರಹಣಾದಿಧರ್ಮದಿಂ ತನ್ನಂ ನರಪತಿಯುಂ ತೆಣಿಸಿಯೆಂದು ಪೇೞ್ವೆಡೆಯೊಳ್ ತನ್ನನೆಂಬುಪಮೇಯಮುಮಂ ಅಂತೆಯೆಂಬ ವಾಚಕಪದಮುಮಂ ಪೇೞದಿರ್ದುದಱಿಂ ವಾಚಕೋಪಮೇಯಲುಪ್ತಿಯಾದುದು. 10

(5) ಉಪಮಾನಲುಪ್ತಿಯೆಂತೆನೆ :—

ಕಂ|| ಮುನ್ನಂಬುಂ ಪಿನ್ನಂಬಿಂ |
ದನ್ನೀಂ ಕಡಿದುಱಿಪೆ ನಿನಗೆ ಮೊಳ್ಗುವ ಪಗೆಯೊಳ್ ||
ನಿನ್ನಿಸುಗೆಗಳಪ್ರತಿಮಾ |
ತಾನ್ನೆ*ಗೞ್ದವು ನಿನ್ನ ಮುನಿಸುಮರುಕದ ತೆಱದೊಳ್ ||೬

ಕೊಳಗುಳದೊಳೊಂದಂಬಂ ತೊಟ್ಟೊರ್ವನನಿಸುವಿನಂ, ಅವನನಿತಱೊಳ್ಪಡಮುಡುವಿನಂ, ಪೆಱತೊಂದಂಬಿಂ ಮುನ್ನೊತ್ತಟ್ಟಂಬುಂ ಕತ್ತರಿಸುವ ಚಳಕದ ನಿನ್ನಿಸುಗೆಯವನೊಳ್ ಮುಂಪುಟ್ಟಿದ ಕೋಪಮುಂ ಕಡೆ ಗಣ್ಬುವ ಮರುಕದ ಚಳಕದಂತಾದುದೆಂದು ಪದ್ಯಾರ್ಥಂ. 19

ಇದಱೊಳ್ ‘ಇಸುಗೆ’ ಯೆಂಬುಪಮೇಯಮುಮಂ ಮುನ್ನುದಂ ಪಿನ್ನುದತಿಕ್ರಮಿಸುವುದೆಂಬ ಸಮಾನಧರ್ಮಮಂ, ಅಂತೆಯೆಂಬ ವಾಚಕಮುಮಂ ಪೇೞ್ದು ಅಂಬಿನಿಸುಗೆಗಳ್ಗೆ ಉಪಮಾನಮಾದ ಕೋಪಕೃಪೆಗಳ ಚಳಕಂಗಳಂ ಪೇೞದುದಱಿಂದಿದು ಉಪಮಾನಲುಪ್ತಿಯಾದುದು.

(6) ವಾಚಕೋಪಮಾನಲುಪ್ತೆಯೆಂತೆನೆ :—

ಕಂ॥ ಹಾರ್ಮೈಸಿ ಹುದುಗಿ ದಾನದ ।
ಧಾರೆಯಿನಿಳೆವೆತ್ತನಿರ್ಕೆ ಕೈಗತ್ತಿಯು ಕೂ ॥
ರ್ದಾರೆಯ ಬಲ್ಪಿಂ ಪಡೆದಪ ।
ನಾರಯೆ ಚಿಕದೇವರಾಜನಹಿಮಕರಾಜಂ ॥೭

ಇದಱೊಳ್ ಅಹಿಮಕರನೋಜಸ್ಸಿನಂತೋಜಸ್ಸುಳ್ಳಾತನೆಂದು ಪೇೞಲ್ವೇೞ್ಪಲ್ಲಿ, ಓಜೆಯೆಂಬ ಉಪಮೇಯಮುಮಂ ಓಜಸ್ವಿತ್ವಮೆಂಬ ಸಮಾನಧರ್ಮಮುಮಂ ಪೇೞ್ದು, ಉಪಮಾನಮಾದ ಓಜಸ್ಸುಮಂ ಅಂತೆಯೆಂಬ ವಾಚಕಪದಮುಮಂ ಪೇೞದಿರ್ಪುದಱಿಂ, ವಾಚಕೋಪಮಾನಲುಪ್ತೆಯಾದುದು.

(7) ಧರ್ಮೋಪಮಾನಲುಪ್ತೆಯೆಂತೆನೆ :—

ಕಂ॥ ಗಂಡೇೞ್ದಂದೂರಂ ಕೈ ।
ಕೊಂಡಿರೆ ನೀಂ ಕೊಂಗುನಾಡ ಪೆಱಗೋಂಟೆಗಳಂ ॥
ಕೊಂಡುದುದಂ ಕೊನರಿಪ್ಪುದದು ।
ದಂಡಾಪ್ರೊಪಂಬೊಲಲ್ತೆ! ಚಿಕದೇವೇಂದ್ರಾ ॥೮

ಅಂದೂರನಾಕ್ರಮಿಸಿದ ನೀಂ ಪೆಱಗೋಂಟೆಗಳಂ ಕೊಂಡೈಯೆಂದು ಪೇೞ್ವುದು ಕಜ್ಜಾಯಂಗೂಡಿರ್ಪ ಕೋಲನೊರ್ವಂ ನುಂಗಿದನೆಂದುಂ ಬಱಿಕ್ಕೆ ಕಜ್ಜಾಯಂಗಳುಮಂ ನುಂಗಿದನೆಂದುಂ ಪೇೞ್ವಂತತಿಶಯಾವಹಮಲ್ತೆಂದು ಪದ್ಯಾರ್ಥಂ.

ಇದಱೊಳ್ ಅಂದೂರಂ ಪೆಱಗೋಂಟೆಗಳಂ ಕೊಂಡೈ ಎಂಬ ಉಪಮೇಯಮುಮಂ, 'ಪೊಲ್' ಎಂದು ವಾಚಕಪದಮಂ ಪೇೞ್ದು ಕೋಲಂ ಕಜ್ಜಾಯಂಗಳಂ ನುಂಗಿದನೆಂಬ ಉಪಮಾನಮಂ ಕಡುಗೆಯ್ಮೆ ಮೆಲ್ಗೆ

ಯ್ಮೆಗಳೆಂಬ ಸಾಧಾರಣಧರ್ಮಮುಮಂ ಪೇೞದಿರ್ಪುದಱಿಂ ಧರ್ಮೋಪಮಾನಲುಪ್ತೆಯಾದುದು.

(8) ಧರ್ಮೋಪಮಾನವಾಚಕಲುಪ್ತೆಯೆಂತೆನೆ :—

ಕಂ॥ ಪೊಸಹೂರಂ ಮುತ್ತಿದುದಂ ।
ಮಸಗಿ ಮಹೀಶೂರ ಸುಭಟರೆಯ್ದಿದುದಂ ತಾಂ ॥
ಮಿಸುಗುವಿನಂ ಮೂಗರಿದುದ ।
ನೆಸವಂತಂ ಕೋಕಿಲಾಮ್ರಮೆಂದಂ ಮಂದಂ ॥೯

ಇದಱೊಳ್ ಎಸವಂತರಾಮ್ರ ತನ್ನ ಮೂಗು ಪೋದುದುಂ ಕೋಗಿಲೆ ಬರ್ಪುದುಂ ಮಾಂಬಳಂ ಬಿೞ್ದಂತಾಕಸ್ಮಿಕಮಾದುದೆಂಬಲ್ಲಿ ಮೂಗರಿದುದೆಂಬ ಉಪಮೇಯಮಾತ್ರಮುಂ ಪೇೞ್ದು ಇದರ್ಕುಪಮಾನಮಾದ ಆಮ್ರಪತನಮುಂ ಆಕಸ್ಮಿಕಮೆಂಬ ಸಮಾನಧರ್ಮಮುಮಂ ಅಂತೆಯೆಂಬ ವಾಚಕಪದಮುಮಂ ಪೇೞದಿರ್ಪುದಱಿಂ ಧರ್ಮೋಪಮಾನವಾಚಕಲುಪ್ತೆಯಾದುದು.

ಇಂತಿವೆಣ್ಟುಂ ಲುಪ್ತೋಪಮೆಗಳ್.

---

೨. ಅನನ್ವಯಾಲಂಕಾರಮೆಂತೆನೆ :—

“ಏಕಸ್ಯೈವೋಪಮಾನೋಪ
ಮೇಯತ್ವೇಽನನ್ವಯೋ ಮತಃ ॥”

[ವೃತ್ತಿ] ವರ್ಣಿಸುವೊಂದು ವಸ್ತುಗೆ ಉಪಮಾನತ್ವಮುಂ ಉಪಮೇಯತ್ವಮುಮಂ ಪೇೞ್ವುದು ಅನನ್ವಯಾಲಂಕಾರಂ.

ಎಂತೆನೆ :—

ಕಂ॥ ನೆಗೞ್ದೊಂ*ದೊಂದುಂ ಗುಣದೊಳ್ ।
ಮಿಗೆ ಮುನ್ನೀರ್ಪೊನ್ನೆವೆಟ್ಟುಸಸಿನೇಸರ್ಗಳ್॥

ಬಗೆ ಬಗೆಯೊಳ್ಗುಣದೊದವಿಂ ।
ನೆಗೞ್ಗಂ* ಚಿಕದೇವನಂತೆ ಚಿಕದೇವೇಂದ್ರಂ ॥೧೧

---

೩) ಉಪಮೇಯೋಪಮೆಯೆಂತೆನೆ:—

“ಪರ್ಯಾಯೇಣ ದ್ವಯೋಸ್ತಚ್ಚೇ
ದುಪಮೇಯೋಪಮಾ ಮತಾ ॥”

[ವೃತ್ತಿ] ಎರಡುಂ ವಸ್ತುಗಳನೊಂದಕೊಂದನುಪಮಾನಂಗೆಯ್ದು ಪೇೞ್ವುದು ಉಪಮೇಯೋಪಮೆಯೆನಿಪ್ಪುದು.

ಎಂತೆನೆ :—

ಕಂ॥ ಸವನಿಸೆ ನರಪತಿಪದಮೀ ।
ಯವನಿಯ ಪೊೞ್ಗುೞಿಪಿ ಸಲಪ್ಪುವಂ ಚಿಕದೇವಂ ॥
ವಿವರಿಸೆ ಕೃಷ್ಣನುಮಿದಱಿಂ ।
ದಿವನವನಂ ಪೋಲ್ಗುಮವನುಮಿವನಂ ಪೋಲ್ಗುಂ ॥೧೧

---

೪) ಪ್ರತೀಪಾಲಂಕಾರಮಯ್ದುಂ ತೆಱಂ.

(1) “ಪ್ರತೀಪಮುಪಮಾನಸ್ಯೋ
ಪಮೇಯತ್ವಪ್ರಕಲ್ಪನಂ ॥”

[ವೃತ್ತಿ] ಪ್ರಸಿದ್ಧಮಾದುಪಮಾನವಸ್ತುವಂ ಉಪಮೇಯಂಗೆಯ್ದು ಪೇೞ್ವುದು ಪ್ರತೀಪಂ.

ಎಂತೆನೆ :—

ಕಂ॥ ಇಂತಿರ್ಕುಂ ನಳಕೂಬರ ।
ನಿಂತಿರ್ಕುಂ ನಳನುಮಲ್ಲದೊಡೆ ನೆಗೞ್ವರೆ* ಎಂ ॥
ದಿಂತು ಚಿಕದೇವಭೂವರ ।

ನಂ ತಾಂ ತಾಂ ನೋಡುವ್ರೊಳ್ಪುಗಾರ್ತಿಯರೊರೆಗುಂ ॥೧೨

ಮತ್ತಂ, (2) "ಅನ್ಯೋಪಮೇಯಲಾಭೇನ
ವರ್ಣ್ಯಸ್ಯಾನಾದರಶ್ಚ ತತ್ ॥"

[ವೃತ್ತಿ] ಉಪಮಾನವಸ್ತುವಿರ್ಪುದೆಂದುಪಮೇಯವಸ್ತುವಂ ಕಡೆಗಣ್ಚಿ ಪೇಳ್ವುದುಂ ಪ್ರತೀಪಂ.

ಎಂತೆನೆ :—

ಕಂ॥ ಪಳನುಡಿಪಾರ್ವರ್ಗಳುಪ್ಪವ|
ಖಳರಂ ಬೇಗರ್ಗಳೆವೆನೆನಗೆ ದೊರೆಯಿಲ್ಲೆಂದು ॥
ಕರ್ಗಳಪರೆ? ಚಿಕದೇವೇಂದ್ರಾ |
ತಿಳಿವಿನಮಿಂತಲ್ತೆ ಪಳೆಯ ಗರುಡಧ್ವಜನುಂ ॥೧೩

ಮತ್ತಂ, (3) "ವರ್ಣ್ಯೋಪಮೇಯಲಾಭೇನ
ತಥಾನ್ಯಸ್ಯಾಪ್ಯನಾದರಃ ॥"

[ವೃತ್ತಿ] ವರ್ಣಿಸುವವಸ್ತುವಿನತಿಶಯದಿಂದುಪಮಾನವಸ್ತುವಿನೊಳ್ ಅನಾದರಣೆಗೆಯ್ವುದುಂ ಪ್ರತೀಪಂ.

ಎಂತೆನೆ :—

ಕಂ॥ ನೇಸರ್ವೆರ್ಚಿಗಳಿರಾ ನೀ |
ಮೀಸು ದಿನಂ ಬವಣಿಗೊಂಡಿರಿಂ ಪದುಳಮಿರಿಂ ॥
ಭಾಸುರಮೆನಿಪ್ಪುದು ಜಗಮುಂ |
ಲೇಸೆನೆ ಚಿಕದೇವರಾಯನೋಜೆಜಸುಗಳ್ ॥೧೪

ಮತ್ತಂ, (4) "ವರ್ಣ್ಯೇನಾನ್ಯಸ್ಯೋಪಮಾಯಾ
ಅನಿಷ್ಪತ್ತಿವಚಶ್ಚ ತತ್" ॥

[ವೃತ್ತಿ] ವರ್ಣಿಸುವ ವಸ್ತುಗೆ ಉಪಮಾನಮೆನಿಸಿರ್ಪ ವಸ್ತು ಯೋಗ್ಯಮಲ್ತೆಂದು ಪೇಳ್ವುದುಂ ಪ್ರತೀಪಂ.

ಎಂತೆನೆ :—

ಕಂ|| ಒರ್ವನೆ ಪದಿನಾಲ್ಕುಂ ಸಾ |
ಸಿರ್ವರನಾಗೆಲ್ದ ರಾಘವಂ ಚಿಕದೇವಂ ||
ಗೊರ್ವನೆ ಪಲಪಲವ್ರುಂ ಸಾ |
ಸಿರ್ವರುಮಂ ಗೆಲ್ದವಂಗೆ ಸರಿದೊರೆಯೆಂತೋ! ||೧೫

ಇದಱೊಳ್ 'ಎಂತೊ' ಎಂಬುದಱಂ ಯೋಗ್ಯನಲ್ತೆಂದು ತೋರ್ಕುಂ.

ಮತ್ತಂ, (5) "ಪ್ರತೀಪಮುಪಮಾನಸ್ಯ |
ಕೈಮರ್ಥ್ಯಮಪಿ ಮನ್ಯತೇ ||"

[ವೃತ್ತಿ] ವರ್ಣಿಸುವ ವಸ್ತುವಿಂದಮೆ ಬೇಳ್ಪ ಕಜ್ಜಮಪ್ಪುದಱಿಂದೆ ಉಪಮಾನವಸ್ತುವೇತಕ್ಕೆಂದು ಪೇಳ್ವುದುಂ ಪ್ರತೀಪಂ.

ಎಂತೆನೆ :—

ಕಂ|| ಏನೆಮಗಾಬಾಂಬಸುವಿಂ |
ದೇನೆಮಗಾಬಾಂಮುರಂಗಳಿಂ ಬಪ್ಪುದು ಪೇ ||
ೞ್ನೆಲದೊಳೆಮಗೆ ಬೇಳ್ಪುದ |
ನೇನೇನುಮನೀವನೊಲ್ದು ಚಿಕದೇವೇಂದ್ರಂ ||೧೬

ಇಂತಿವಯ್ದುಂ ಪ್ರತೀಪಾಲಂಕಾರಂಗಳ್.

---

೪. ರೂಪಕಾಲಂಕಾರಮಾಱು ತೆಱಂ. ಎಂತೆನೆ :—

"ವಿಷಯ್ಯಭೇದತಾದ್ರೂಪ್ಯ |
ರಂಜನಂ ವಿಷಯಸ್ಯ ಯತ್ ||
ರೂಪಕಂ ತತ್ತ್ರಿಧಾಧಿಕ್ಯ |
ನ್ಯೂನತ್ವಾನುಭಯೋಕ್ತಿಭಿಃ ||"

[ವೃತ್ತಿ] (1) ವರ್ಣಿಸುವ ವಸ್ತುವನುಪಮಾನವಸ್ತುವೆಂದೇ ಪೇೞ್ವುದು ಅಭೇದರೂಪಕಂ (2) ಉಪಮಾನೋಪಮೇಯಂಗಳನೊಂದುಗೊಳಿಸಿ ಪೇೞ್ವುದು, ತಾದ್ರೂಪ್ಯರೂಪಕಂ. ಅಭೇದರೂಪಕಮುಂ ವರ್ಣಿಸುವ ವಸ್ತುವಿಂಗೆ ಉಪಮಾನವಸ್ತುವಿನ ಗುಣಂಗಳಂ ಸರಿಯಾಗಿ ಪೇೞ್, i. ಅನುಭಯಾಭೇದರೂಪಕಮೆಂದುಂ; ಒಂದು ಗುಣಂ ಕಡಮೆಯಾಗಿ ಪೇೞೆ, ii. ನ್ಯೂನಾಭೇದರೂಪಕಮೆಂದುಂ; ಒಂದು ಗುಣಂ ಪೆರ್ಚೆ, iii. ಅಧಿಕಾಭೇದರೂಪಕಮೆಂದುಂ ಮೂಱುಂ ತೆಱಂ. ಇಂತು ತಾದ್ರೂಪ್ಯರೂಪಕಮುಂ i. ಅನುಭಯತಾದ್ರೂಪ್ಯ ರೂಪಕಮೆಂದುಂ, ii. ನ್ಯೂನತಾದ್ರೂಪ್ಯರೂಕಪಮೆಂದುಂ, iii. ಅಧಿಕತಾದ್ರೂಪ್ಯರೂಪಕಮೆಂದುಂ ಮೂಱುಂ ತೆಱಂ.

ಅಂತು ರೂಪಕಮಾಱುಂ ತೆಱನಾಗಿರ್ಕುಂ.

(1) i. ಅನುಭಯಾಭೇದರೂಪಕಮೆಂತೆನೆ :—

ವೃ॥ ಸಂಗೀತಾಂಬುಧಿಪಾರಗರ್ ಪಲರುಮೀತಾನಂಗಳಂ ಬಲ್ಲರೇ? ।
ಮುಂ ಗಂಧರ್ವರುಮಂತೆ ಮೇಣಱಿತೊಡಾಗಾಂಧರ್ವಶಾಸ್ತ್ರಂಗಳೊಳ್॥
ಸಾಂಗಂ ಪೇೞದೆ ಮಾಣ್ಬರೇ ? ನುಡಿವುದೇನಾವೇಣುಗೋಪಾಲಕಂ ।
ಸಂಗೀತಾಮೃತಮೀವೆನೆಂದು ಚಿಕದೇವಾಭಿಖ್ಯೆಯುಂ ತಾಳ್ದಿದಂ ॥೧೭

ii. ನ್ಯೂನಾಭೇದರೂಪಕಮೆಂತೆನೆ :—

ವೃ॥ ಕಡೆಗಣ್ಣೊಳ್ಸರಿ ನಿಲ್ಕೆ ತೋರ್ಕೆ ಗೆರೆಯುಂತಂಗಯ್ಯೊಳಾಚಕ್ರ
ಮುಂ । ಕಡುಸೊಂಪಿಂ ಚಿಕದೇವ ಕಂಬು ಕೊರಲೊಳ್ ಬಿಲ್ಪುರ್ಬಿ
ನೊಳ್ತೋರ್ಕೆಯುಂ ॥ ಪಡೆಗಾಕಾರಮುಮುಳ್ಕೆ ಮಾನುಷಮುಮಿ
ನ್ನೆಂತೆಂತು ನೀಂ ಮಾಂಜೆಯುಂ । ನುಡಿಗುಂ ಸತ್ಯಪರಾಕ್ರಮತ್ವದಿ
ಪ್ರೊಡಬ್ಬಾ ವಿಷ್ಣುವೆಂದೇ ಜಗಂ ॥೧೮

iii. ಅಧಿಕಾಭೇದರೂಪಕಮೆಂತೆನೆ :—

ಕಂ|| ಅಮ*ದುರ್ಗೊಱಲೀಸರಂ ಮೆ |
ಯ್ಯಮ*ರ್ದ ಮರಲ್ವಿಲ್ಲನಿಱಿತವಿಲಿ ತಣ್ಗದಿರಂ ||
ಸಮಸಂದು ಬಾಳ್ವ ಜಗಮುಂ |
ಸಮೆವಲರಿಚನೇೞ್ಗದಾೞ್ಗ ಚಿಕದೇವೇಂದ್ರಂ ||೧೯

(2) i. ಅನುಭಯತಾದ್ರೂಪ್ಯರೂಪಕಮೆಂತೆನೆ :—

ವೃ|| ವಲಿತಾರಾತಿಸಿರಾಂಕುರಪ್ರತಿಸರಾಲಂಕಾರೆ ಸಂಭಿನ್ನಕೃ |
ತ್ತಿಲಸಚ್ಚಿತ್ರಪಟೀಪರೀತೆ ರಿಪುಹೃತ್ಪಂಕೇರುಹೋತ್ತಂಸಮಂ ||
ಜ್ವಳೆ ಸೋಂಪಿಂ ಚಿಕದೇವಖಡ್ಗವಧು ಗಾಢೋತ್ಸಾಹದಿಂ ದುರ್ಹೃದಾ |
ನ್ತ್ರಲತಾಮಾಲೆಯನಿಟ್ಟಳಂದು ಜಯಕಾನ್ತಂಗಾಹವೋದ್ವಾಹದೊಳ್ ||

ii. ನ್ಯೂನತಾದ್ರೂಪ್ಯರೂಪಕಮೆಂತೆನೆ :—

ಕಂ|| ಇದಿರಾಂತ ಸಂಬುಬಸವರ |
ಮದಮೞಿಸಿದನಂದು ಬಾಣಪುರದೊಳುಪೇಂದ್ರಂ ||
† ... ... ... |
ಮೊದಮಿಂದಾವಗೆಯೊಳಂದು ಮನುಜೋಪೇಂದ್ರಂ ||೨೧

iii. ಅಧಿಕತಾದ್ರೂಪ್ಯರೂಪಕಮೆಂತೆನೆ :—

ಕಂ|| ನಾರಾಯಣನಳೆವಾಗಳ್ |
ಧಾರಿಣಿಯಂ ತಳದಿನೊದೆಯೆ ಪೊಣ್ಮಿದ ದುಗುಡಂ ||
ತೀರಲ್ಕಿಂದೀಯಾದವ |
ನಾರಾಯಣನೊಲ್ದು ತಾಳ್ದಿದಂ ನಿಡುದೋಳಂ || ೨೨

ಇಂತಿವಾಱುಂ ರೂಪಕಂಗಳ್.

† ಇಲ್ಲಿ ಪ್ರತಿಗಳಲ್ಲಿ ಗ್ರಂಥಪಾತ.

೫. ಪರಿಣಾಮಾಲಂಕಾರಮೆಂತೆನೆ :—

“ ಪರಿಣಾಮಃ ಕ್ರಿಯಾರ್ಥಶ್ಚೇತ್ |
ವಿಷಯೀ ವಿಷಯಾತ್ಮನಾ ॥ ”

[ವೃತ್ತಿ] ವರ್ಣ್ಣಿಸುವ ವಸ್ತುವನುಪಮಾನವಸ್ತುವೆಂದೇ ದಿಟಂಗೊಳಿಸಿ ಅದಱಿಂದಪ್ಪ ಕಾರ್ಯಮುಮಂ ಪೇೞ್ವುದು ಪರಿಣಾಮಮೆನಿಪ್ಪುದು.

ಎಂತೆನೆ :—

ವೃ॥ ಮುನ್ನೀಂ ಕಟ್ಟದೆ ಮಾಣ್ದರೇ ಕಡೆವ ದಾವಿಂದೆನ್ನನುತಪ್ಪುದೆಂ|
ದೆನ್ನಂ ನುಣ್ಣನೆ ಬೆಣ್ಣೆಗೆತ್ತು ಮನಮಂ ತಾನೀಟ್ದು ಕೊಳ್ವನ್ನೆಗಂ॥
ತನ್ನನ್ನಂ ಚಿಕದೇವರಾಯನಱಿತಳ್ಕದಾರ್ವಿನಿಂ ಕಟ್ಟಿ ತಾ|
ನಿನ್ನುಂ ಕಟ್ಟನೊಳಿರ್ಪನಪ್ರತಿಮ ಗೋಪಾಲಂ ಜಗತ್ಪಾಲಕಂ॥ ೧೩

ಇದಱೊಳ್ ಜಗದೀಶ್ವರನಂ ಕಟ್ಟುಗೊಳಿಸುವ ಕಜ್ಜಂ ಬಱಿದಾಮಿಂ ಕೂಡಿದ ಭಕ್ತಿರೂಪದಿಂ ಪರಿಣತಮಾಗಿ ಕಟ್ಟಲಾಕ್ಕುದು.

---

(೬.) ಉಲ್ಲೇಖಾಲಂಕಾರಮೆರಡುಂ ತೆಱಂ. ಎಂತೆನೆ :—

(1) “ ಬಹುಭಿರ್ಬ್ಬಹುಧೋಲ್ಲೇಖಾತ್ |
ಏಕಸ್ಯೋಲ್ಲೇಖ ಇಷ್ಯತೇ ॥ ”

[ವೃತ್ತಿ] ಒಂದು ವಸ್ತು ಓರೊರ್ವರ್ಗ್ಗೆ ಬೇಱಿವೇಱೆ ತಿಳಿಯೆ ಅದು ಉಲ್ಲೇಖಂ.

ಎಂತೆನೆ :—

ಕಂ॥ ಕಾಮಂ ಕಾನ್ತಾಬೃಂದಕೆ|
ರಾಮಂ ಪ್ರಜೆಗಹಿತಭೂಪರೆರ್ಬೆಗೆ ನೃಸಿಂಹಂ ॥
ಭೂಮಂಡಲಮನಿತರ್ಕಂ|
ಕ್ಷೇಮಂಕರನೆನಿಸಿ ನೆಗೞ್ದ ಚಿಕದೇವೇಂದ್ರಂ ॥ ೧೮

(2) "ಏಕೇನ ಬಹುಧೋಲ್ಲೇಖೇ
ವ್ಯಸೌ ವಿಷಯಭೇದತಃ ॥"

[ವೃತ್ತಿ] ಒಂದು ವಸ್ತುವಂ ಒರ್ವನೆ ವಿಷಯಭೇದದಿಂ ಬೇಱೆವೇಱೆ ನಿರವಿಸೆಯುದುವುಂ ಉಲ್ಲೇಖಂ.

ಎಂತೆನೆ :—

ವೃ॥ ಒಡಲೊಳ್ಪುತ್ತ್ರವನಾವ ವಸ್ತುವನಹೀಂದ್ರಂ ಕಂದದೊಳ್ತಾರ್ಕ್ಷ್ಯನುಂ।ನಡುವಟ್ಟೊಳ್ಪಗಲಾಣ್ಮನೆಟ್ದ ತೆವರೊಳ್ಮುನ್ನೀರ್ಸುರರ್ ಮೌಳಿಯೊಳ್ ॥ ಪೊಡೆಯೊಳ್ದೇವಕಿ ಗೋಪಿ ಸೋಗಿಲೆಡೆಯೊಳ್ ನಂದಂ ನಿಜೋತ್ಸಂಗದೊಳ್ । ತೊಡರ್ದರ್ಕಾವರವಸ್ತು ಕೂರ್ತು ಚಿಕದೇವೇಂದ್ರಕ್ಷಮಾಪಾಲನಂ ॥೨೫

---

"ಸ್ಯಾತ್ಸ್ಮೃತಿಭ್ರಾಂತಿಸಂದೇಹೈಃ
ತದಂಕಾಲಂಕೃತಿತ್ರಯಂ ॥"

[ವೃತ್ತಿ] ಒಂದು ವಸ್ತುವಂ ಬಣ್ಣಿಸುವಾಗಳ್ ಪೆಱತೊಂದು ವಸ್ತುವಂ ನೆನೆವುದು, ೮. ಸ್ಮೃತಿಮದಲಂಕಾರಂ ಎಂದುಂ ; ಒಂದು ವಸ್ತುವಂ ಪೆಱತೊಂದು ವಸ್ತುವೆಂದು ಭ್ರಮಿಸುವುದು, ೯. ಭ್ರಾಂತಿಮದಲಂಕಾರಂ ಎಂದುಂ; ವರ್ಣಿಸುವ ವಸ್ತುವಿನೊಳ್ ಇದೋ, ಅದೋ, ಎಂದು ಸಂದೆಯಂಬಡುವುದು, ೧೦. ಸಂದೇಹಾಲಂಕಾರಂ ಎಂದುಂ, ಮೂಱುಂ ಅಲಂಕಾರಂಗಳ್. ಇವಱೊಳ್,

(೮.) ಸ್ಮೃತಿಮದಲಂಕಾರಮೆಂತೆನೆ :—

ವೃ॥ ಮಲೆತಿದಿರಾಂತು ನಿಲ್ವ ಚಿಕದೇವನ ಚೆಲ್ವಿಕೆಗೊಂಡ ತಾಣಕಂ । ಕಲೆದಳೆದೊಳ್ಮೊಗಂ ‡ ಕದಡದೆೞ್ಱೊಳೊಚ್ಚತವಿರ್ಪ ದಿಟ್ಟ ಪೊಂ॥

---

‡ ಕದುಬದೆೞ್. ಗ॥

ಬಲಗೆಯ ಸಾರ್ಬ್ಬಿದಂತೆವೊಲಿದಿರ್ಚಿದ ಪೇರೆರ್ದೆಯಿಂ ನಿರೂಪಕರ್ ।
ಬಲಿಯಿಸಿ ಚಿತ್ತದೊಳ್ಬಗೆವರಾಮಧುರಾಪುರಮಲ್ಲಲೀಲೆಯಿಂ ॥೨೬

(೯.) ಭ್ರಾಂತಿಮದಲಂಕಾರಮೆಂತೆನೆ :—

ವೃ॥ಅಳಗಳ್ತಾವರೆಗೆತ್ತು ಮುತ್ತೆ ಮೊಗಮಂ *ಬೆರ್ಚುತ್ತಮಂ ತಮ್ಮ ಕೈ।
ದಳದಿಂ ಸೋವೆ ಪಿಕಂ ಕುಟುಂಕೆ ತಳಿರ್ಗೆತ್ತಾ ಕೈಗಳಂ ಮತ್ತಮಾ॥
ಕುಳೆಯುರ್ಕ್ಕಿಗಿಡೆ ಕಾಗೆಗಳ್ಕಿಕಿಲಿದೆಂದೆಚ್ಚಿಬಟ್ಟೆ ಕಾಟ್ಟಿಬಟ್ಟೆಯೊಳ್ ।
ತಳರ್ವರ್ ಗಂಡರ ಗಂಡ ಪಾಂಡ್ಯಸತಿಯರ್ ನೀಂ ದಾಳಿಮಾಳ್ಪನ್ನೆಗಂ॥

(೧೦.) ಸಂದೇಹಾಲಂಕಾರಮೆಂತೆನೆ :—

ವೃ॥ ಮಯನೋ ಶಂಬರನೋ ದಶಾಸ್ಯಸುತನೋ ಮಾರೀಚನೋ ಎಂಬಿನಂ । ಭಯದಿಂದಾಗರೆಢಿಳ್ಳಿಭಾಗನಗರಪ್ರಾಂತ್ಯಂಗಳೊಳ್ಮಾಡುಗರ್ ॥ ಜಯಜೀಯೆಂದಿದಿರಿಟ್ಟ ಕಪ್ಪದೊದವಿಂ ಪೆಂಪೇಱಿ ಬಂದಾಶಿವಾ । ಜಿಯ ಸೊರ್ಕಂ ಮುಱಿದಿಕ್ಕಿಯಪ್ರತಿಮವೀರಾಭಿಖ್ಯೆಯಿಂ ತಾಳ್ದಿದಂ ॥೨೮

---

(೧೧.) ಅಪಹ್ನವಾಲಂಕಾರಮಾಱುಂ ತೆಱಂ. ಎಂತೆನೆ :—

(1) " ಶುದ್ಧಾಪಹ್ನುತಿರನ್ಯಸ್ಯಾ
ರೋಪಾರ್ಥೋ ಧರ್ಮನಿಹ್ನವಃ ॥ "

[ವೃತ್ತಿ] ವರ್ಣಿಸುವ ವಸ್ತುವಿನೊಳ್ ಪೆಱತೊಂದು ವಸ್ತುವಿನ ಧರ್ಮಮನಾರೋಪಿಸಿ ಪೇಳ್ವುದರ್ಕಾಗಿ ಮುನ್ನಿರ್ಪ ಧರ್ಮಮನಲಪಲಪಿಸುವುದು ಶುದ್ಧಾಪಹ್ನವಾಲಂಕಾರಮೆನಿಪುದು,

ಎಂತೆನೆ :—

ಕಂ॥ ನರಪತಿ ಚಿಕದೇವೇಂದ್ರನ ।
ಕರದೊಳ್ ಕೂರ್ವಾಳಪಲ್ತು ಪಗೆದಳದುಸಿಱು ॥

---

*ಬೆರ್ಚುತ್ತದಂ. ಗ॥

ಪರಿದೀಂಟಲುಳ್ಕುರವಣಿಸುವ |
ಸಿರಿದೋೞೆರಲುಣಿಯ ನೀೞ್ದ ನಾಲಗೆಯುಕ್ಕುಂ ||೬೯

ಮತ್ತಂ, (2) " ಸ ಏವ ಯುಕ್ತಿಪೂರ್ವಶ್ಚೇತ್
ಕಾರಣಾಪಹ್ನುತಿರ್ಮತಃ || "

[ವೃತ್ತಿ] ಒಂದು ವಸ್ತುವಿನ ಸ್ವರೂಪಮನಪಲಾಪಿಸಿಯುದರ್ಕೆ ಒಂದು ಯುಕ್ತಿಯಿಂ ಪೆಱತೊಂದು ವಸ್ತುವೆಂದು ಪೇೞ್ವುದು ಕಾರಣಾಪಹ್ನುತಿಯೆನಿಪ್ಪುದು.

ಎಂತೆನೆ :—

ವೃ||ಮುನ್ನಾದೇವೇಂದ್ರನಿಂ ನೊಂದುಡುಗಿದ ಪಲವುಂ ಬೆಟ್ಟುಗಳ್ದುರ್ಗ
ಮೆಂಬೀ | ಗನ್ನಂಗೊಂಡೊಳ್ಪಿನಿಂದಪ್ರತಿಮನೊಳೆ ಸುರಂಗಾಗ್ನಿ
ಸಾನ್ನಿಧ್ಯದೊಳ್ಗಾ || ಢನ್ನೇರಂಬೆತ್ತ ಬಲ್ಪಿಂದಡ*ರ್ದು ಬ*ರ್ದಲದೊ
ಳ್ಬಾಳ್ವರಂ ತಾಗಿ ಕೈವಾ | ಳ್ಪಿನ್ನಂ ನುಗ್ಗಾಗಿ ಬೀೞ್ವಾಸುರರೞಿ
ಯುದರಾದುರ್ಗದಾಳೊಳ್ಗಗೆತ್ತರ್ ||೭೦

ಮತ್ತಂ, (೩) " ಅನ್ಯತ್ರ ತಸ್ಯಾರೋಪಾರ್ಥಃ
ಪರ್ಯಸ್ತಾಪಹ್ನುತಿಶ್ಚ ಸಃ || "

[ವೃತ್ತಿ] ಒಂದು ವಸ್ತುವಿನೊಳ್ಪೆಱತೊಂದು ವಸ್ತುವಿನ ಧರ್ಮಮನಾರೋಪಿಸುವದರ್ಕಾಗಿ ಪೆಱತೊಂದು ವಸ್ತುವಿನೊಳಾಧರ್ಮಮನಪಲಪಿಸಿ ಪೇೞ್ವುದು ಪರ್ಯಸ್ತಾಪಹ್ನುತಿಯೆನಿಪ್ಪುದು.

ಎಂತೆನೆ :—

ಕಂ|| ನರಪತಿ ಕೇಳರಿನೃಪತಿಗೆ |
ಗಿರಿದುರ್ಗಂ ದುರ್ಗಮಲ್ತು ಪೃಥ್ವೀ ದುರ್ಗಂ ||
ಗಿರಿಯೇಱಿದರೞಿದರ್ ನಿ |

ಬ್ಬಿರದೊಳ್ಪೊತ್ತೇಱು ನಿಂದರೇಟ್ಸೆಗೆವಂದರ್ ॥೩೦

ಮತ್ತಂ, (4) “ಭ್ರಾಂತಾಪಹ್ನುತಿರನ್ಯಸ್ಯ
ಶಂಕಾಯಾಂ ಭ್ರಾಂತಿವಾರಣೇ॥

[ವೃತ್ತಿ] ಒಂದು ವಸ್ತುವಿನ ಗುಣಂಗಳಂ ಕೇಳ್ದು ಪೆಱತೊಂದು ವಸ್ತುವೆಂಬ ಭ್ರಾಂತಿವರೆಯುದಂ ಪರಿಹರಿಸಿ ದಿಟಮಂ ಪೇೞ್ವುದು ಭ್ರಾಂತಾಪಹ್ನುತಿಯೆನಿಪ್ಪುದು.

ಎಂತೆನೆ :—

ವೃ॥ಪ್ರೊಡವಿಯು ಪೊತ್ತ ಬಲೆಪ್ಪೊಱೆಯು ನೀೞ್ದೊಳವಲ್ಸಬಲು ಖಳರ್ಕಳಂ।
ಕಡಿಕಡಿದೊಟ್ಟ ಮೆಟ್ಟ ಮಿಗೆ ಜಿಂಹಗನು ವಿಜಯಾಭಿವೃದ್ಧಿ ದಾಂ॥
ಗುಡಿಯಿಡೆ ಪಾಲಿಪಂ ಧರೆಯನೇಂ ಹರಿಯೇ ಹರಿಯಲ್ತ ಮಗೆ ತಳ್ಳು।
ಪಡಿಯೆನಿಸಿರ್ದನಪ್ರತಿಮವೀರನಿವಂ ಚಿಕದೇವಭೂವರಂ ॥೩೧

ಮತ್ತಂ, (5) “ಛೇಕಾಪಹ್ನುತಿರನ್ಯಸ್ಯ
ಶಂಕಾತಸ್ತಥ್ಯನಿಹ್ನವೇ ॥”

[ವೃತ್ತಿ] ಒಂದು ವಸ್ತುವನಿರ್ದುದನಿರ್ದಂತೆ ತಿಳಿಯಲೆಳಸಿದರ್ಗೆ ಅದಂ ಮಱಸಿ ಪೇೞ್ವುದು ಛೇಕಾಪಹ್ನುತಿಯೆನಿಪ್ಪುದು.

ಎಂತೆನೆ :—

ಕಂ॥ ಪಲ್ಲೇಂ ಪೆರ್ಬಾಲೆಯ ಪ್ರಿಯ।
ಲಲ್ಲಿಯೆ ಮುಱಿದುದಿರ್ದುದೆಂದು ಕೇಳ್ವನೆಗಂ ತಾಂ॥
ತಲ್ಲಣಿಸಿ ಚೆನ್ನಬಸವಂ।
ಸೊಲ್ಲಿಸಿಯುಳನೆತ್ತಿತನ್ನದೆಂದಳವಱಿದಂ ॥೩೨

ಮತ್ತಂ, (6) “ಕೈತವಾಪಹ್ನುತಿರ್ವ್ಯಕ್ತೌ
ವ್ಯಾಜಾದ್ಯೈರ್ನಿಹ್ನುತೇಃಪದೈಃ ॥”

[ವೃತ್ತಿ] ಒಂದು ವಸ್ತುಸ್ವರೂಪಮನಲಪಿಸುವುದನೆ ವ್ಯಾಜಂ ನೆವಂ ಎಂಬಿವುಮುಂತಾದ ಪದಂಗಳಿಂ ಪೇೞ್ಯುದು ಕೈತವಾಪಹ್ನುತಿಯೆನಿಪ್ಪುದು.

ಎಂತೆನೆ :—

ಕಂ॥ ಆರಕ್ಕಸಬಿಂದಂ ಮಗು ।
*ೞ್ದರೆಯುರೆಂದೊಂದು ನೆವದೊಳೆಟ್ಟಂದುದದಂ ॥
ಶೌರಿಯುಮೀನರಪತಿಯುವ ।
ತಾರದ ನೆವದಿಂದವೊಂದನುೞಿಯದೆ ಕೊಂದಂ ॥೩೪

ಇಂತಿವಾಱುಮಪಹ್ನವಾಲಂಕಾರಂಗಳ್.

---

(೧೭.) ಉತ್ಪ್ರೇಕ್ಷಾಲಂಕಾರಮಾಱುಂ ತೆಱಂ. ಎಂತೆನೆ :—

"ಸಂಭಾವನಾಸ್ಯುರುತ್ಪ್ರೇಕ್ಷಾ
ವಸ್ತುಹೇತು ಫಲಾತ್ಮನಾ॥
ಉಕ್ತಾನುಕ್ತಾಸ್ಪದಾದ್ಯಾತು
ಸಿದ್ಧಾಸಿದ್ಧಾಸ್ಪದೇ ಪರೇ ॥"

[ವೃತ್ತಿ] ವರ್ಣಿಸುವ ಉಪಮೇಯಕ್ಕೆ ಉಪಮಾನದ ಸಾದೃಶ್ಯ ಮಿರ್ಪುದಱಿಂದುಪಮಾನಮೆಂದೆಣಿಸುವುದು ಉತ್ಪ್ರೇಕ್ಷೆಯೆನಿಪ್ಪುದು. ಇದುಂ, ವಸ್ತುಸ್ವರೂಪದಿಂದೊಂದು ವಸ್ತುವಂ ಪೆಱತೊಂದು ವಸ್ತುವೆಂದೆಣಿಸೆ, (1) ವಸ್ತೂತ್ಪ್ರೇಕ್ಷೆಯೆಂದುಂ ; ಕಾರಣಮಲ್ಲದುದಂ ಕಾರಣಮೆಂದೆಣಿಸೆ, (2) ಕಾರಣೋತ್ಪ್ರೇಕ್ಷೆಯೆಂದುಂ ; ಫಲಮಲ್ಲದುದಂ ಫಲಮೆಂದೆಣಿಸೆ, (3) ಫಲೋತ್ಪ್ರೇಕ್ಷೆಯೆಂದುಂ, ಮೂಱುಂ ತೆಱಂ. ಇವಱೊಳ್ ವಸ್ತೂತ್ಪ್ರೇಕ್ಷೆಯುಂ, ವಸ್ತುಸ್ವರೂಪಮಂ ಪೇೞೆ (1) i. ಉಕ್ತವಸ್ತೂತ್ಪ್ರೇಕ್ಷೆಯೆಂದುಂ ; ವಸ್ತುಸ್ವರೂಪಮಂ ಪೇೞದಿರ್ದೊಡೆ,

(1) ii. ಅನುಕ್ತವಸ್ತೂತ್ಪ್ರೇಕ್ಷೆಯೆಂದುಂ, ಎರಡುಂ ತೆಱಂ. ಕಾರಣೋತ್ಪ್ರೇಕ್ಷೆಯುಂ, ಉಂಟಾದ ಧರ್ಮಮುಂ ಕಾರಣವಾಗೆಣಿಸೆ, (2) i. ಸಿದ್ಧಕಾರಣೋತ್ಪ್ರೇಕ್ಷೆಯೆಂದುಂ ; ಕಲ್ಪಿತವಾದ ಧರ್ಮಮುಂ ಕಾರಣವಾಗಿ ಎಣಿಸೆ, (2) ii. ಅಸಿದ್ಧಕಾರಣೋತ್ಪ್ರೇಕ್ಷೆಯೆಂದುಮೆರಡುಂ ತೆಱಂ. ಈವಗೆಯೊಳ್ ಫಲೋತ್ಪ್ರೇಕ್ಷೆಯುಮೆರಡುಂ ತೆಱಂ. ಅಂತುಮುತ್ಪ್ರೇಕ್ಷೆಯಾಱುಂ ತೆಱಂ.

(1) i ಉಕ್ತವಸ್ತೂತ್ಪ್ರೇಕ್ಷೆಯೆಂತೆನೆ :—

ವೃ॥ ಪದಪಿಂ ಮೆಯ್ವೆತ್ತ ಚಂದ್ರಾನ್ವಯದ ಮಹಿಮೆಯೋ ಗಂಡುರೂ
ಪಾಂತ ಭೂಲೋ|ಕದ ಪೆಂಪೋ ಬೇಱೆ ವೇಷಂದಳೆದ ಯದುಕುಲೋ
ತ್ಸಾಹವೋ ತೆತ್ತ ಕರ್ಣಾ॥ಟದ ಸೊಂಪೋ ಬಿಣ್ಪುವೆತ್ತೊಪ್ಪುವ
ಸಕಲಜನಾನಂದವೋ ಎಂಬಿನಂ ಸಂ | ಮುದದಿಂ ಶ್ರೀಚಿಕ್ಕದೇವಂ
ತಳೆದೆಸೆದನಿಳಾಚಕ್ರಮುಂ ವಿಕ್ರಮಾಂಕಂ ॥ ೩೫

ಇದಱೊಳ್ ಚಿಕ್ಕದೇವರಾಯನೆಂದು ವಿಷಯಮುಂ ಪೇೞ್ದಿರ್ಪುದಱಿಂದೆ ಉಕ್ತವಸ್ತೂತ್ಪ್ರೇಕ್ಷೆಯೆನಿಪ್ಪುದು.

(1) ii ಅನುಕ್ತವಸ್ತೂತ್ಪ್ರೇಕ್ಷೆಯೆಂತೆನೆ :—

ವೃ॥ದಳಿತಾರೀಭಶಿರಃಕಪಾಲತತಿಭೃಂಗಾರಂಗಳಂ ವಿದ್ವಿಷ |
ದ್ಗಳಶೃಂಗಂಗಳನಂಶಖಂಡಿತಸಿರಾವಂಶಂಗಳಂ ದೇಸಿಯಿಂ ॥
ತಳೆದೊಳ್ಪಿಂ ಚಿಕದೇವಖಡ್ಗವಧು ರಕ್ತಾಸಾರಕಾಶ್ಮೀರದೋ |
ಕುಳಿಯಂ ಸೂಸಿದಳಾಹವೋತ್ಸವದೊಳಾಶಾಕಾಮಿನೀಬೃಂದದೊಳ್॥

ಇದಱೊಳ್ತಲೆಯೋಡುಮುಂತಾದುದಱಿಂ ನೆತ್ತರ್ ಚೆಲ್ಲಿದುದೆಂಬ ವರ್ಣ್ಯವಾದ ವಿಷಯಮುಂ ಪೇೞದಿರ್ಪುದಱಿಂದೆ ಅನುಕ್ತವಸ್ತೂತ್ಪ್ರೇಕ್ಷೆಯೆನಿಪ್ಪುದು.

(2) i ಸಿದ್ಧಕಾರಣೋತ್ಪ್ರೇಕ್ಷೆಯೆಂತೆನೆ :—

ಕಂ॥ ಅಡಸಿದ ಜಡತನದೆಡೆಱಂ।
ಬಿಡಿಸೆ ಸುರಂಗಾಗ್ನಿವೈದ್ಯದಿಂದಪ್ರತಿಮಂ ॥
ಪಿಡಿದುಪಕಾರಸ್ಮೃತಿಯಂ ।
ಪಡೆದುದು ಚಿಕದೇವರಾಜದುರ್ಗಾಭಿಧೆಯಂ ॥೩೭

ಇದಱೊಳ್ ಚಿಕದೇವರಾಜದುರ್ಗವೆಂದು ಪೆಸರ್ವಂದುದರ್ಕೆ ಕಾರಣವಾಗಿ ಉತ್ಪ್ರೇಕ್ಷಿಸುವ ಸುರಂಗಾಗ್ನಿವೈದ್ಯಂ ಸಿದ್ಧವಾಗಿರ್ಪುದಱಿಂ ಸಿದ್ಧಕಾರಣೋತ್ಪ್ರೇಕ್ಷೆಯೆನಿಪುದು.

(2) ii ಅಸಿದ್ಧಕಾರಣೋತ್ಪ್ರೇಕ್ಷೆಯೆಂತೆನೆ :—

ವೃ॥ ಪಿಂ ಪಳರಾಯರೊಲ್ದುಡಿಸಿದಾಜಸವಟ್ಟೆಗಳುಟ್ಟು ಮಾಸಿ ಪೋ।
ಯ್ತಿಂ ಪಡೆವಂ ಬೆಳರ್ತು ಬೆಲೆವೆತ್ತಸೆವೊಳ್ಜಸವಟ್ಟೆಯಂ ಕರಂ॥
ಸೊಂಪಿಡಿದಿರ್ಪವಿನ್ನದಱಿನೆಂಬವೊಲೀದೆಸೆವೆಣ್ಗಳೆಣ್ಬರುಂ।
ಪೆಂಪಿನೊಳಿರ್ಪರಪ್ರತಿಮವೀರನ ರಾಜಪದಾಭಿಷೇಕದೊಳ್ ॥೩೮

ಇದಱೊಳ್ ಪ್ರಸನ್ನತೆಗೆ ಕಾರಣವೆಂದುತ್ಪ್ರೇಕ್ಷಿಸುವ ನೂತನವಸ್ತ್ರವಿಷಯಮಾದ ಅಭಿಲಾಷೆ, ಅಚೇತನಂಗಳಾದ ದಿಕ್ಕುಗಳ್ಗಿಲ್ಲದುದಱಿಂದೆ ಅಸಿದ್ಧವಿಷಯಕಾರಣೋತ್ಪ್ರೇಕ್ಷೆಯೆನಿಪುದು.

(3) i ಸಿದ್ಧಫಲೋತ್ಪ್ರೇಕ್ಷೆಯೆಂತೆನೆ :—

ಕಂ॥ ಪರಮೇಷ್ಠಿ ತಮ್ಮ ಪಣೆಯೊಳ್।
ಬರೆದಳಿವರೆಪಂಗಳರವನನುಗೆಯ್ಯಲ್ಕೆಂ ॥
ದರಿನೃಪತಿಗಳಪ್ರತಿಮನ ।
ಸಿರಿಯಡಿಯುಂಗುಟದೊಳೊರಸಿ ಪಿಂ ಸೊಗವಾಳ್ದರ್ ॥೩೯

ಇದಱೊಳುತ್ಪ್ರೇಕ್ಷಿಸುವ ಪಣೆಯ ಬರೆಪಮನನುಗೆಯ್ವುದೆಂಬ ಫಲಂ ಸಿದ್ಧವಾಗಿರ್ಪುದಱಿಂದಿದು ಸಿದ್ಧಫಲೋತ್ಪ್ರೇಕ್ಷೆಯೆನಿಪುದು.

(3) ii ಅಸಿದ್ಧಫಲೋತ್ಪ್ರೇಕ್ಷೆಯೆಂತೆನೆ:—

ಕಂ॥ ಕಲಿದೋಷಂ ತಟ್ಟದವೊಲ್ ।
ಕುಲಜರನುದ್ಧರಿಸೆ ವೀರಚಿಕದೇವೇಂದ್ರಂ ॥
ಕುಲಪತಿಯುಮಂತು ತಾಂ ನಡೆ ।
ವೊಲವಿಂದಂ ಬಂದನಿಂದು ಬೆಳ್ಗೊಡೆನೆವನೊಳ್ ॥೪೦

ಇದಱೊಳ್ ಚಂದ್ರಂಗೆ ಕಲಿದೋಷಂ ಸಂಭಾವಿತಮಲ್ಲದುದಱಿಂದೆ ಅದಂ ಪರಿಹರಿಸಲ್ಕೆಂಬ ಫಲಮಸಿದ್ಧಮಾಗಿರ್ಪುದಱಿಂದಿದು ಅಸಿದ್ಧ ಫಲೋತ್ಪ್ರೇಕ್ಷೆಯಾದುದು.

ಇಂತಿವಾಱುಮುತ್ಪ್ರೇಕ್ಷಾಲಂಕಾರಂಗಳ್.

---

೧೩. ಅತಿಶಯೋಕ್ತ್ಯಲಂಕಾರಮೈದುಂ ತೆಱಂ. ಎಂತೆನೆ :—

(1) "ರೂಪಕಾತಿಶಯೋಕ್ತಿಸ್ಸ್ಯಾತ್
ನಿಗೀರ್ಯಾಧ್ಯವಸಾನತಃ ॥"

[ವೃತ್ತಿ] ವರ್ಣ್ಯಮಾದ ವಸ್ತುವಂ ಮನದೊಳಿಟ್ಟು ಉಪಮಾನ ವಸ್ತುಗಳನೆ ಪೇೞ್ವುದು ರೂಪಕಾತಿಶಯೋಕ್ತಿಯೆನಿಪುದು.

ಎಂತೆನೆ :—

ಕಂ॥ ಯದುಕುಲರತ್ನಾಕರದಿಂ ।
ದುದಿಸಿದನೀಪೂರ್ಣಚಂದ್ರನಿದೆ ಕುವಲಯದೊಳ್ ॥
ಪದೆದಾವೋದಂ ಬಳೆಗುಂ ।
ಹೃದಯಂಗಮಮೆನಿಸಿ ಜೊನ್ನಮುಂ ಪಸರಿಸುಗುಂ ॥೪೧

ಮತ್ತಂ, (2) "ಯದ್ಯಪಹ್ನುತಿಗರ್ಭತ್ವಂ
ಸೈವ ಸಾಪಹ್ನವಾ ಮತಾ ॥"

[ವೃತ್ತಿ] ವರ್ಣ್ಯವಾದ ವಸ್ತುವಂ ಮನದೊಳಿಟ್ಟು ಉಪಮಾನವಸ್ತುವಂ ಪೇೞ್ದು ಆವುಪಮಾನವಸ್ತುವನಪಲಪಿಸಿ ಪೇೞ್ವುದು ಸಾಪಹ್ನವಾತಿಶಯೋಕ್ತಿಯೆನಿಪ್ಪುದು.

ಎಂತೆನೆ:—

ಕಂ॥ ಅಂಜನೆಯುಣುಗಂ ತಂದುದು । 5
ಸಂಜೀವನಮಲ್ತು ವೀರಚಿಕದೇವೇಂದ್ರಂ ॥
ಗಂಜಿದ ರಿಪುನೃಪಪುಂಜಕೆ ।
ಸಂಜೀವನಮಿಳೆಯ ಪುಲ್ಲೊಳಿರ್ಕುಂ ಮಿಕ್ಕುಂ ॥೪೨

ಇದಱೊಳ್ ಪುಲ್ಲಂ ಕರ್ಚಿದ ಪಗೆಗಳ ಜೀವಮುೞಿದುದಱಿಂ ಪುಲ್ಲೊಳಿರ್ಪ ಗುಣಮಂ ಪೆಸರ್ಗೊಳ್ಳದೆ ಸಂಜೀವನಮಿರ್ಕುಮೆಂಬುದಱಿಂದೆ ಅತಿಶಯೋಕ್ತಿ; ಅಂಜನೆಯುಣುಗಂ ತಂದುದು ಸಂಜೀವನಮಲ್ತೆಂಬುದಱಿಂದಪಹ್ನುತಿಗರ್ಭಮಾದುದು.

ಮತ್ತಂ, (3) "ಭೇದಕಾತಿಶಯೋಕ್ತಿಸ್ತು
ತಸ್ಯೈವಾನ್ಯತ್ವವರ್ಣನಂ ॥" 14

[ವೃತ್ತಿ] ವರ್ಣ್ಯಮಾದ ವಸ್ತುವಂ ಲೋಕದೊಳಿರ್ಪ ವಸ್ತುವತ್ತಣಿಂ ಬೇಱೆಂದು ಪೇೞ್ವುದು ಭೇದಕಾತಿಶಯೋಕ್ತಿಯೆನಿಪ್ಪುದು.

ವೃ॥ ಬೇಱೆವನೋಜೆ ಬೇಱೆವನ ವೈಖರಿ ಬೇಱೆವನೊಳ್ಪುಗೆಯ್ಮೆಗಳ್ ।
ಬೇಱೆವನಾರ್ಪು ಬೇಱೆವನ ಗಾವಳಿ ಬೇಱೆವನುರ್ಕಸೊರ್ಕುಗಳ್ ॥
ಬೇಱೆವನಬ್ಬರಂ ನೆಲದ ಬೀರರೊಳೀಪವಣಿಲ್ಲವೆಲ್ಲರಂ ।
ಮೀಱಿದ ರೂರ್ಪಿನಪ್ರತಿಮವೀರನಿವಂ ಚಿಕದೇವಭೂವರಂ ॥೪೩

ಮತ್ತಂ, (4) "ಸಂಬಂಧಾತಿಶಯೋಕ್ತಿಸ್ಸ್ಯಾ
ದಯೋಗೇ ಯೋಗಕಲ್ಪನಂ ॥"

[ವೃತ್ತಿ] ಇಲ್ಲದ ಸಂಬಂಧಮಂ ಕಲ್ಪಿಸಿ ಪೇೞ್ವುದು ಸಂಬಂಧಾತಿಶಯೋಕ್ತಿಯೆನಿಪ್ಪುದು.

ಎಂತೆನೆ :—

ವೃ॥ ಜಡಕನ ದುರ್ಗದಿಂ ನೆಗೆದ ಪಾಸಱೆಗಳ್ ತಡೆಗಟ್ಟೆ ಬಟ್ಟೆಯಂ ।
ಕೊಡನ ಕುಮಾರನಾಣತಿಯಿನೆಂದಿನವೊಲ್ ಬಳೆದತ್ತು ಬಿಂಜಮಂ॥
ದೆಡಬಲದತ್ತು ಸುತ್ತುವಿನಮಾ ಅಱೆಯೇಱೆದ ವೈರಿವೀರರಂ।
ನುಡಿಸಿ ಪೊದಱ್ದುಯುದ್ಧಗರುಡಧ್ವಜನುದ್ಧತಿಗೆತ್ತನಂದಿನಂ ॥೪೪

ಮತ್ತಂ, (5) “ಯೋಗೇಪ್ಯಯೋಗೋ ಸಂಬಂಧಾ
ತಿಶಯೋಕ್ತಿರಿತೀಷ್ಯತೇ ॥”

[ವೃತ್ತಿ] ಸಂಬಂಧಮಿರ್ದೊಡಮಿಲ್ಲೆಂದು ಪೇೞ್ವುದು ಅಸಂಬಂಧಾತಿಶಯೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಆರಯೆ ಚಿಕದೇವೇಂದ್ರನ ।
ಭೂರಿದಯಾಮೃತಮನೀಂಟ ತಣಿದೀವಿಬುಧರ್ ॥
ತಾರರ್ ತಮ್ಮೆಣಿಕೆಗೆ ಮು ।
ನ್ನೀರೊಳ್ಬಸದೊಡನೆ ಸಮೆದ ಕಟ್ಟುಪ್ಪೆಸರಂ ॥೪೫

ಮತ್ತಂ, (6) “ಅಕ್ರಮಾತಿಶಯೋಕ್ತಿಸ್ತು
ಸಹತ್ವೇಹೇತುಕಾರ್ಯಯೋಃ ॥”

[ವೃತ್ತಿ] ಕಾರ್ಯಕಾರಣಂಗಳೆರಡುಮೊಂದೇ ವೇಳೆಯೊಳಾದುದೆಂದು ಪೇೞ್ವುದು ಅಕ್ರಮಾತಿಶಯೋಕ್ತಿಯೆನಿಪ್ಪುದು.

ಎಂತೆನೆ :—

ವೃ॥ ಧರೆ ಸೊಂಪೇಱೆ ಧರಾಮರರ್ ಪದಪಿನಿಂ ಪೆಂಪೇಱೆ ವಿದ್ವಜ್ಜನಂ।
ನೆರೆದಿಂಪೇಱೆ ಪೊದಱ್ದು ಬೀರವಡೆಗಳ್ಬಣ್ಪೇಱೆ ಮುಂ ಪೊರ್ದಿದವರ್॥

ಪಿರಿದುಂ ಪ್ರೊಂಪುೞಿಯೇೞ್ ಪಟ್ಟವಣೆಯಂ ತಾನೇಱಿದಂ ಸದ್ಗುಣಾ।
ಕರನಂತೆಂಬರ ಗಂಡನಿಂದು ಚಿಕದೇವೇಂದ್ರಂ ಮಹೇಂದ್ರೋಪಮಂ॥

ಮತ್ತಂ, (7) " ಚಪಲಾತಿಶಯೋಕ್ತಿಸ್ಸ್ಯಾ
ತ್ಕಾರ್ಯೇ ಹೇತುಪ್ರಸಕ್ತಿಜೇ॥ "

[ವೃತ್ತಿ] ಕಾರಣಂ ಪ್ರಸ್ತುತಮಾದ ಮಾತ್ರದೊಳೆ ಕಾರ್ಯಮಾದುದೆನೆ ಚಪಲಾತಿಶಯೋಕ್ತಿಯೆನಿಪ್ಪುದು.

ವೃ॥ ಬಳೆಗುಂ ಸಂತಸಮುಣ್ಮುಗುಂ ಬಗೆಯುರಲ್ಗುಂ ಪ್ರಜ್ಞೆ ಸಲ್ಗುಂ
ವಚಂ । ಪಳಕುಂ ಗೆಯ್ಮೆ ಮಡಲ್ಗುಮೊಳ್ಪ ಸಮಱಂ ಪೆಂಪೇಱುಗುಂ
ಮತ್ತಮೇಂ ॥ ಕೆಳೆಗೊಳ್ಗುಂ ನೆವಮಿಲ್ಲದೆಲ್ಲ ಜಗಮುಂ ತಾಳ್ಗೈಗು
ಮಾದೈವಮುಂ । ತಳರ್ವನ್ನಂ ಚಿಕದೇವರಾಯನ ದಯಾಂಕೂರಂ
ಕಟಾಕ್ಷಾಂತದೊಳ್ ॥೪೬

ಮತ್ತಂ, (8) " ಅತ್ಯಂತಾತಿಶಯೋಕ್ತಿಸ್ಸ್ಯಾ
ತ್ಪೌರ್ವಾಪರ್ಯವ್ಯತಿಕ್ರಮೇ ॥ "

[ವೃತ್ತಿ] ಕಾರಣದತ್ತಣಿಂ ಕಾರ್ಯಂ ಮುಂದೆಯಾದುದೆಂದು ಪೇೞ್ವುದು ಅತ್ಯಂತಾತಿಶಯೋಕ್ತಿಯೆನಿಪ್ಪುದು.

ಎಂತೆನೆ: —

ಕಂ॥ ತುಡುಕಿದನೊರ್ವಂದಲೇ ಇ।
ರ್ದಡಿಮೆಟ್ಟುವ ಗೆಲ್ಲವೆಣ್ಣ ಜೆಡೆಯಂ ಜಡಿದಾ ॥
ಒಡನೆ ಚಿಕದೇವರಾಯಂ ।
ಪಿಡಿದಂ ಖಂಡೆಯಮನಮಮ! ಕೈಮೆಯುದೆಂತೋ ! ॥೪೭

ಇಂತಿವೆಣ್ಟುಂ ಅತಿಶಯೋಕ್ತ್ಯಲಂಕಾರಂಗಳ್.

೧೪.) ಸಮಯೋಗಿತಾಲಂಕಾರಂ ನಾಲ್ಕುಂ ತೆಱಂ. ಎಂತೆನೆ :—

"ವರ್ಣ್ಯಾನಾಮಿತರೇಷಾಂ ಚ
ಧರ್ಮೈಕ್ಯಂ ಸಮಯೋಗಿತಾ ॥"

[ವೃತ್ತಿ] ವರ್ಣ್ಯವಾದ ವಸ್ತುಗಳೊಳಾದೊಡಂ ಇತರವಸ್ತುಗಳೊಳಾದೊಡಂ ಒಂದಱ ಧರ್ಮಂ ಮತ್ತೊಂದು ವಸ್ತುವಿನೊಳನ್ವಿತಮಪ್ಪಂತೆ ಪೇೞೆ ಸಮಯೋಗಿತೆಯೆನಿಪ್ಪುದು.

(1) ವರ್ಣ್ಯವಸ್ತುಗಳೊಳ್ ಧರ್ಮೈಕ್ಯಮೆಂತೆನೆ :—

ಕಂ॥ ತೆಱಬೆ ಮಹಿಶೂರ ಭಟರೊಂ|
ದುಱಬಿಂ ಪೆರ್ಬಾಲೆಯೂರ ಮುಂದಣ ವಯಲೊಳ್ ॥
ಮುಱಿಮುದು ಕೆಳದಿಯ ಪಡೆ ತೆಱ |
ನಱಿಯದೆ ಮುನ್ನೊಳ್ದ ಚೆನ್ನಬಸವನ ಪಲ್ಲಂ ॥೪೪

(2) ಅವರ್ಣ್ಯವಾದ ವಸ್ತುಗಳೊಳ್ ಧರ್ಮೈಕ್ಯಮೆಂತೆನೆ :—

ಕಂ॥ ಅನುವಱತಖಿಲಪ್ರಜೆಗಳ |
ನನವಧಿದಯೆವೆರಸು ಕಾಪುಗೊಳಿಸುವರಿರ್ವರ್ ॥
ವನಜಾಕ್ಷನುಮಪ್ರತಿಮನು |
ಮೆನಲೇನಿಂ ದೊರೆಯೆ ತಂದೆತಾಯ್ಗುರುದೈವಂ ? ॥೪೫

ಇದಱೊಳಪ್ರತಿಮನಂತೆಯುಂ ನಾರಾಯಣನಂತೆಯುಂ ಪ್ರಜೆಗಳಂ ಕಾಪುಗೊಳಿಸಲಱಿಯರೆಂಬರ್ಥಮನವರ್ಣ್ಯರಾದ ತಂದೆತಾಯ್ಮೊದಲಾದವರೊಳನ್ವಿತಮಪ್ಪಂತೆ ಸರಿಯಾಗಿ ಪೇೞ್ದುದಱಿಂದಿದು ಸಮಯೋಗಿತೆಯೆನಿಪ್ಪುದು.

ಮತ್ತಂ, (3) "ಹಿತಾಹಿತೇ ವೃತ್ತಿಸಾಮ್ಯ
ಮಪರಾ ಸಮಯೋಗಿತಾ ॥"

[ವೃತ್ತಿ] ಒರ್ವಂ ಶತ್ರುಮಿತ್ರರ್ಕಳಲ್ಲಿ ಸಮನಾಗಿ ನಡೆವನೆಂದು ಚಮತ್ಕಾರವಾಗಿ ಪೇೞಿಯುದುಂ ಸಮಯೋಗಿತಾಲಂಕಾರಂ.

ಎಂತೆನೆ:—

ಕಂ॥ ಜಗದೇಕವೀರನರಪತಿ।
ಜಗದೀಶ್ವರನಂಶಮಕ್ಕುಮಲ್ಲದೊಡಿವನೊಳ್ ॥
ಪಗೆಪತ್ತುಗೆಗೊಂಡವರುಂ।
ಸೊಗವಾಳ್ವರೆ ದಿವ್ಯಭೋಗಭಾಗ್ಯೋದಯದೊಳ್? ॥೫೦

ಮತ್ತಂ, (4) "ಗುಣೋತ್ಕೃಷ್ಟೈಸ್ಸಮೀಕೃತ್ಯ
ವಚೋಽನ್ಯಾ ಸಮಯೋಗಿತಾ ॥"

[ವೃತ್ತಿ] ವರ್ಣಿಸುವ ವಸ್ತುವಂ ಗುಣಮುಳ್ಳ ವಸ್ತುಗಳೊಡನೆ ಜತೆಗೊಂಡು ಪೇಳ್ವುದುಂ ಸಮಯೋಗಿತೆಯೆನಿಪ್ಪುದು.

ಎಂತೆನೆ:—

ಕಂ॥ ಇಂದ್ರಾದಿಗಳೊಡನೆ ಹರಿ।
ಶ್ಚಂದ್ರಾದಿಗಳೊಡನೆ ಗಣಿಪರರೆಬರ್ ಚಿಕದೇ ॥
ವೇಂದ್ರನನೊಳ್ಗುಣದಿಂದಮ ।
ಪೇಂದ್ರನ ವಿಭವಾವತಾರದೊಡನೆಣಿಸುವೆನಾಂ ॥೫೧

ಇಂತಿವು ನಾಲ್ಕುಂ ಸಮಯೋಗಿತಾಲಂಕಾರಂಗಳ್.

---

(೧೫.) ದೀಪಕಾಲಂಕಾರಮೆಂಬುದು:—

(1) "ವದಂತಿ ವರ್ಣ್ಯಾವರ್ಣ್ಯಾನಾಂ
ಧರ್ಮೈಕ್ಯಂ ದೀಪಕಂ ಬುಧಾಃ ॥"

[ವೃತ್ತಿ] ವರ್ಣ್ಯಮಾದ ವಸ್ತುಗಮವರ್ಣ್ಯಮಾದ ವಸ್ತುಗಮೊಂದು ಧರ್ಮಮನ್ವಿತಮಪ್ಪಂತೆ ಪೇೞಿಯುದು ದೀಪಕಮೆನಿಪ್ಪುದು.

ಎಂತೆನೆ :—

ಕಂ॥ ಪಾರ್ವರ್ ಪಳನುಡಿವುರುಳಂ ।
ಪೆರ್ವಲಿಯುಂ ಪರದರೊಕ್ಕಲಿಗರನುವೆಳಸಂ ॥
ಪರ್ವಿದ ಸ್ನೈಪಿನ ದೊರೆಗಳ್ ।
ಸಾರ್ವರ್ ಚಿಕದೇವರಾಯನಡಿದಾವರೆಯಂ ॥೫೦

ಇದಱೊಳ್ 'ದೊರೆಗಳ್ ಚಿಕದೇವರಾಯನಡಿಯಂ ಸಾರ್ವರ್.' ಎಂಬ ವರ್ಣ್ಯವಾದರ್ಥಮುಂ ಅವರ್ಣ್ಯರಾದ ಪಾರ್ವರ್ ಮುಂತಾದವಱೊಳನ್ವಿತವಾಗಿ ಪೇೞ್ದುದಱಿಂ ದೀಪಕಾಲಂಕಾರಂ.

(2) " ತ್ರಿವಿಧಂ ದೀಪಕಾವೃತ್ತೌ
ಭವೇದಾವೃತ್ತಿದೀಪಕಂ ॥ "

[ವೃತ್ತಿ] ಒಂದು ವಾಕ್ಯದೊಳಿರ್ಪ ಶಬ್ದಾರ್ಥಂಗಳ್ಪೆಱತು ವಾಕ್ಯಂಗಳೊಳಂ ಬಳಸಿವರೆ ಆವೃತ್ತಿದೀಪಕಮೆನಿಪ್ಪುದು. ಇದು, ಅರ್ಥಂ ಬೇಱಾಗಿರ್ದೊಡಂ ಶಬ್ದಂ ಬಳಸಿವರೆ, i. ಶಬ್ದಾವೃತ್ತಿದೀಪಕಮೆಂದುಂ ; ಶಬ್ದಂ ಬೇಱಾಗಿರ್ದೊಡಮರ್ಥಂ ಬಳಸಿವರೆ, ii. ಅರ್ಥಾವೃತ್ತಿದೀಪಕಮೆಂದುಂ ; ಶಬ್ದಾರ್ಥಂಗಳೆರಡುಂ ಬಳಸಿವರೆ, iii. ಉಭಯಾವೃತ್ತಿದೀಪಕಮೆಂದುಂ, ಮೂಱುಂ ತೆಱಂ.

ಇದಱೊಳ್ i. ಶಬ್ದಾವೃತ್ತಿದೀಪಕಮೆಂತೆನೆ :—

ಕಂ॥ ಚುರ್ಬ್ಬಿ ಮಹಿಶೂರ ಬಾಣಮಿ ।
ದಿರ್ಬ್ಬದೆ ಕೆಲದಿಯುವರೆಱಗಿ ನರಪತಿಗಳ್ಕಂ ॥
ಕರ್ಬ್ಬಿದರಡಿಯುಂಗುಟಮಂ ।
ಕರ್ಬ್ಬಿದರೊಡನುಗುವ ಸೊಗದ ಕಣ್ಣೀರ್ವೊನಲಿಂ ॥೫೧

ಇದಱೊಳ್ ‘ಅರಿಗಳುಂಗುಟಮನಳ್ಕಿಂ ಕರ್ಚಿದರ್, ಒಡನೆ ಸೊಗದಾಲಿನೀರ್ವೊರ್ನಲಿಂ ಕರ್ಚಿದರ್.’ ಎಂಬ ವಾಕ್ಯದ್ವಯದೊಳ್ ಕರ್ಚಿದರೆಂಬ ಶಬ್ದಂ ಬಳಸಿ ಬಂದೊಡಂ, ‘ಕಚ್ಚ್, ಕ್ಷಾಳನೇ ದಂಶನೇಚ.’ ಎಂದರ್ಥಭೇದಮಿರ್ಪುದಱಿಂ ಶಬ್ದಾವೃತ್ತಿದೀಪಕಂ.

ii. ಅರ್ಥಾವೃತ್ತಿದೀಪಕಮೆಂತೆನೆ :—

ವೃ॥ಸರಿ ಸಗರಂಗೆ ಸಾಟ ನಹುಷಂಗೆಣೆ ನಾಭಿಗೆ ಸನ್ನಿಭಂ ಯುಧಿ।
ಷ್ಠಿರಜನಪಂಗೆ ಪಾಸಟಿ ಯಯಾತಿಗೆ ಜೋಡು ವಿಡೂರಥಂಗೆ ತಾಂ॥
ದೊರೆ ಭರತಂಗೆ ಪಾಟಿ ರಘುಗೆಂದೆನೆ ಬಲ್ಲ ಬುಧರ್ಕಳೆಲ್ಲರುಂ।
ಸಿರಿವಡೆದಿರ್ಕುಮುರ್ಕಿನ ಪರಾಕ್ರಮದಿಂ ಚಿಕದೇವಭೂವರಂ॥೫೮

ಇದಱೊಳ್ ‘ಸಗರಂಗೆ ಸರಿ, ನಹುಷಂಗೆ ಸಾಟ.’ ಎಂಬಿವು ಮೊದಲಾದ ವಾಕ್ಯಂಗಳೊಳ್ ಸಾದೃಶ್ಯವಾಚಕಂಗಳಾದ ಪದಂಗಳ್ ಬೇಱಾಗಿರ್ದೊಡಂ ಸಾದೃಶ್ಯಮೆಂಬ ಅರ್ಥಂ ಬಳಸಿ ಬರ್ಪುದಱಿಂದರ್ಥಾವೃತ್ತಿದೀಪಕಮೆನಿಪ್ಪುದು.

iii. ಉಭಯಾವೃತ್ತಿದೀಪಕಮೆಂತೆನೆ :—

ಕಂ॥ ಅಱಿದುದು ಮೂಗೆಸವಂತಂ।
ಗಱಿಮುದು ದಳವಾಯಿ ಚೆನ್ನಬಸವನ ಪಲ್ಲಂ॥
ಕಱಿದುದು ಮೊಗಸಿರಿಯಾರೆಯು।
ಕೆಱಿದಿಯು ಕಟ್ಟರಸುಗಳ್ಗೆ ಚಿಕದೇವೇಂದ್ರಾ॥೫೫

ಇದಱೊಳ್ ಅಱಿದುದಱಿದುದೆಂಬ ಶಬ್ದಾರ್ಥಂಗಳೆರಡುಂ ಬಳಸಿ ಬರ್ಪುದಱಿಂದುಭಯಾವೃತ್ತಿದೀಪಕಮೆನಿಪ್ಪುದು.

ಇಂತಿವು ಮೂಱುಮಾವೃತ್ತಿದೀಪಕಂಗಳ್.

---

(೧೬.) ದೃಷ್ಟಾಂತಾಲಂಕಾರಮೆಂಬುದು :—

" ಚೇದ್ಬಿಂಬಪ್ರತಿಬಿಂಬತ್ವಂ
ದೃಷ್ಟಾನ್ತಸ್ತದಲಂಕೃತಿಃ ॥ "

[ವೃತ್ತಿ] ಎರಡುಂ ವಾಕ್ಯಂಗಳ್ಬೇಱಾಗಿಯೊಂದರೊಳ್ಕೊಂದು ಸಾದೃಶ್ಯದಿಂ ಪ್ರತಿಬಿಂಬದಂತೆ ತೋಱುಯುದು ದೃಷ್ಟಾಂತಾಲಂಕಾರಂ.

ಎಂತೆನೆ :—

ಕಂ॥ ಪೆರ್ಗಳಸುವ ರಕ್ಕಸವಡೆ ।
ಯುರ್ಕಂ ಮುಱಿದಿಕ್ಕ ತಕ್ಕನಚ್ಯುತನೊವಂ ॥
ಕರ್ಕಶಮರಾಟಕೋಟಿಯ ।
ಸೊರ್ಕಿಱಿಪಲ್ ಚಿಕ್ಕದೇವನರಪತಿಯೊರ್ವಂ ॥೫೬

ಇದಱೊಳಚ್ಯುತಚಿಕದೇವರಾಯರವೃತ್ತಾಂತಂಗಳೊಂದೊಕೊಂದು ಪಡಿನೆಲಂತೆ ತೋಱ್ಪುದಱಿಂ ದೃಷ್ಟಾಂತಾಲಂಕಾರಂ.

(೧೭.) ಪ್ರತಿವಸ್ತೂಪಮಾಲಂಕಾರಮೆಂಬುದು :—

" ವಾಕ್ಯಯೋರೇಕಸಾಮಾನ್ಯೇ
ಪ್ರತಿವಸ್ತೂಪಮಾಮತಾ ॥ "

[ವೃತ್ತಿ] (1) ಉಪಮಾನೋಪಮೇಯಪರವಾಕ್ಯಂಗಳೊಳ್ಸಮಾನಧರ್ಮಮೊಂದಾಗಿರೆಯದು ಪ್ರತಿವಸ್ತೂಪಮೆಯೆನಿಪ್ಪುದು.

ಎಂತೆನೆ :—

ಕಂ ॥ ಸೆಣಸಿ ಚಿಕದೇವರಾಯನೊ ।
ಳಣಿಗೆಟ್ಟರ್ ಭಾಗವಿಜಯನಗರದ ಶಾಹರ್ ॥
ಪೊಣರ್ದು* ಪೊಣರ್ದ*ಮರಾಟರ್ ।
ತಣಿದಾತಳ್ಳಿಯನೆ ಬಿಟ್ಟು ತಟ್ಟನೆ ತೆಳರ್ದ*ರ್ ॥೫೭

ಮತ್ತಂ, (2) ಸಮಾನಧರ್ಮಮೊಂದಾಕಾರಮಲ್ಲದೆ ಒಂದು ವಾಕ್ಯದೊಳನ್ವಯರೂಪಮಾಗಿಯುಂ ಪೆಱತೊಂದು ವಾಕ್ಯದೊಳ್ವ್ಯತಿರೇಕರೂಪಮಾಗಿಯುಮಿರ್ದೊಡದುವುಂ ಪ್ರತಿವಸ್ತೂಪಮೆಯೆನಿಪುದು.

ಎಂತೆನೆ :—

ಕಂ ॥ ಪಟ್ಟಂಗೊಳುತಪ್ರತಿಮಂ ।
ಮುಟ್ಟಟ್ಟಂ ಮಧುರೆಕೆಱಿದಿದೊರೆಗಳ ಬಲ್ಪಂ ॥
ನಿಟ್ಟಿಸೆ ನೆಗ*ೞ್ದಂ ನೇಸಱ್ ।
ತಪ್ಪನೆ ತಱಿಸದೆ ತಮಮನೆಡೆದಡೆದಪುದೇ ? ॥೪೮

ಇದಱೊಳ್ ಮುಟ್ಟಟ್ಟನೆಂದು ಉಪಮೇಯವಾಕ್ಯದೊಳನ್ವಯಮುಂ ತಱಿಸದೆ ತಡೆದಪುದೆ ಎಂದು, ಉಪಮಾನವಾಕ್ಯದೊಳ್ ವ್ಯತಿರೇಕಮುಂ ತೋಱುದಱಿಂದಿದುಂ ಪ್ರತಿವಸ್ತೂಪಮಾಲಂಕಾರಂ.

---

೧೭. ನಿದರ್ಶನಾಲಂಕಾರಂ ನಾಲ್ಕುಂ ತೆಱಂ. ಎಂತೆನೆ :—

(1) "ವಾಕ್ಯಾರ್ಥಯೋಸ್ಸದೃಶಯೋ
ರೈಕ್ಯಾರೋಪೋ ನಿದರ್ಶನಾ ॥"

[ವೃತ್ತಿ] ಉಪಮೇಯವಾಕ್ಯಾರ್ಥಮುಂ ಉಪಮಾನವಾಕ್ಯಾರ್ಥಮುಂ ಏಕಮೊಂದಾರೋಪಿಸಿ ಪೇೞೆ ನಿದರ್ಶನಾಲಂಕಾರಂ.

ಎಂತೆನೆ :—

ಕಂ॥ ನೀಱಿಂಗೆಱಗದ ಜೈತ್ರಜಿ ।
ಕಾಟಕನಂ ಕಡಿದು ಬಿಸುಡೆ ಚಿಕದೇವೇಂದ್ರಂ ॥
ಪಾಟಿಸಿ ಬಲ್ಲವರಲ್ಲದ ।
ಮಾಟದ ರಾವಣಿಯನಿಂದು ಮಡಿಪಿದನೆಂದರ್ ॥೪೯

ಮತ್ತಂ, (2) "ಪದಾರ್ಥವೃತ್ತಿಮಪ್ಯೇಕೇ

ವದನ್ತ್ಯನ್ಯಾಂ ನಿದರ್ಶನಾಂ ‖ "

[ವೃತ್ತಿ] ಉಪಮಾನೋಪಮೇಯವಾಕ್ಯಂಗಳೊಳ್ ಒಂದು ವಾಕ್ಯದೊಳಿರ್ಪೊಂದು ಪದಾರ್ಥಮಂ ಪೆಱತೊಂದು ವಾಕ್ಯದೊಳಿರ್ಪ ಪೆಱತೊಂದು ಪದಾರ್ಥಮಾಗಿಯಾರೋಪಿಸಿ ಪೇೞಿಯುದುಂ ನಿದರ್ಶನಾಲಂಕಾರಂ. ಎಂತೆನೆ :—

ಕಂ॥ ಲಂಕಾಧೀಶನ ಮೂಲಬ।
ಲಂ ಕವಿತರೆ ರಾಮನೆಸಗಿದಚ್ಚರಿಯೆಸಕಂ ॥
ತಾಂ ಕವಿದ ಪಲವು ದೊರೆಗಳು ।
ಮಂ ಕೊಂಕುವ ಚಿಕ್ಕದೇವರಾಯನೊಳಕ್ಕುಂ ॥ ೬೦

ಇದಱೊಳ್ 'ರಾಮನೆಸಗಿದಚ್ಚರಿಯೆಸಕಂ' ಎಂಬೊಂದು ಪದಾರ್ಥಮಂ ಚಿಕದೇವರಾಯನೊಳಾರೋಪಿಸಿ ಪೇೞ್ದುದಱಿಂದಿದು ಪದಾರ್ಥವೃತ್ತಿನಿದರ್ಶನೆಯೆನಿಪುದು.

ಮತ್ತಂ, (3), (4) "ಅಪರಾಂ ಬೋಧನಂ ಪ್ರಾಹುಃ
ಕ್ರಿಯಯಾ ಸತ್ಸದರ್ಥಯೋಃ ‖ "

[ವೃತ್ತಿ] ಒಂದು ವಸ್ತುವಿನೊಳಿರ್ಪುದೊಂದು ಕಾರ್ಯಂ ಲೋಗರ್ಗೆ ಪೊಲ್ಲದ ಕಜ್ಜಮಂ ತಿಳಿಪುವಂತಿರ್ಪುದೆಂದು ಪೇೞ್, (3) ಅಸದರ್ಥಬೋಧನಮೆಂದುಂ ; ನಲ್ಗೆಯ್ತಮಂ ತಿಳಿಪುವಂತಿರ್ಪುದೆಂದು ಪೇೞ್ (4) ಸದರ್ಥಬೋಧನಮೆಂದುಂ, ಎರಡುಂ ನಿದರ್ಶನೆಯೆನಿಪುದು.
ಎಂತೆನೆ :—

ಕಂ॥ ಅಱಿಕಲ್ಪೊಗ್ಗಡಂ ಕೊಂಡವ ।
ರುಱುಬಿದೊಡಿದಿರಾಂಪುವರಿದು ಬಿದಿರೂರವರೆಂ ॥
ದಱಿಯುತೆ ಚಿಕದೇವೇಂದ್ರಂ ।
ತೞತೞದಿರ್ಕ್ಕೇರಿಯುವರ ಸೊರ್ಕಂ ಮುಱಿದಂ ॥೬೧

ಇದಱೊಳ್ ಚಿಕದೇವರಾಯನಿರ್ಕೇರಿಯುವರ ಸೊರ್ಕಂ ಮುಱಿದನೆಂಬೀಕಾರ್ಯಂ ಅಱಿಕಲ್ಲೊಡಂ ಕೊಂಡವಱೊಳ್ ಬಿದಿರೂರವಗದಿರಾಂಪುದು ಪೊಲ್ಲದ ಕಜ್ಜಮೆಂಬುದು ತಿಳಿಪುವಂತಿರ್ಪುದೆಂದು ಪೇೞ್ವುದಱಿಂದೆ ಅಸದರ್ಥಬೋಧನಂ. ಮತ್ತಂ,

ಕಂ॥ ಪತಿತದ್ವಿಜನುಮನಾಗಮ ।
ಗತಿಯುಱಿತವರಱಿಪರೆಂಬುದಂ ತಿಳಿಪುತ್ತ ॥
ಪ್ರತಿಮಂ ಚಿಕದೇವೇಂದ್ರಂ ।
ಕೃತಮತಿಯಾ ಚೆನ್ನಬಸವನಂ ಮನ್ನಿಸಿದಂ ॥೬೦

ಇದಱೊಳ್ ಚಿಕದೇವರಾಯಂ ಚೆನ್ನಬಸವನಂ ಮನ್ನಿಸಿದನೆಂಬ ಕಾರ್ಯಮಾಗಮವೇದಿಗಳ್ಪತಿತದ್ವಿಜನುಮಂ ಕೊಲ್ಲರೆಂಬ ನಲ್ಗಿಯ್ತಮಂ ತಿಳಿಪುವಂತಿರ್ಪುದೆಂದು ಪೇೞ್ವುದಱಿಂ ಸದರ್ಥಬೋಧನಮೆನಿಪ್ಪುದು.

ಇಂತಿವು ನಾಲ್ಕುಂ ನಿದರ್ಶನಾಲಂಕಾರಂಗಳ್.

---

ವ್ಯತಿರೇಕಾಲಂಕಾರಮೆಂಬುದು :—

"ವ್ಯತಿರೇಕೋ ವಿಶೇಷಶ್ಚೇ
ದುಪಮಾನೋಪಮೇಯಯೋಃ ॥"

[ವೃತ್ತಿ] ಉಪಮಾನವಸ್ತುವತ್ತಣಿಂದುಪಮೇಯದೊಳ್ವಿಶೇಷಮಂ ಪೇೞ್ಯುದು ವ್ಯತಿರೇಕಾಲಂಕಾರಮೆನಿಪ್ಪುದು.

ಎಂತೆನೆ :—

ಕಂ॥ ಮಧುರೆಯ ವೆಂಕಟಕೃಷ್ಣಂ ।
ಪ್ರಥಿತಂ ಸರಿ ಸಾಟಿಯಾ ಕಿರೀಟಿಗೆ ಮತ್ತೇಂ ॥
ಪ್ರಥನದೊಳಪ್ರತಿಮಭಟರ್ ।
ಮಧುವನದಿಂದಟ್ಟೆ ನೆಟ್ಟನಾದನಪಾರ್ಥಂ ॥೬೧

ಇದಱೊಳ್ ಉಪಮಾನಮಾದರ್ಜುನನತ್ತಣಿಂದುಪಮೇಯಮಾದ ಮಧುರೆಯ ದೞಪತಿ ವೆಂಕಟಕೃಷ್ಣನಾಯಕಂಗಪಾರ್ಥತ್ವಮೆಂಬೀ ವಿಶೇಷಮಂ ಪೇೞ್ವುದಱಿಂ ವ್ಯತಿರೇಕಾಲಂಕಾರಂ.

---

೧೯. ಸಹೋಕ್ತ್ಯಲಂಕಾರಮೆಂಬುದು:—

"ಸಹೋಕ್ತಿಸ್ಸಹಭಾವಶ್ಚೇ
ದ್ಭಾಸತೇ ಜನರಂಜನಃ ॥"

[ವೃತ್ತಿ] ಒಂದು ವಸ್ತು ಒಂದು ತೆಱನಾದುದೆಂದು ಪೇೞ್ವೆಡೆಯೊಳ್ ಪೆಱತೊಂದು ವಸ್ತುವುಮದಱೊಡನಂತಾದುದೆಂದುದನಾಗಿ ಪೇೞೆ ಸಹೋಕ್ತ್ಯಲಂಕಾರಮೆನಿಪ್ಪುದು.

ಎಂತೆನೆ:—

ಕಂ॥ ಮಸಗಿ ಮಹಿಶೂರವರ್ತಗು ।
*ಳ್ದಸಗೞಿದರ್ ನಾಡ ಪೀಡೆಯೊಡನಾರೆಯುರಂ ॥
ಪಸರಿಸಿತೀಲೋಗರ ಸಂ ।
ತಸದೊಡನಪ್ರತಿಮವೀರನೊಳ್ಜಸದೆಸಕಂ ॥೬೮

---

೨೦. ವಿನೋಕ್ತ್ಯಲಂಕಾರಮೆರಡುಂ ತೆಱಂ. ಎಂತೆನೆ:—

(1) "ವಿನೋಕ್ತಿಶ್ಚೇದ್ವಿನಾಕಿಂಚಿ
ತ್ಪ್ರಸ್ತುತಂಹೀನಮುಚ್ಯತೇ ॥"

[ವೃತ್ತಿ] ಒಂದು ಕಜ್ಜಮನುೞಿದುದಱಿಂದೊಂದು ವಸ್ತು ಹೀನಮಾದುದೆಂದು ಪೇೞ್ವುದು ವಿನೋಕ್ತಿಯೆನಿಪ್ಪುದು.

ಎಂತೆನೆ:—

ಕಂ॥ ವ್ಯಕ್ತಮಿದಪ್ರತಿಮನ ಪದ ।

ಭಕ್ತಿಯನುೞಿಮುೞಿವುದರಿದು ನೆರೆವ್ರೊರೆದೊರೆಗಳ್ ॥
ಶಕ್ತಿಗಳದೊರ್ಡಮೇಂ ಪರಿ ।
ಪಕ್ತಿಯೊಳೆಂತಾದನೆಣಿಸಿಮೇದುಲಶಾಹಂ ॥೬೫

ಮತ್ತಂ, (2) "ತಚ್ಚೇತ್ಕಿಂಚಿದ್ವಿನಾರಮ್ಯಂ
ವಿನೋಕ್ತಿಸ್ಸಾಪಿ ಕಥ್ಯತೇ ॥ "

[ವೃತ್ತಿ] ಒಂದು ಕಜ್ಜಮನುೞಿಮುದೞುಂದೊಂದು ವಸ್ತು ಪಸನಾದುದೊಂದು ಪೇೞ್ಯುದುಂ ವಿನೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಮುನ್ನೞಿಗಜ್ಜಮುದೆನಿತೆನಿ ।
ತುನ್ನೆಗೞ್ಗನೆಲೆಯನುೞಿದು ನೀನೇ ಗತಿಯೆಂ ॥
ಬನ್ನೆಗಮುಡಿಗೆಱಗಿದರಂ ।
ಮನ್ನಿಸಿ ಸಲಪ್ಪುವರುಪೇಂದ್ರಚಿಕದೇವೇಂದ್ರರ್॥೬೬

---

(೨೨.) ಸಮಾಸೋಕ್ತ್ಯಲಂಕಾರಮೆಂಬುದು :—

"ಸಮಾಸೋಕ್ತಿಃ ಪರಿಸ್ಫೂರ್ತಿಃ
ಪ್ರಸ್ತುತೇಪ್ರಸ್ತುತಸ್ಯ ಚೇತ್ ॥ "

[ವೃತ್ತಿ] ಪ್ರಸ್ತುತವೃತ್ತಾಂತಮಂ ಬಣ್ಣಿಸುವೆಡೆಯೊಳ್ವಿಶೇಷಣಾದಿ ಸಾಮರ್ಥ್ಯದಿಂದಪ್ರಸ್ತುತವಪ್ಪ ವೃತ್ತಾಂತಂ ತೋೞ್ಯುದು ಸಮಾಸೋಕ್ತಿಯೆನಿಪ್ಪುದು.

ಎಂತೆನೆ :—

ವೃ॥ ಸುಗುಣಂಗಳ್ಪ್ಪದಿದೋಜೆಗೊಲ್ದು ಚಿಕದೇವೇಂದ್ರಂ ಕಲಾಕೋವಿದಂ । ತೆಗೆದುತ್ಸಂಗದೊಳಟ್ಟು ಲೀಲೆ ಮಿಗೆ ವಕ್ಷೋರಂಗದೊಳ್ಪ್ಪಾರ್ಚಿಸೆ ॥ ಳ್ಳುಗುರ್ಗೆಯ್ತಂ ಪವಣೊಂದೆ ಮೇಳದಿರವಂ ರಾಗೋಚಿ

ತಂಗೆಯ್ದಿನಂ । ನೊಗದಿಂ ಸೂಳ್ವಡಿಕುಂ ಕಳಾವತಿ ಕಳಾರಾವಂಗ
ಳಂ ಪಾಂಗಿನಿಂ ॥೭೩

ಇದಱೊಳ್ ಪ್ರಸ್ತುತವಾದ ವೀಣಾವೃತ್ತಾಂತವಂ ಬಣ್ಣಿಸುವೆಡೆಯೊಳ್ ಸುಗುಣಂಗಳ್ಪಡಿದೋಱೆ ಎಂಬಿವು ಮುಂತಾದ ವಿಶೇಷಣಸಾಮ್ಯದಿಂದಪ್ರಸ್ತುತವಾದ ಪ್ರಣಯಿನೀವೃತ್ತಾಂತಂ ತೋರ್ಪುದಱಿಂ ಸಮಾಸೋಕ್ತಿಯೆನಿಪ್ಪುದು. 6

(೨೩.) ಪರಿಕರಾಲಂಕಾರಮೆಂಬುದು :—

"ಅಲಂಕಾರಃ ಪರಿಕರಃ
ಸಾಭಿಪ್ರಾಯೇ ವಿಶೇಷಣೇ ॥"

[ವೃತ್ತಿ] ಒಂದು ವಸ್ತುವಂ ಬಂಣಿಸುವಾಗಳ್ವಿಶೇಷಣಂಗಳಭಿಪ್ರಾಯಗರ್ಭವಾಗಿರೆ ಪರಿಕರಾಲಂಕಾರಂ.

ಎಂತೆನೆ :—

ಕಂ॥ ಗರುಡಧ್ವಜನಂ ನಂದಕ ।
ಧರನಂ ಚಿಕದೇವರಾಜನರಪತಿಯುಂ ಕಂ ॥
ಡಿರವಱಿದೆೞ್ದೋಡುವರಾ । 15
ಸುರಭಾವಂದಳೆದ ಮಲಿಸಬೇಡಮುರಾಟರ್ ॥೭೪

ಇದಱೊಳ್ ಚಿಕದೇವರಾಯಂಗೆ ಗರುಡಧ್ವಜಂ ನಂದಕಧರನೆಂಬ ವಿಶೇಷಣಂಗಳುಂ ಶತ್ರುಗಳ್ಗಾಸುರಭಾವಂದಳೆದವರೆಂಬ ವಿಶೇಷಣಮುಂ ಗರುಡಧ್ವಜನಂ ಕಂಡ ಅಸುರರಂತೆ ಶತ್ರುಗಳ್ಮಱಿದೋಡಿದರೆಂಬರ್ಥಗರ್ಭಿತಂಗಳಾಗಿಪ್ಪುದಱಿಂದಿದು ಪರಿಕರಾಲಂಕಾರಂ.

(೨೪.) ಪರಿಕರಾಂಕುರಮೆಂಬುದು :—

"ಸಾಭಿಪ್ರಾಯೇ ವಿಶೇಷ್ಯೇತು
ಭವೇತ್ಪರಿಕರಾಂಕುರಃ ॥"

[ವೃತ್ತಿ] ಒಂದು ವಸ್ತುವಂ ಬಣ್ಣಿಸುವಾಗಳ್ವಿಶೇಷ್ಯಪದಮಭಿಪ್ರಾಯಗರ್ಭಮಾಗಿರೆ ಪರಿಕರಾಂಕುರಾಲಂಕಾರಂ.

ಎಂತೆನೆ :—

ಕಂ॥ ಅಂಜುವರಪ್ರತಿಮಂಗಾ ।
ತಂಜಾವೂರ್ಮಧುರೆಚೆಂಜಿಶೀರೆಯ ದೊರೆಗಳ್ ॥
ಕುಂಜರಕಿದಿರ್ಚುವಜದಂ ।
ತೇಂ ಜಡನಿಧಿರಾಂತು ಮುಱಿದನಿರ್ಕೇರಿಯುವಂ ॥೬೯

ಇದಱೊಳ್ ಇರ್ಕೇರಿಯುವನೆಂಬ ವಿಶೇಷ್ಯಪದಮೆರಡುಂ ಕೇರಿಯುವನೆಂಬಭಿಪ್ರಾಯಗರ್ಭಮಾಗಿರ್ಪುದಱಿಂ ಪರಿಕರಾಂಕುರಾಲಂಕಾರಂ.

---

೫೪. ಶ್ಲೇಷಾಲಂಕಾರಂ ಮೂಱುಂ ತೆಱಂ :—

"ನಾನಾರ್ಥಸಂಶ್ರಯಃ ಶ್ಲೇಷೋ
ವರ್ಣ್ಯಾವರ್ಣ್ಯೋಭಯಾತ್ಮಕಃ ॥"

[ವೃತ್ತಿ] ವಾಕ್ಯದೊಳ್ಪದಂಗಳ್ನಾನಾರ್ಥಮಾಗಿರೆಯದುಶ್ಲೇಷಾಲಂಕಾರಮೆನಿಪ್ಪುದು. ಇದುವುಮೆರಡುಮರ್ಥಂಗಳುಂ ವರ್ಣ್ಯಮಾಗಿರೆ, (1) ವರ್ಣ್ಯಶ್ಲೇಷಮೆಂದುಂ ; ಎರಡುಮರ್ಥಂಗಳುಂ ಅವರ್ಣ್ಯಂಗಳಾಗಿರೆ, (2) ಅವರ್ಣ್ಯಶ್ಲೇಷಮೆಂದುಂ ; ಒಂದರ್ಥಂ ವರ್ಣ್ಯಮುಮೊಂದರ್ಥಮವರ್ಣ್ಯಮುಮಾಗಿರೆ, (3) ಉಭಯಶ್ಲೇಷಮೆಂದುಂ ಮೂಱುಂ ತೆಱಂ.

(1) ವರ್ಣ್ಯಶ್ಲೇಷಮೆಂತೆನೆ :—

ಕಂ॥ ನರಪತಿಯೊಳ್ಬಗೆಯುಂ ಕರ ।
ಸರಸಿಜಮುಂ ದಾನವಾರಿಪರಿಶೀಲನದಿಂ ॥

ಪುರುಳೆನಿಸಿ ಪೊಱೆದು ಪಾರ್ವರ |
ಪರಿಪರಿ ದುರ್ಗತಿಯ ದುಃಖಮಂ ಪರಿಹರಿಕುಂ ||೭೦

ಇದಱೊಳ್ ಚಿಕದೇವರಾಯನ ಹೃದಯಕರಸರಸಿಜಂಗಳೆರಡುಂ ವರ್ಣ್ಯಂಗಳಾಗಿ ದಾನವಾರಿಪರಿಶೀಲನಮೆಂಬರ್ಥಮೆರಡಱೊಳಂ ಸಮಮಾಗಿ ವರ್ತಿಸುವುದಱಿಂ ವರ್ಣ್ಯಶ್ಲೇಷಂ.

(2) ಅವರ್ಣ್ಯಶ್ಲೇಷಮೆಂತೆನೆ :—

ಕಂ|| ಪೊಸಯಿಸಿ ಪುಯ್ಯೋಲಗಮಂ |
ಪೊಸಕುದುರೆಯುಮಪ್ಪೊರ್ಣಿಬ್ಬ ಮಹಿಶೂರವರುಂ ||
ವಸುಧಾರೆಯಿಟ್ಟರೆಂದೇ |
ಬಸವಱಿಂದಂ ಬೆರ್ಚಿ ಬೆದಱಿ ಬಿದಿರೂರ್ಬ್ಬಸವಂ ||೭೧

ಇದಱೊಳ್ ಬಿದಿರೂರ ಬಸವನಾಯಕನಂ ಬಣ್ಣಿಸುವೆಡೆಯೊಳ್ವಸುಧಾರೆಯಿಟ್ಟರೆಂಬರ್ಥಮವರ್ಣ್ಯಮಾದ ಪೊಸಬಲಗದ ವಜೀರರೊಳಂ ಪೊಣರ್ಚುವ ಮಹಿಶೂರವರೊಳಂ ವರ್ತಿಸುವುದಱಿಂದವರ್ಣ್ಯಶ್ಲೇಷಮೆನಿಪುದು.

(3) ವರ್ಣ್ಯಾವರ್ಣ್ಯೋಭಯಶ್ಲೇಷಮೆಂತೆನೆ :—

ಕಂ|| ಉದಿಸಿ ಚಿಕದೇವಚಂದ್ರಮ |
ನೊದೆದುಮ್ಮೆಯನೊರಸಿ ತಮಮನುಡುಗಿಸಿ ಖಳರಂ ||
ಪದೆದೋಡಿಸಿ ಪಾರ್ಬ್ಬರನೊಡ |
ನೊದವಿಸಿದಂ ಕುವಲಯಕ್ಕೆ ಮಿಕ್ಕುಂ ಮುದಮಂ ||೭೨

ಇದಱೊಳ್ ಕುವಲಯಕ್ಕೆ ಮುದಮನೊದವಿಸಿದನೆಂಬ ಪದಂ ಶಬ್ದಶಕ್ತಿಯಿಂ ವರ್ಣ್ಯಮಾದ ಚಿಕದೇವರಾಯನೊಳಮವರ್ಣ್ಯಮಾದ ಚಂದ್ರನೊಳಂ ವರ್ತಿಸುವುದಱಿಂದಿದು ಉಭಯಶ್ಲೇಷಮೆನಿಪುದು.

ಇಂತಿವು ಮೂಱುಂ ಶ್ಲೇಷಾಲಂಕಾರಂಗಳ್.

---

೨೬. ಅಪ್ರಸ್ತುತಪ್ರಶಂಸಾಲಂಕಾರಮೈದುಂ ತೆಱಂ :—

"ಅಪ್ರಸ್ತುತಪ್ರಶಂಸಾಸ್ಯಾ
ತ್ಸಾಯತ್ರಪ್ರಸ್ತುತಾಶ್ರಯಾ ॥"

[ವೃತ್ತಿ] ಅಪ್ರಸ್ತುತವೃತ್ತಾಂತಮಂ ಬಣ್ಣಿಸುವದಱಿಂ ಪ್ರಸ್ತುತ ವೃತ್ತಾಂತಂ ತೋಱುವುದು ಅಪ್ರಸ್ತುತಪ್ರಶಂಸೆಯೆನಿಪ್ಪುದು. 6

"ಕಾರ್ಯೇ ನಿಮಿತ್ತೇ ಸಾಮಾನ್ಯೇ ವಿಶೇಷೇ ಪ್ರಸ್ತುತೇ ಯದಿ ।
ತದನ್ಯಸ್ಯ ವಚಸ್ತದ್ವತ್ಸದೃಶೇ ಸದೃಶಸ್ಯಚ ॥"

[ವೃತ್ತಿ] ಅಪ್ರಸ್ತುತಮಾದ ಕಾರ್ಯಮಂ ಬಣ್ಣಿಸೆ ತತ್ಕಾರಣಮಾದ ಪ್ರಸ್ತುತದೊಳತಿಶಯಂ ತೋಱೆ, (1) ಕಾರ್ಯನಿಬಂಧನೆಯೆಂದುಂ; ಇಂತು ಕಾರಣಮಂ ಬಂಣಿಸೆ ಕಾರ್ಯದೊಳತಿಶಯಂ ತೋಱೆ, (2) ಕಾರಣನಿಬಂಧನೆಯೆಂದುಂ; ಸಾಮಾನ್ಯಮಂ ಬಣ್ಣಿಸೆ, ವಿಶೇಷದೊಳತಿಶಯಂ ತೋಱೆ, (3) ಸಾಮಾನ್ಯನಿಬಂಧನೆಯೆಂದುಂ; ವಿಶೇಷದಿಂ ಸಾಮಾನ್ಯಂ ತೋಱೆ, (4) ವಿಶೇಷನಿಬಂಧನೆಯೆಂದುಂ; ಸದೃಶವಸ್ತುವಿಂ ಸದೃಶವಸ್ತು ತೋಱೆ, (5) ಸಾದೃಶ್ಯನಿಬಂಧನೆಯೆಂದುಂ ಐದುಂ ತೆಱಂ.

(1) ಇವಱೊಳ್ ಕಾರ್ಯನಿಬಂಧನೆಯೆಂತೆನೆ :— 16

ವೃ॥ ಇರದೊಱೆವಾಲಿನೀರ್ವೊನಲಿನೞ್ಗಿ ಪರಗ್ಗಲಿಪಾಸ್ಯಶೋಷಮಂ ।
ಜರಿದು ಪೊದೞ್ದ ನೀೞ್ಮುಡಿಯ ಪೆರ್ಮ್ಮುಸುಕಿಂ ಬಿಸಿಲಾರ್ಪನಾಱುವರ್॥
ಹರವಸದಿಂದೆ ಚುರ್ಚುವೆರ್ದೆ*ಗಿಚ್ಚಿನ ಪೆರ್ಚುಗೆಯಂ ಕೞಲ್ಚುವರ್ ।
ನರಪತಿಯೊಳ್ಪೊಣರ್ಕೆವಡೆದಾರೆಯರಾಯರ ರಾಣಿವಾಸಿಯರ್ ॥೨೩

ಇದಱೊಳ್ ಶತ್ರುಸ್ತ್ರೀಯರ್ಗೆ ಪತಿವಿಯೋಗದಿಂದುಂಟಾದ ಅಶ್ರು

ಪಾತಾದಿಕಾರ್ಯಂಗಳನಪ್ರಸ್ತುತ ವಾಗಿ ಬಂಣಿಸುವದಱಿಂ ತತ್ಕಾರಣ ವಾದ ಶತ್ರುಸಂಹಾರವ್ರಶಂಸೆ ಪ್ರಸ್ತುತವಾಗಿ ತೋರ್ಪುದಱಿಂದಿದು ಕಾರ್ಯನಿಬಂಧನೆಯೆನಿಪ್ಪುದು. ಮತ್ತಂ,

ವೃ॥ ನಿರುಪಧಿಸದ್ಗುಣಾಮೃತನಿಧೀ ಚಿಕದೇವನರೇಂದ್ರಚಂದ್ರಕೇ।
ಳ್ನರವಿಸೆ ನಿನ್ನ ಸದ್ಗುಣಗಣಂಗಳನಾದುದು ವಾರ್ಧಿ ಬೆಂಚೆವೊಲ್॥
ತರಣಿ ಹಿಮಾಂಶುವೊಲ್ಗಿರಿಗಳೆಕ್ಕಿದ ಪಟ್ಟಿಯ ವೊತ್ತದಂತೆವೊಲ್।
ಸುರಪತಿಮುಖ್ಯಗೆಣ್ದೆಸೆವಳರ್ಗಡಿಯೊಳ್ಗುರಿಕಾಱರೆಂಬವೊಲ್॥೭೮

ಇದಱೊಳ್ ಸಮುದ್ರಸೂರ್ಯಾದಿಗಳ್ಪಲ್ವಲಚಂದ್ರಾದಿಗಳಂತೆ ತೋರ್ದರೆಂದಪ್ರಸ್ತುತವಾದ ಕಾರ್ಯಮಂ ಬಣ್ಣಿಸುವುದಱಿಂ ಚಿಕದೇವರಾಯನ ಗಾಂಭೀರ್ಯಪ್ರತಾಪಾದ್ಯತಿಶಯನಿರೂಪಣಮೆಂಬ ತತ್ಕಾರಣಂ ಪ್ರಸ್ತುತವಾಗಿ ತೋರ್ಪುದಱಿಂದಿದುವುಂ ಕಾರ್ಯನಿಬಂಧನೆಯೆನಿಪ್ಪುದು.

ಪೂರ್ವಪದ್ಯದೊಳ್ ಶತ್ರುಸಂಹಾರಾತಿಶಯವೆಂಬ ವಸ್ತುವೆ ಕಾರಣವಾಗಿ ತೋರ್ಕುಂ. ಈಪದ್ಯದೊಳ್ಗಾಂಭೀರ್ಯಾದಿನಿರೂಪಣಂ ಕಾರಣವಾಗಿತೋರ್ಪುದೆಂದು ಭೇದಂ. 14

(2) ಕಾರಣನಿಬಂಧನೆಯೆಂತೆನೆ :—

ಕಂ॥ ನಿರವಿಸಿ ಚಿಕದೇವೇಂದ್ರನ।
ನಿರವಧಿಸದ್ಗುಣದ ವಿಭವಮಂ ಬಿಜ್ಜೆವಳರ್॥
ಪರಮೇಷ್ಠಿಯನೆಡೆಗೊಳಸದೆ।
ಪರಮಾತ್ಮಂ ಸೃಷ್ಟಿಗೆಯ್ವುದೊಳದೆಂದೊರೆವರ್॥೭೯ 19

ಇದಱೊಳಪ್ರಸ್ತುತವಾಗಿ ಪರಮಾತ್ಮಂಗೆ ಕಾರಣತ್ವಮಂ ಬಣ್ಣಿಸುಸುವುದಱಿಂ ತತ್ಕಾರ್ಯಮೆಂಬ ಚಿಕದೇವರಾಯನ ಗುಣರೂಪವಿಭವಾದಿಪ್ರಶಂಸೆ ಪ್ರಸ್ತುತವಾಗಿ ತೋರ್ಪುದಱಿಂ ಕಾರಣನಿಬಂಧನೆಯೆನಿಪ್ಪುದು.

(3) ಸಾಮಾನ್ಯನಿಬಂಧನೆಯೆಂತೆನೆ :—

ಕಂ॥ ಪಲಪಲರಂ ಪಲ್ಲಟಿಸುವ ।
ಗೆಲವಕ್ಕಾಗಲ್ಲವೆಣ್ಗೆ ಪಿಂತಣ್ಗಿದಿರೊಳ್ ॥
ನಿಱಿ ದೇವರಾಜತನಯರ್ ।
ಬೆಲೆವೆಣ್ತನದುರ್ಬುಂ ಕೊರ್ಬುಂ ಪೆಂಪೇಱುಗುಮೆ ? ॥೭೬

ಇದಱೊಳಪ್ರಸ್ತುತರಾದ ದೇವರಾಜತನಯರಪ್ಪ ಜಯಂತಾರ್ಜುನಾದಿಗಳಿದಿರೊಳ್ ರಂಭೋರ್ವಶ್ಯಾದಿ ವೇಶ್ಯೆಯರ ಬಿಂಕಂ ಬೆಲೆವಡೆಯುದೆಂಬ ಸಾಮಾನ್ಯನಿರೂಪಣದಿಂ ಪ್ರಸ್ತುತವಾಗಿ ಬೆಲೆವೆಣ್ಣಂತಿರ್ದ ಗೆಲ್ಲವೆಣ್ ಚಿಕದೇವರಾಯಂಗೆ ವಶ್ಯೆಯಾಗಿರ್ಪಳೆಂಬ ವಿಶೇಷಂ ತೋರ್ಪುದಱಿಂ ಸಾಮಾನ್ಯನಿಬಂಧನೆಯೆನಿಪುದು.

(4) ವಿಶೇಷನಿಬಂಧನೆಯೆಂತೆನೆ :—

ಕಂ॥ ಪಿಂತೆಗೆದನೊರ್ವಂ ಫಲುಗುಣ ।
ನಂತುಟು ರಘುವೀರನುಂ ಗಡಾಹವದೊಳಗೆಂ ॥
ದಂತು ಮಹಿಶೂರಭಟರೋ ।
ರಂತುಸಿರ್ವರ್ ಪಂತವಾತುಗಳ ಪಸುಗೆಗಳೊಳ್ ॥೭೭

ಇದಱೊಳಪ್ರಸ್ತುತವಾದ ಅರ್ಜುನರಘುವೀರರಂ ಕಡೆಗಣ್ಚುವುದೆಂಬ ವಿಶೇಷದಿಂ ಪ್ರಸ್ತುತವಾದ ಮಹಿಶೂರಭಟರೆಂತಪ್ಪ ವೀರರಂ ಗಣನೆಗೆಯ್ವರೆಂದು ಸಾಮಾನ್ಯಂ ತೋರ್ಪುದಱಿಂ ವಿಶೇಷನಿಬಂಧನೆಯೆನಿಪುದು.

(5) ಸಾದೃಶ್ಯನಿಬಂಧನೆಯೆಂತೆನೆ :—

ಕಂ॥ ತೆಱುವಾಯೊಂದುಂ ಪಲರಂ ।
ತೆಱುಬಿದರುಂ ಬೀರರಕ್ಕೆ ಚಿಕದೇವೇಂದ್ರಾ ॥

ತೞಸಂದೊರ್ವರ್ಯೆ ಪಲರುಮ |

ನೆಱಿಯುಟ್ಟಿದ ಸವ್ಯಸಾಚಿಯು ವ್ರತಿವೀರಂ ॥೭೮

ಇದಱೊಳಪ್ರಸ್ತುತಮಾದರ್ಜುನಂ ತುಱುವಿಡಿವೆಡೆಯೊಳೊಂದೆ ವೇಳೆಯೊಳ್ ಭೀಷ್ಮದ್ರೋಣಕೃಪಕೃತವರ್ಮಕರ್ಣ ವಿಕರ್ಣದುರ್ಯೋಧನದುಶ್ಶಾಸನಾದಿಗಳಂ ಗೆಲ್ದವೃತ್ತಾಂತಮುಂ ಪ್ರೊಗೞ್ವುದಱಿಂ ತತ್ಸದೃಶಮಾಗಿ ಪ್ರಸ್ತುತದೊಂದುಗೂಡಿ ಒಂದೆ ಸೂೞಿಯೊಳೆಣ್ದೆಸೆಯಿಂದೇೞ್ತಂದ ಮರಾಟ ಮೊರಸ ಚೇಡ ಕೊಂಗ ತೆಲುಂಗ ಮಲೆಸ ಮಲೆಯಾಳಮುಂತಾದ ಪಲವುಂ ದೊರೆಗಳಂ ಗೆಲ್ದ ಚಿಕದೇವರಾಯನ ವೃತ್ತಾಂತಂ ತೋರ್ಪುದಱಿಂ ಸಾದೃಶ್ಯನಿಬಂಧನೆಯೆನಿಪ್ಪುದು.

ಇಂತಿವ್ವೈದುಂ ಅಪ್ರಸ್ತುತಪ್ರಶಂಸಾಲಂಕಾರಂಗಳ್.

---

೧೭. ಪ್ರಸ್ತುತಾಂಕುರಮೆಂಬುದು :—

“ ಪ್ರಸ್ತುತೇನ ಪ್ರಸ್ತುತಸ್ಯ

ದ್ಯೋತನೇ ಪ್ರಸ್ತುತಾಂಕುರಃ ॥ ”

[ವೃತ್ತಿ] ಪ್ರಸ್ತುತಮಾದ ಒಂದರ್ಥಮುಂ ಬಂಣಿಸೆ ಮತ್ತೊಂ ಪ್ರಸ್ತುತಮಾದೊಂದರ್ಥಂ ತೋಱಿಯುದು ಪ್ರಸ್ತುತಾಂಕುರಾಲಂಕಾರಂ.

ಎಂತೆನೆ :—

ಕಂ॥ ಮಸಗುವ ಮಧುರಾಧರೆಯಂ |

ಬಸವೞಿಸಿದುದುಚಿತಮಪ್ಪುದಪ್ರತಿಮಾ ಕೇಳ್ ॥

ವಸುಧಾರೆಯೀೞ್ದನೆಂದೇ |

ಪಸನಲ್ಲದ ಕೆಳದಿಗಳೆಗೆ ಬಗೆಗೊಳಿಸುವರೇ ॥೭೯

ಇದಱೊಳ್ ಪ್ರಸ್ತುತಮಾದ ಮಧುರೆಯ ನಾಡಂ ದಾೞಿಟ್ಟುದಂ ಕೆಳದಿಯವರ ವಸುಧಾರೆಯೆಂಬ ಕೋಂಟೆಯನಾಕ್ರಮಿಸಿಯುವಱಿಂ

ಕಪ್ಪಗಾಣ್ಕೆಗಳನೊಪ್ಪುಗೊಂಬ ವೃತ್ತಾಂತಮಂ ಬಣ್ಣಿಸುವುದಱಂ ಮತ್ತಂ ರಾಜವರ್ಣನದೊಳ್ಪ್ರಸ್ತುತವಾದ ಪ್ರಣಯಿನೀಪರಿಗ್ರಹಣ ದೂತ್ಯಪಹಾಸಂಗಳ್ತೋರ್ಪುದಱಿಂದಿದು ಪ್ರಸ್ತುತಾಂಕುರಾಲಂಕಾರಂ.

---

೭೮. ಪರ್ಯಾಯೋಕ್ತಾಲಂಕಾರಮೆರಡುಂ ತೆಱಂ.

(1) " ಪರ್ಯಾಯೋಕ್ತಂತು ಗಮ್ಯಸ್ಯ
ವಚೋಭಂಗ್ಯಂತರಾಶ್ರಯಂ ॥ "

[ವೃತ್ತಿ] ಪೇೞಿತಕ್ಕರ್ಥಮಂ ಪ್ರಕಾಶಮಾಗಿ ಪೇೞದೆ ಪೆಱತೊಂದು ತೆಱದೊಳಂದಮಾಗಿ ಪೇೞ್ಪುದು ಪರ್ಯಾಯೋಕ್ತಂ.

ಎಂತೆನೆ :—

ಕಂ॥ ಒರ್ವಗೆಯೊಂದಾನೆಯು ಮೇ ।
ಲಿರ್ವರುಮಿರೆ ಕೊಪ್ಪುಖಾನ ಚೆನಬಸವರದೆಂ ।
ತೊರ್ವನ ಪೆಣ್ಡಿರ ಮೆಯ್ಸಿರಿ ।
ಯೊರ್ವನ ಸತಿಯೋಷ್ಠದಿಂಪು ಬಱಿದಾಯ್ತಕಟಾ ! ॥೮೦

ಇದಱೊಳ್ ಒಂದಾನೆಯೇಱ ಬಂದಿರ್ಕೇರಿಯು ಕೊಪಖಾನನ ಹರಣ ಪಱಿದುದಂ ಚೆನ್ನಬಸವನ ಪಲ್ಮುಱಿದುದಂ ವಾಚ್ಯವಾಗಿ ಪೇೞದೆಯೊರ್ವನ ಪೆಂಡಿರ ಮೆಯ್ಸಿರಿಯುಮೊರ್ವನ ಸತಿಯೋಷ್ಠದಿಂಪುಂ ಬಱಿದಾಯ್ತೆಂದು ಪ್ರಕಾರಾಂತರದಿಂ ಪೇೞ್ದುದಱಿಂದಿದು ಪರ್ಯಾಯೋಕ್ತಂ.

ಮತ್ತಂ, (2) " ಪರ್ಯಾಯೋಕ್ತಂ ತದಪ್ಯಾಹು
ರ್ಯದ್ವ್ಯಾಜೇನೇಷ್ಟಸಾಧನಂ ॥ "

[ವೃತ್ತಿ] ಪೆಱತೊಂದು ಕಜ್ಜಮಂ ನೆವಂಗೆಯ್ದೊರ್ವಂಗಿಷ್ಟಮಂ ಸಾಧಿಪುದುಂ ಪರ್ಯಾಯೋಕ್ತಾಲಂಕಾರಂ.

ಎಂತೆನೆ :—

ಕಂ॥ ನರಪತಿ ಕೇಳ್ನಂನೊಳ್ಪಡಿ ।
ಬರಿಸಿದ ಮಾವಳಗವಡೆಯನುಡುಗಿಪ ನೆವದಿಂ ॥
ಪರಿಹರಿಸಿ ಪಾಪಮನಿತಂ ।
ಸುರಸದ್ಮದೊಳರಿಸಿ ಸೊಗಮನನುಗೊಳಿಸಿದಪ್ಪೈ ॥೮೧

ಇದಱೊಳ್ ಮಾಱಾಂತ ಮರಾಟಗರಂ ಪೊಯ್ವ ನೆವದಿಂದವರ್ಗೆ ಪಾಪಂ ಪೋಗಿ ವೀರಸ್ವರ್ಗಸುಖಮುಂಬಿಷ್ಟಮುಂ ಸಂಪಾದಿಸಿದಪ್ಪೈ ಎಂಬುದಱಿಂ ಪರ್ಯಾಯೋಕ್ತಂ.

ಇಂತಿವೆರಡುಂ ಪರ್ಯಾಯೋಕ್ತಂಗಳ್.

---

ವ್ಯಾಜಸ್ತುತಿಯೆಂದುಂ ವ್ಯಾಜನಿಂದೆಯೆಂದುಮೆರಡುಮಲಂಕಾರಗಳ್.

" ಉಕ್ತಿರ್ವ್ಯಾಜಸ್ತುತಿರ್ನಿಂದಾ
ಸ್ತುತಿಭ್ಯಾಂ ಸ್ತುತಿನಿಂದಯೋಃ॥ "

[ವೃತ್ತಿ] ಒಂದು ವಸ್ತುವಂ, ನಿಂದಿಸುವ ನೆವದಿಂ ಸ್ತುತಿಸುವುದು ವ್ಯಾಜಸ್ತುತಿಯೆಂದುಂ ; ಸ್ತುತಿಸುವ ನೆವದಿಂ ನಿಂದಿಪುದು, ವ್ಯಾಜನಿಂದೆಯೆಂದುಂ ಪೇೞಲ್ಪಡುಗುಂ.

(೬೯.) ವ್ಯಾಜಸ್ತುತಿಯೆಂತೆನೆ :—

ವೃ॥ ಅಡರ್ವರಾತ್ತಂ ಮೇರುಶೃಂಗಕ್ಕರಿಗಳಡಱ ನೀಂ ತನ್ಮಹಾದುರ್ಗ
ಮಂ ಪಾ । ಯ್ದುಡಿವರ್ ಸ್ವರ್ದ್ವಾರಮಂ ತಾಮುಡಿಯೆ ರಿಪುಪುರೀ
ಗೋಪುರವ್ರಾತಮಂ ನೀಂ ॥ ಪಿಡಿವರ್ಕಾಂಚೆಂಡಿರಂ ತಾಂ ಪಿಡಿಯೆ
ಜಡಿದು ತತ್ಕನ್ಯಕಾರತ್ನಮಂ ನೀಂ। ನುಡಿ ನೀನಿಂತಿದುರ್ಗಮೆಂತಪ್ಪ
ತಿಮನೆನಿಸುವೈ ಶೂರಲೋಕೈಕವೀರಾ ॥೮೨

ಇದಱೊಳ್ ಚಿಕದೇವರಾಯಂ ಕುಂನತೂರ್ ಮದ್ದಗಿರಿ ಮಹಾರಾಜನ ದುರ್ಗಂ ಮುಂತಾದ ಗಿರಿದುರ್ಗಂಗಳನಾಕ್ರಮಿಸಿಯಾಪೆರ್ವಾಗಿಲಂ

ಮುಱಿಸಾಯಾದುರ್ಗಾಧಿಪರ ಕನ್ನೆವೆಣ್ಗಳಂ ಬಂದಿಗೊಳ್ವನಿತರೊಳವರ್ ತಂತಮ್ಮ ದುರ್ಗಂಗಳತ್ತಣಿಂ ಪಲರ್ಮಡಿ ಪಿರಿದಾದ ಮಹಾಮೇರುವನಾಕ್ರಮಿಸಿಯಾಬಾಗಿಲಂ ಮುಱಿದಲ್ಲಿಯ ಪೆಂಡಿರಂ ಪಿಡಿವರೆಂದು ಪಗೆವರ ಕೈಮೆಯುಂ ಪಿರಿದಾಗಿ ಪೇೞ್ದೀಚಿಕದೇವಮಹಾರಾಯನ ಕೈಮೆಯುಂ ಕಿಱಿದೆಂದು ನಿಂದಿಪನೆವದಿಂ ರಾಯಂ ಪಗೆವರ ಮಡುಪಿಯುವಱ ದುರ್ಗಂಗಳಂ ಗೆಲ್ಲಂಗೊಂಡನೆಂಬ ಸ್ತುತಿ ತೋರ್ಪುದಱಿಂದಿದು ವ್ಯಾಜಸ್ತುತಿಯೆನಿಪುದು.

(೩೦.) ವ್ಯಾಜನಿಂದೆಯೆಂತೆನೆ :—

ಕಂ॥ ಜಡಿದಿಡೆಯಪ್ರತಿಮಂ ಕೈ ।
ಪಿಡಿದಿಟ್ಟಯನರಿಗಳಿಡುವರಾಯುಧಮನಿತಂ ॥
ಕುಡೆ ನಂಬುಗೆನುಡಿಯುಂ ಪಡಿ ।
ಗುಡುವರ್ಪಲವ್ರುರುಳನವರದೇನಗ್ಗಳರೋ! ॥೮೩

ಇದಱೊಳ್ ಚಿಕದೇವರಾಯಂ ಕೈದುವೊಂದನಿಡುವಂ ಪಗೆರಾಯರ್ ಪಲವುಂ ಕೈದುಗಳನಿಡುವರ್ ಇವಂ ಕುಡುವದು ನುಡಿಮಾತ್ರಂ ಅವರ್ ಸರ್ವಸ್ವಮಂ ಕುಡುವರೆಂದು ಪಗೆವರಂ ಸ್ತುತಿಸುವ ನೆವದಿಂದೀಚಿಕದೇವಮಹಾರಾಯಂ ಕೈಯ್ಯೆಟ್ಟಯನಿಡುವಮಾತ್ರದಿಂ ಪಗೆವರ್ ಭೀತಿವಟ್ಟು ಕೈದುವನೆಲ್ಲಮಂ ಬಿಸುಟು ನಂಬುಗೆವಡೆದು ಸರ್ವಸ್ವಮನೊಪ್ಪಿಸುವರೆಂಬ ನಿಂದೆ ತೋರ್ಪುದಱಿಂದಿದು ವ್ಯಾಜನಿಂದೆಯೆನಿಪುದು.

---

(೩೧.) ಆಕ್ಷೇಪಾಲಂಕಾರಂ ಮೂಱುಂ ತೆಱಂ.

(1) " ಆಕ್ಷೇಪಸ್ಸ್ವಯಮುಕ್ತಸ್ಯ
ಪ್ರತಿಷೇಧೋ ವಿಚಾರಣಾತ್ ॥ "

[ವೃತ್ತಿ] ಮೊದಲೊಂದರ್ಥಮಂ ಪೇೞ್ದು ಬೞಿಕ್ಕೆ ವಿಚಾರಿಸಿಯುಂತಲ್ಲದೊಡಂ ಕೊಱತೆಯಿಲ್ಲೆಂದು ಪೇೞ್ವುದಾಕ್ಷೇಪಾಲಂಕಾರಮೆನಿಪ್ಪುದು.

ಎಂತೆನೆ :—

ಕಂ॥ ಮಲೆನಾಡ ಮನ್ನೆಯರಿರಾ ।
ತೊಲಗಿಂ ಮಹಿಶೂರಬಲದ ದೂೞ್ಗಾಣದ ಮುಂ ॥
ತೊಲಗದೊಡಮಿರಿಮದರ್ಕಂ ।
ಫಲಮೊಳದಾಬರ್ದಿ*ಲಾಡು ನೆಲೆವೀಡಕ್ಕುಂ ॥೮೪

ಇದಱೊಳ್ ಮಹೀಶೂರದಱಕ್ಕೆ ನಾಮರ್ಗಲೆವ ಮಲೆನಾಡವರ್ಗೆ ಹಿತೋಪದೇಶಂಗೆಯ್ವೆಡೆಯೊಳ್ ಸಮರಂಗೊಳ್ಳದೆ ಸಮಾಶ್ರಯಣಂಗೆಯ್ದೊಡೆ ನೆಲೆವೀಡುಗಳುೞಿವುವೆಂದು ಪೇೞ್ದು ಬೞಿಕ್ಕೆ ವಿಚಾರಿಸಿಯುಂತಲ್ಲದೆ ಸಮರಂಗೆಯ್ದೊಡಂ ಬರ್ದಿ*ಲುಂ ನೆಲೆವೀಡಪ್ಪುದೆಂದು ಪೇೞ್ವುದಱಂದಾಕ್ಷೇಪಾಲಂಕಾರಂ.

ಮತ್ತಂ, (2) “ನಿಷೇಧಾಭಾಸಮಾಕ್ಷೇಪಂ
ಬುಧಾಃ ಕೇಚನ ಮನ್ವತೇ ॥”

[ವೃತ್ತಿ] ಒಂದಂ ನಿಷೇಧಿಸಿ ಪೇೞ್ವುದಱಂ ಪೆಱತೊಂದರ್ಥವಿಶೇಷಮಾಕ್ಷಿಪ್ತಮಾಗಿ ತೋಱುಯುದವುಮಾಕ್ಷೇಪಾಲಂಕಾರಂ.

ಎಂತೆನೆ :—

ಕಂ॥ ಮನ್ನಿಪ್ಪುದು ಲೇಸು ಮನಮೊ ।
ಲ್ದಿನ್ನಾಳ್ದನನಿಂದು ರಾಯಭಾರಿಗನಲ್ತಂ ॥
ನಿನ್ನಡಿಗಳ್ಗೆಱಗಿದ ಬೞಿ ।
ಕಿ*ನ್ನೆಗಲ್ದ್ಗೆಮೆ ನಿನ್ನ ಕೂರ್ಮೆ ಚಿಕದೇವೇಂದ್ರಾ ॥೮೫

ಇದಱೊಳ್ ಚಿಕದೇವಮಹಾರಾಯಂಗಳ್ಕದ ಸಾಮಂತರ್ ಸಮಾಶ್ರ

ಯುಣಂಗೆಯ್ದುದರ್ಕೆ ಕಳುಪಿದ ರಾಯಭಾರಿಗಳ್ ಬಿನ್ನವಿಪೆಡೆಯೊಳ್, ಜೀಯ ಬಿನ್ನಪಂ, ನೀಂ ಮನವೊಲ್ದೆಮ್ಮಾಳ್ದರೊಳೀಗಳ್ದಯೆಗೆಯ್ಯಲ್ವೇಳ್ಪುದು. ನೀಂ ದಯಾಳುಗಳಾದುದಱಿಂ ನಿಮ್ಮಡಿಗಳ್ಗಱಿಗಿದರೊಳ್ ನೀಂ ಕ್ರೌರ್ಯಂಗೆಯ್ಯಲ್ಕೂಡದೆಂದು ಈಯರ್ಥಮಂ ದಿಟಂಗೊಳಿಸುವುದರ್ಕಾಗಂ ರಾಯಭಾರಿಗರಲ್ತೆಂದು ತಮ್ಮ ಬಗೆಯಂ ನಿಷೇಧಿಸಿ ಪೇಳ್ವುದಱೊಳೆಮ್ಮ ನುಡಿ ಪುಸಿಯಲ್ತೆಂಬರ್ಥವಿಶೇಷಂ ತೋರ್ಪುದಱಿಂದಿದುಮುಮಾಕ್ಷೇಪಾಲಂಕಾರಂ.

ಮತ್ತಂ, (3) "ಆಕ್ಷೇಪೋನ್ಯೋ ವಿಧೌ ವ್ಯಕ್ತೇ
ನಿಷೇಧೇ ಚ ತಿರೋಹಿತೇ ॥"

[ವೃತ್ತಿ] ಒಂದು ಕಾರ್ಯಮಂ ನಡಿಸೆಂಬ ವಿಧಿ ವ್ಯಕ್ತಮಾಗಿ, ಬೇಡವೆಂಬ ನಿಷೇಧಂ ಮಱೆಯಪ್ಪಂತೆ ಪೇೞೆಯದುಮುಮಾಕ್ಷೇಪಾಲಂಕಾರಂ.

ಎಂತೆನೆ :—

ಕಂ॥ ನಡೆಯಿಂ ಚಿಕದೇವೇಂದ್ರಂ ।
ಗಡಿಗೆಱಗಿಂ ತಡೆವಳಲ್ತು ಪಡಿಬರಿಸಿದೊಡಾ ॥
ನೊಡವರ್ಪೆನೆಂದು ಜೈತಜೆ ।
ಯೊಡನಾಡಿದಳವನ ಮಡದಿ ಪೊಱಮಡುವೆಡೆಯೊಳ್ ॥೮೭

ಇದಱೊಳ್, ಜೈತಜೆ ಪುಯಲ್ಗೆ ಬರ್ಪಾಗಳವನ ಮಡದಿ ಪೇೞ್ವೆಡೆಯೊಳ್ನೀಂ ಚಿಕದೇವಮಹಾರಾಯಂಗಡಿಗೆಱಗಲ್ಪೋಪುದಾದೊಡೆ ನೀಮೆ ಪೋಗಿವರ್ಪಿರಂತಲ್ಲದೆ ಸಮರಕ್ಕಾದೊಡಾನುಂ ಬಱಸಲ್ವೆನೆಂದು ಪೇಳ್ದಳ್. ಇದಱೊಳ್ನೀಂ ಪೋಗಿವರ್ಪುದೆಂಬನುಮತಿ ವ್ಯಕ್ತಮಾಗಿ ಸಮರಂಗೊಂಡೊಡಾನುಮನುಗಮಂಗೆಯ್ವೆನೆಂಬುದಱಿಂ ಪೋಗಲ್ವೇಡೆಂಬ ನಿಷೇಧಂ ಮಱೆಯಾಗಿರ್ಪುದಱಿಂದಿದುಮುಮಾಕ್ಷೇಪಾಲಂಕಾರಂ.

ಇಂತಿವು ಮೂಱುಮಾಕ್ಷೇಪಾಲಂಕಾರಂಗಳ್.

(೩೨.) ವಿರೋಧಾಭಾಸಾಲಂಕಾರಮೆಂಬುದು :—

"ಆಭಾಸತ್ವೇ ವಿರೋಧಸ್ಯ
ವಿರೋಧಾಭಾಸ ಇಷ್ಯತೇ ॥"

[ವೃತ್ತಿ] ಕೇಳ್ವಾಗಳೊಂದು ವಿರೋಧಂ ತೋಱಿ, ವಿಚಾರಿಸುವೆಡೆಯೊಳದು ಪರಿಹೃತಮಾಗೆ ವಿರೋಧಾಭಾಸಮೆನಿಪುದು.

ಎಂತೆನೆ :—

ಕಂ॥ ಸಮನಿಸೆ ಸರ್ವಜ್ಞತ್ವಂ ।
ಸಮದೃಷ್ಟಿಯೆನಿಪ್ಪುದೆಂತುಟುವ್ರತಿಮಾ ಕೇ ॥
ಳಮರ್ದಱೆಯುಂ ನರಪತಿಪದ ।
ಮುಮುಮು ಚಿಕದೇವರಾಯನುಮೆನಿಪುದದೆಂತೋ! ॥೮೨

ಇದಱೊಳ್ ರುದ್ರಂಗೆ ಸಮದೃಷ್ಟಿಯುಂ ನರಪತಿಗೆ ದೇವೇಂದ್ರತ್ವಮುಂ ವಿರುದ್ಧಮಾಗಿ ತೋಱಿ ವಿಚಾರಿಸುವೆಡೆಯೊಳ್ಚಿಕದೇವರಾಯಂ ಸಕಲಮುಂ ತಿಳಿದವನುಂ ಪಕ್ಷಪಾತಮಿಲ್ಲದವನುಂ ಸಾರ್ವಭೌಮನುಮೆನಿಸಿರ್ಪನೆಂದು ವಿರೋಧಂ ಪರಿಹೃತಮಪ್ಪುದಱಿಂದಿದು ವಿರೋಧಾಭಾಸಾಲಂಕಾರಂ.

---

(೩೩.) ವಿಭಾವನಾಲಂಕಾರಮಾಱುಂ ತೆಱಂ :—

(1) "ವಿಭಾವನಾ ವಿನಾಪಿಸ್ಯಾ
ತ್ಕಾರಣಂ ಕಾರ್ಯಜನ್ಮ ಚೇತ್॥"

[ವೃತ್ತಿ] ಕಾರಣಮಿಲ್ಲದೆ ಕಾರ್ಯಂ ಪುಟ್ಟಿತೆಂದು ಪೇೞ್ಗುದು ವಿಭಾವನಾಲಂಕಾರಂ.

ಎಂತೆನೆ :—

ಕಂ॥ ಸಮನಿಸೆ ಮಹಿಶೂರವರೊಳ್ ।
ಸಮರುಂ ಮಿಗೆ ಮಧುರೆಕೆಳದಿಡಲಿಮೊರಡಕರ್ಗಂ ॥

ಹಿಮಮಿಲ್ಲದ ಕಂಪನಮುಂ ।
ತಮಮಿಲ್ಲದ ದಾಱದಪ್ಪುಮಪ್ಪುದು ಚಿತ್ರಂ ॥೭೮

ಇದಱೊಳ್ ಕಾರಣಂಗಳಾದ ಹಿಮತಮಂಗಳಿಲ್ಲದೆಯುಂ ತತ್ಕಾರ್ಯಂಗಳಾದ ಕಂಪನದಿಗ್ಭ್ರಮಂಗಳಪ್ಪುದೆಂದು ಪೇೞ್ವುದಱಿಂದಿದು ವಿಭಾವನಾಲಂಕಾರಂ.

ಮತ್ತಂ, (2) "ಕಾರಣಸ್ಯಾಸಮಗ್ರತ್ವೇ
ಕಾರ್ಯೋತ್ಪತ್ತಿಶ್ಚ ಸಾ ಮತಾ ॥"

[ವೃತ್ತಿ] ಕಾರಣಂ ಸಮಗ್ರಮಲ್ಲದೊಡಂ ಕಾರ್ಯಂ ಪುಟ್ಟಿತೆಂದು ಪೇೞ್ವುದುಂ ವಿಭಾವನೆಯೆನಿಪುದು.

ಎಂತೆನೆ:—

ಕಂ॥ ಆಲಿಸಿ ಚಿಕದೇವಕ್ಷ್ಮಾ ।
ಪಾಲನ ರಾಯಸದ ದುಱುಸನಹಿತಮಹೀಪರ್ ॥
ಸೋಲದೆ ತಮ್ಮಯ ರಾಣಿಯ ।
ರೋಲೆಗಳಂ ಕಳುಪಿ ಬಲಿತರೆಂದಿನ ತೆಱದೊಳ್ ॥೭೯

ಇದಱೊಳ್ ನಿಗ್ರಹಾನುಗ್ರಹಸಮರ್ಥನಪ್ಪ ಚಿಕದೇವಮಹಾರಾಯನ ರಾಯಸದ ವಕ್ಕಣೆಯ ದುಱುಸಂ ಕೇಳ್ದಳ್ಕದ ಸಾಮಂತನೃಪರ್ ತಂತಮ್ಮ ಪೆಣ್ಡಿರ ಕಿವಿಯೋಲೆಗಳಂ ಕಳುಪಿ ಧೈರ್ಯದೊಳಿರ್ದರೆಂದು ಪೇೞ್ವುದಱೊಳ್ರಾಯಸನಿರೂಪದಿಂ ಪುಟ್ಟಿದ ಭಯಮುಂ ಪರಿಹರಿಸಲ್ ಪೆಣ್ಡಿರ ಕಿವಿಯೋಲೆಗಳ್ಸಮಗ್ರಕಾರಣಮಲ್ಲದಿರ್ಪುದಱಿಂದಿದುವುಂ ವಿಭಾವನಾಲಂಕಾರಂ.

ಮತ್ತಂ, (3) "ಕಾರ್ಯೋತ್ಪತ್ತಿಸ್ತೃತೀಯಾ
ಸ್ಯಾತ್ಸತ್ಯಪಿ ಪ್ರತಿಬಂಧಕೇ ॥"

[ವೃತ್ತಿ] ಪ್ರತಿಬಂಧಕಮಿರ್ದೊಡಂ ಕಾರ್ಯಂ ಪುಟ್ಟಿತೆಂದು ಪೇೞ್ವುದುಂ

ವಿಭಾವನೆಯೆನಿಪ್ಪುದು.

ಎಂತೆನೆ :—

ಕಂ॥ ನಡೆದು ಮಹಿಶೂರ ಸುಭಟರ್ ।
ಕಡಿವಿನವಮಾಚೆನ್ನಬಸವಕೂಪ್ಖಾನರೊಳಂ ॥
ಪೆಡಸಾರ್ದಂ ನೆಲೆವಿಡಿದಂ ।
ಪಡಿಬರಿಸಿದನುೞಿಯದೋಡಿದಂ ನಿಡುವಯಣಂ ॥೯೦

ಇದಱೊಳ್ ಪೆಡಸಾರ್ದ ಚೆನ್ನಬಸವಂ ನೆಲೆವಿಡಿದಂ ಪಡಿಬರಿಸಿದ ಕೂಪ್ಖಾನಂ ನಿಡುವಯಣಂ ಪೋದನೆಂದು ಪೇೞ್ವುದಱೊಳ್ಪೆಡಸಾರ್ವುದು ಪಡಿಬರಿಪ್ಪುದೆಂಬ ಪ್ರತಿಬಂಧಕಂಗಳಿರ್ದೊಡಂ ನೆಲಂಬಿಡಿವುದು ನಿಡುವಯಣಂ ಪೋಪ್ಪುದೆಂಬ ಕಾರ್ಯೋತ್ಪತ್ತಿಯಂ ಪೇೞ್ವುದಱಿಂದಿದುವುಂ ವಿಭಾವನೆಯೆನಿಪ್ಪುದು.

ಮತ್ತಂ, (4) “ವಿರುದ್ಧಾತ್ಕಾರ್ಯಜನ್ಮಾಪಿ
ದೃಷ್ಟಾ ಕಾಚಿದ್ವಿಭಾವನಾ ॥”

[ವೃತ್ತಿ] ವಿರುದ್ಧಮಾದ ಕಾರಣದಿಂ ಕಾರ್ಯಂ ಪುಟ್ಟಿತೆಂದು ಪೇೞ್ವುದುಂ ವಿಭಾವನಾಲಂಕಾರಂ.

ಎಂತೆನೆ: —

ಕಂ॥ ಕ್ರಮುವಱಿಯದೆ ಸವಿದಮರ್ದಂ* ।
ತಮನಱಿದಾತೆಱದೊಳೀಗಳಿರ್ಕೇರಿಯುವರ್ ॥
ಸಮರಕ್ಕೆ ರಾಮಬಾಣಂ ।
ಸಮನಿಸೆಯುಂ ಮುಱಿದು ಪೋದರಪ್ರತಿಮಾಂಕಾ ॥೯೧

ಇದಱೊಳ್ ರಾಹುಗೆ ಮರಣಮಿರ್ಕೇರಿಯವರ್ಗೆ ಪಜಯಮುಮೆಂಬ ಕಾರ್ಯಂಗಳ್ತದ್ವಿರುದ್ಧಂಗಳಾದ ಅಮರ್ದಂ ಸವಿವುದು ರಾಮಬಾಣಂ ಸಮನಿಪ್ಪುದೆಂಬಕಾರಣಂಗಳಿಂ ಪುಟ್ಟಿದವೆಂದು ಪೇೞ್ವುದಱಿಂದಿದುವುಂ

ವಿಭಾವನಾಲಂಕಾರಂ.

ಮತ್ತಂ, (5) " ಅಕಾರಣಾತ್ಕಾರ್ಯಜನ್ಮ
ದೃಷ್ಟ್ವಾ ಕಾಚಿದ್ವಿಭಾವನಾ ॥ "

[ವೃತ್ತಿ] ಕಾರಣಮಲ್ಲದ ವಸ್ತುವಿನಿಂ ಕಾರ್ಯಂ ಪುಟ್ಟಿತೆಂದು ಪೇಳ್ವುದುಂ ವಿಭಾವನೆಯೆನಿಪುದು.

ಎಂತೆನೆ :—

ಕಂ॥ ಪಿಡಿವರ್ಪಂಗಣಿಗಪ್ಪುಗ।
ಳೆಡೆಯೊಳ್ಕಲರಾನೆವಿಂಡನೀಯಪ್ರತಿಮಂ ॥
ಪಿಡಿದಂ ಪೆರ್ಬಲಿವಳಸಿನೊ।
ಳಡವಾಯ್ದಿರ್ಕೇರಿಯುವರ ಪೇರಾನೆಗಳಂ ॥೯೨

ಇದಱೊಳ್ ಅಱಕಲ್ಗೂಡ ಸನಿಯದ ಪೆರ್ಬಲೆಯೆಂಬ ಗ್ರಾಮದ ಬಯಲ ಪುಯಿಲೊಳಿರ್ಕೇರಿಯುವರ ದಱಮುಂ ಗೆಲ್ದವರಾನೆಗಳಂ ಕೊಂಡನೆಂಬೆಡೆಯೊಳ್ ಶ್ಲೇಷದಿಂದಾನೆಗಳಂ ಪಿಡಿವುದರ್ಕೆ ಕಾರಣಮಲ್ಲದ ಪೆರ್ಬಲೆಯೊಳ್ನಚ್ಚುವುದವೊಂದು ನೆಗೞ್ದ ಇರ್ಕೇರಿಯ ರಾಮಬಾಣವೆಂಬ ಪೇರಾನೆಯುಂ ಅದಱ ಬೆಂಬಱಿಯಲ್ಲಿ ಪುಯಿಲ್ಗೆ ನಡೆತಂದಾನೆಗಳನಿತುಮಂ ಪಿಡಿದನೆಂದು ಪೇಳ್ವುದಱಿಂದಿದುವುಂ ವಿಭಾವನಾಲಂಕಾರಂ.

ಮತ್ತಂ, (6) " ಕಾರ್ಯಾತ್ಕಾರಣಜನ್ಮಾಪಿ
ದೃಷ್ಟ್ವಾ ಕಾಚಿದ್ವಿಭಾವನಾ॥ "

[ವೃತ್ತಿ] ಕಾರ್ಯದಿಂ ಕಾರಣಂ ಪುಟ್ಟಿತೆಂದು ಪೇಳ್ವುದುಂ ವಿಭಾವನೆಯೆನಿಪುದು.

ಎಂತೆನೆ :—

ಕಂ॥ ಸರಸಿಜಮುದಕದೊಳೊಗೆವುದು।
ಸರಸಿಜದಿಂದುದಕಮೊಗೆಯುದಪ್ರತಿಮಾ ಕೇಳ್ ॥

ದುರಕಿದಿರಾಂತೈಗೂರವ ।
ನರಸಿಯ ನೇತ್ರಾಬ್ಜದಿಂದೆ ನೀರೊಸರೆಲಿಡುಗುಂ ॥೯೩

ಇಂತಿವಾಱುಂ ವಿಭಾವನಾಲಂಕಾರಂಗಳ್.

---

೩೮. ವಿಶೇಷೋಕ್ತ್ಯಲಂಕಾರಮೆಂಬುದು :—

" ಕಾರ್ಯಾಜನಿರ್ವಿಶೇಷೋಕ್ತಿ
ಸ್ಸತಿ ಪುಷ್ಕಲಕಾರಣೇ ॥ "

[ವೃತ್ತಿ] ಕಾರಣಸಂಪತ್ತಿಯುಂಟಾಗಿಯುಂ ಕಾರ್ಯಂ ಪುಟ್ಟದಿರ್ಪುದು ವಿಶೇಷೋಕ್ತ್ಯಲಂಕಾರಂ.

ಎಂತೆನೆ :—

† * * *

---

೩೯. ಅಸಂಭವಾಲಂಕಾರಮೆಂಬುದು :—

" ಅಸಂಭವೋರ್ಥನಿಷ್ಪತ್ತೇ
ರಸಂಭಾವ್ಯತ್ವವರ್ಣನಂ ॥ "

[ವೃತ್ತಿ] ಆಕಸ್ಮಿಕವಾಗಿ ಒಂದು ಕಜ್ಜಮುಂ ಪುಟ್ಟುತೆಂದು ಪೇೞ್ವುದು ಅಸಂಭವಾಲಂಕಾರಂ.

---

† ಇಲ್ಲಿ ಉದಾಹರಣೆಯ ಶ್ಲೋಕವು ನಮ್ಮಲ್ಲಿರುವ ಪ್ರತಿಗಳಲ್ಲಿ ಯಾತರಲ್ಲಿಯೂ ಇಲ್ಲ. ಇದಕ್ಕೆ ಚಂದ್ರಾಲೋಕದಲ್ಲಿ ಉದಾಹರಣೆ,

" ಹೃದಿ ಸ್ನೇಹಕ್ಷಯೋ ನಾಭೂತ್ಸ್ಮರದೀಪೇ ಜ್ವಲತ್ಯಪಿ ॥ "

" ಗುಣಜಾತ್ಯಾದಿಗಳಿಂದೊಂ ।
ದಣಿಯುರವಾಗಿರೆ ವಿಶೇಷಮೊದವೆ ವಿಶೇಷಂ ॥
ಗಣಿಯಿಸೆ ಸೋಲಿಪುವಬಲಾ ।
ಗಣಮಾರುಮನಾನೆ ಕುದುರೆ ತಮಗಿಲ್ಲದೊಡಂ ॥ "

ಉದಯಾದಿತ್ಯಾಲಂಕಾರಂ.

ಎಂತೆನೆ :—

ಕಂ॥ ಎರಡುಂ ತಟ್ಟಿನ ಬಾಣದ ।
ಸರವಿಗಳ್ಕೆಳದಿಯವರ ದಳದೊಳ್ಬೀೞೆ ॥
ತಿರ್ರೆ ರಾಮಬಾಣಮೆರಡುಂ ।
ದೊರಕಿತು ಮಹಿಶೂರ ಸೇನೆಗಿದನಱಿವವರಾರ್ ? ॥೯೫

ಇದಱೊಳ್ ಪೆರ್ಬುಲಿಯ ಪುಯಿಲಂ ನಿಟ್ಟಿಸಿದ ನಾಡುಗರಾಡುವ ನುಡಿ ಎರಡುಂ ದಳಗಳುಂ ಮಲೆತಿಟ್ಟಾಡುವೆಡೆಯೊಳ್ಮಹಿಶೂರ ದಳದಿಂದೆಚ್ಚ ಬಾಣಂಗಳನಿತುಂ ಕೆಳದಿಯ ದಳದೊಳ್ಬೀೞ್ವುದಲ್ಲದೆ ಕೆಳದಿಯ ದಳದಿಂದೆಚ್ಚ ಬಾಣಂಗಳುಂ ಮಗುೞ್ವಲ್ಲಿಯೆ ಬೀೞ್ದುವು. ಇದಱಿಂ ಬಾಣಮೆಂಬ ಪೆಸರುಳ್ಳುವನಿತುಂ ಕೆಳದಿಯ ದಳಕ್ಕೆ ಬಸಮಪ್ಪುದೆಂದಿರ್ದ್ದವು. ಅನಿತರೊಳ್ ಮಹಿಶೂರ ರಾಮಬಾಣಂ ಕೆಳದಿಯ ದಳಮಂ ಪೊಕ್ಕಿಱಿಯೆ ಕೆಳದಿಯ ರಾಮಬಾಣಂ ಮುಱಿದಾದಳಮನೆ ಪೊಕ್ಕುದು. ಮಗುೞ್ದೆರಡುಂ ರಾಮಬಾಣಂ ಮಹಿಶೂರವರ ಬಸಮಾದಂತಪ್ಪುದೆಂಬುದ ನಾರುಮಱಿಯೆವೆಂದು ಪೇೞ್ವುದಱಿಂದಿದು ಅಸಂಭವಾಲಂಕಾರಂ.

---

೩೬. ಅಸಂಗತ್ಯಲಂಕಾರಂ ಮೂಱುಂ ತೆಱಂ :— 15

(1) " ವಿರುದ್ಧಂ ಭಿನ್ನದೇಶತ್ವಂ
ಕಾರ್ಯಹೇತ್ವೋರಸಂಗತಿಃ ॥"

[ವೃತ್ತಿ] ಕಾರಣಮೊಂದೆಡೆಯೊಳ್ ಅದರ್ಕೆ ವಿರುದ್ಧಮಾದ ಪೆಱತೊಂದೆಡೆಯೊಳ್ಕಾರ್ಯಮಿರ್ಪುದೆಂದು ಪೇೞ್ವುದು ಅಸಂಗತ್ಯಲಂಕಾರಂ.

ಎಂತೆನೆ :—

ಕಂ॥ ಕಾನಂಗೆ ಗುಂಡು ತಾಕಿದು ।
ಘಾಸೆಯು ಮೇಲಿಂದೆ ಚೆನ್ನಬಸವಂ ಬಿದ್ದಂ ॥

ತಾನ್ನೈಗೂರವನಱಿದನಿ ।
ದೇನಚ್ಚರಿ ತಿಳಿಯದೆಮಗೆ ಚಿಕದೇವೇಂದ್ರಾ ‖೯೬

ಇದಱೊಳ್ ಗುಂಡು ತಾಕಿದವನೊರ್ವಂ ಬಿಡ್ದವನೊರ್ವಂ ಹರಣವಱಿದವನೊರ್ವನೆಂದು ಪೇೞ್ವುದಱಿಂದಿದು ಅಸಂಗತ್ಯಲಂಕಾರಂ.

ಮತ್ತಂ, (2) “ ಅನ್ಯತ್ರ ಕರಣೀಯಸ್ಯ
ತತೋಽನ್ಯತ್ರ ಕೃತಿಶ್ಚ ಸಾ ‖ ”

[ವೃತ್ತಿ] ಒಂದೆಡೆಯೊಳೆಸಗಲೆಳಸಿದ ಕಜ್ಜಮಂ ಪೆಱತೊಂದೆಡೆಯೊಳೆಸಗಿದನೆಂದು ಪೇೞ್ವುದುಮಂ ಅಸಂಗತಿಯೆನಿಪ್ಪುದು.

ಎಂತೆನೆ :—

ಕಂ‖ ಧರ್ಮಪುರಿಯಲ್ಲಿ ಛಲದಿಂ ।
ಮಾರ್ಮಲೆತಿರೆ ನಿನ್ನ ಸುಭಟರಪ್ರತಿಮಾ ಕೇಳ್ ‖
ದುರ್ಮತಿಗಳದಿರ್ ತೆಂಕಣ।
ಧರ್ಮಪುರೀಪ್ರಾಂತಕಡರ್*ರಕಟ ! ಮರಾಟರ್ ‖೯೭

ಇದಱೊಳ್ ಹರಜಿ ಜೈತಜಿ ದಾದಜಿ ಮುಂತಾದ ಮರಾಟರ್ ಮೂಡಣ ಧರ್ಮಪುರಿಯೆಂಬ ಕೋಂಟೆಯನೆಂಟುಂ ತಿಂಗಳುಂ ವೇಡೈಸಿ ತಳಿಮೋರುವೆಗಳಂ ಬಳೆಯಿಸುವಿನಮಲ್ಲಿರ್ಪ ಮಹಿಶೂರ ಭಟರ್ ಪ್ರೋಱಮಟ್ಟಾ ತಳಿಮೋರುವೆಗಳಂ ಕಿೞ್ತೆಡೆಯೊಯಱಿಲಿಂದಾಕೋಂಟೆಯಂ ಲಗ್ಗೆಗೊಳೞಿಸಿ ತೆಂಕಣ ಧರ್ಮಪುರಿಯೆನಿಪ್ಪ ಸಂಯಮಿನೀಪಟ್ಟಣಮಂ ಸಾರ್ದರೆಂದು ಪೇೞ್ವುದಱಿಂದಿದುಮಸಂಗತ್ಯಲಂಕಾರಂ.

ಮತ್ತಂ, (3) “ ಅನ್ಯತ್ಕರ್ತುಂ ಪ್ರವೃತ್ತಸ್ಯ
ತದ್ವಿರುದ್ಧಕೃತಿಶ್ಚ ಸಾ ‖ ”

[ವೃತ್ತಿ] ಒಂದು ಕಜ್ಜಮನೆಸಗಲೆಳಸಿ ಪೆಱತೊಂದು ಕಜ್ಜಮನೆಸಗಿದನೆಂದು ಪೇೞ್ವುದುಮಸಂಗತ್ಯಲಂಕಾರಂ.

ಎಂತೆನೆ :—

ಕಂ॥ ಗಿರಿದುರ್ಗದಿಂದೆ ಲೆಗ್ಗೆಯೊ ।
ಳರಿವರ್ಗಮನಿಱಿಪಲೆಳಸಿ ಬಿವ್ಯಮೆನಿಪ್ಪಾ ॥
ಗಿರಿದುರ್ಗಮನೇಱಿಸಿದಂ ।
ನರಪತಿಯಪ್ರತಿಮವೀರಚಿಕದೇವೇಂದ್ರಂ ॥೯೮

ಇಂತಿವು ಮೂಱುಮಸಂಗತ್ಯಲಂಕಾರಂಗಳ್.

---

೩೨. ವಿಷಮಾಲಂಕಾರಂ ಮೂಱುಂ ತೆಱಂ :—

(1) “ವಿಷಮಂ ವರ್ಣ್ಯತೇ ಯತ್ರ
ಘಟನಾನನುರೂಪಯೋಃ ॥”

[ವೃತ್ತಿ] ಒಂದಕ್ಕೊಂದು ಜತೆಗೂಡುವುದಕ್ಕೆ ತಕ್ಕುದಲ್ಲದ ಕಜ್ಜಂಗಳಂ ಜತೆಗೊಳಿಸಿ ಪೇೞ್ವುದು ವಿಷಮಾಲಂಕಾರಂ.

ಎಂತೆನೆ :—

ಕಂ॥ ಡಿಳ್ಳಿಯ ಶಾಹನ ಸುವೆಯುಂ ।
ಜಳ್ಳೇಱಿಸುವಾರ್ಪಿದೆತ್ತಲಪ್ರತಿಮಾ ಕೇಳ್ ॥
ಪಳ್ಳಿಯ ಪರದೇಶಿಯೊಳಂ ।
ತೆಳ್ಳನೆ ಮೆಲ್ಪಿಡಿದು ಕರಗುವೆರ್ದೆಯಿರವೆತ್ತಲ್ ! ॥೯೯

ಇದಱೊಳ್ ಚಿಕದೇವಮಹಾರಾಯನ ಮನಸ್ಸಿನೊಳತ್ಯಂತಕಾಠಿನ್ಯಮುಂ ಅತಿಮಾರ್ದವಮುಮೆಂಬ ವಿರುದ್ಧಗುಣಂಗಳ್ಜತೆಗೊಂಡಿರ್ಪುವೆಂದು ಪೇೞ್ವುದಱಿಂದಿದು ವಿಷಮಾಲಂಕಾರಮಾದುದು.

ಮತ್ತಂ, (೨) “ವಿರೂಪಕಾರ್ಯಸ್ಯೋತ್ಪತ್ತಿ
ರಪರಂ ವಿಷಮಂ ಮತಂ ॥”

[ವೃತ್ತಿ] ಕಾರಣಕ್ಕೆ ವಿಪರೀತವಾಗಿ ಕಾರ್ಯಂ ಪುಟ್ಟಿತೆಂದು ಪೇೞ್ವ

**೨೦. ವಿಷಮಾಲಂಕಾರಂ.**

ಎಂತೆನೆ :—

ಕಂ॥ ಇರವಱಿಯದೆಲ್ಲನಾಡೊಳ್ ।
ಪರಿವಾರೆಯ ಪಡೆಯನಟ್ಟಿ ಸುಟ್ಟುರಿವುತ್ತುಂ॥
ಧರೆಯಂ ತಣ್ಪೇಱಿಪ್ಪುದೀ ।
ನರಪತಿಚಿಕದೇವರಾಜನೋಜಸ್ತಪನಂ ॥೧೦೦

ಇದಱೊಳ್ ಮರಾಟರ ಪಡೆಯಂ ಸುಟ್ಟುರಿವ್ಪ ಚಿಕದೇವರಾಯನ ಪ್ರತಾಪಸೂರ್ಯನಿಂ ಧರೆಯ ತಣ್ಪೆಂಬ ವಿರುದ್ಧಕಾರ್ಯಂ ಪುಟ್ಟಿತೆಂದು ಪೇೞ್ವುದಱಿಂದಿದುವುಂ ವಿಷಮಾಲಂಕಾರಂ.

ಮತ್ತಂ, (3) " ಅನಿಷ್ಟಸ್ಯಾಪ್ಯವಾಪ್ತಿಶ್ಚ
ತದಿಷ್ಟಾರ್ಥಸಮುದ್ಯಮಾತ್ ॥ "

[ವೃತ್ತಿ] ಇಷ್ಟಾರ್ಥಮಂ ಸಂಪಾದಿಸಲ್ಕೆ ಪೂಣ್ದಿಡೆಯೊಳನಿಷ್ಟಮಾದರ್ಥಂ ಲಭಿಸಿತೆಂದು ಪೇೞ್ವುದುಂ ವಿಷಮಾಲಂಕಾರಂ.

ಎಂತೆನೆ :—

ಕಂ॥ ಮಸಗಿತು ಮಹಿಶೂರವರ್ಗ* ।
ಣ್ದಿಸೆಯೊಳ್ಪೊಯಿಲಿದುವೆ ಸಮಯಮೆಂದೆಸೆವಂತು ॥
ಬಸವಱಿಸೆ ಬಂದನೆಕ್ಕೋಜಿ ।
ಪೊಸಊರಂ ಮುತ್ತಿ ನೀಗಿದಂ ಪಳಊರು ॥೧೦೧

ಇದಱೊಳ್ ಎಕ್ಕೋಜಿಗೆ ಪೊಸಊರ ಕೋಂಟೆಯಂ ಬಯಸುವಿನಂ ತನ್ನ ಪಳದಾದ ಬೆಂಗಳೂರುಂ ಪೋದುದೆಂದು ಪೇೞ್ವುದಱಿಂದಿದುವುಂ ವಿಷಮಾಲಂಕಾರಂ.

ಇಂತಿವು ಮೂಱುಂ ವಿಷಮಾಲಂಕಾರಂಗಳ್.

(೩೮) ಸಮಾಲಂಕಾರಂ ಮೂಱುಂ ತೆಱಂ :—

(1) “ ಸಮಂ ಸ್ಯಾದ್ವರ್ಣನಂ ಯತ್ರ
ದ್ವಯೋರಪ್ಯನುರೂಪಯೋಃ ॥ ”

[ವೃತ್ತಿ] ಒಂದುಕೊಂದು ಜತೆಗೂಡಿಸಲ್ತಕ್ಕ ಕಜ್ಜಮಂ ಜತೆಗೊಳಿಸಿ ಪೇೞ್ವುದು ಸಮಾಲಂಕಾರಮೆನಿಪ್ಪುದು.

ಎಂತೆನೆ :—

ಕಂ॥ ಕೃತಿಪತಿ ಚಿಕದೇವೇಂದ್ರಂ ।
ಕೃತಿ ಚಿಕದೇವೇಂದ್ರವಿಜಯಮೀಕೃತಿವೇೞ್ದಂ ॥
ಕೃತಮತಿಯುವನೊಲ್ಮೆ ಪ್ರಮಾ ।
ಕೃತಿವೆತ್ತ ಪ್ರೊಲೆಸೆವ ಸುಕೃತಿ ತಿರುಮಲೆಯಾರ್ಯಂ ॥೧೦೨

ಇದಱೊಳ್ ಕೃತಿನಾಯಕನುಂ ಕೃತಿಯುಂ ಕೃತಿವೇೞ್ದನುಮನುಗುಣಂಗಳಾಗಿರ್ಪವೆಂದು ಪೇೞ್ವುದಱಿಂದಿದು ಸಮಾಲಂಕಾರಂ.

ಮತ್ತಂ, (2) “ ಸಾರೂಪ್ಯಮಪಿ ಕಾರ್ಯಸ್ಯ
ಕಾರಣೇನ ಸಮಂ ವಿದುಃ ॥ ”

[ವೃತ್ತಿ] ಕಾರಣಕ್ಕನುಗುಣವಾಗಿ ಕಾರ್ಯಂ ಪುಟ್ಟಿತೆಂದು ಪೇೞ್ವುದುಂ ಸಮಾಲಂಕಾರಂ.

ಎಂತೆನೆ :—

ಕಂ॥ ಪ್ರಜೆಗಳನನುರಂಜಿಸುಗುಂ ।
ಪ್ರಜೆಗಳೊಳಂ ದ್ವಿಜರನೊಳ್ಪಿನಿಂದಪ್ರತಿಮಂ ॥
ನಿಜಕುಲಪತಿಯುಂ ರಾಜಂ ।
ದ್ವಿಜರಾಜನುಮಪ್ಪ ಕತದೊಳೀನರಪತಿಯಾ ॥೧೦೩

ಇದಱೊಳ್ ಚಿಕದೇವರಾಯಂ ಪ್ರಜೆಯನಿತಂ ಧರ್ಮದಿಂ ಪರಿಪಾಲಿಸುತುಂ ದ್ವಿಜರಂ ಮಿಕ್ಕುಂ ಪರಿಪಾಲಿಸುವನೆಂದು ಕಾರ್ಯಗುಣಮಂ

ಪೇೞ್ದೀವಂಶಕ್ಕೆ ಮೂಲಕಂದವಾದ ಚಂದ್ರನುಂ ರಾಜನುಂ ದ್ವಿಜರಾಜನುಮೆನಿಕ್ಕುಮೆಂದು ಪೇೞ್ವುದಱಿಂದಿದುವುಂ ಸಮಾಲಂಕಾರಂ.

ಮತ್ತಂ, (3) "ವಿನಾನಿಷ್ಟಂ ಚ ತತ್ಸಿದ್ಧಿ
ರ್ಯದರ್ಥಂ ಕರ್ತುರುದ್ಯಮಃ ||"

[ವೃತ್ತಿ] ಅನಿಷ್ಟವಾದ ಕಾರ್ಯಂ ಪುಗದೆಯೆಳಸಿದ ಕಜ್ಜಂ ಸಿದ್ಧಿಪುದುಂ ಸಮಾಲಂಕಾರಂ.

ಎಂತೆನೆ :—

ಕಂ|| ಪೊನಿಬಸವಪ್ಪನಾಯಕ |
ನೇನಾದುದು ಚೆನ್ನಬಸವ ಪುಯಿಲೆನೆ ಭರದಿಂ ||
ಡಾನೆಪುಯಿಲ್ಗೆಲಳೆಳಸಿದೆ |
ನಾನೆಪುಯಿಲ್ಗಿಯ್ದುವಂದೆನೀತೆಱಮೆಂದಂ ||೧೦೪

ಇದಱೊಳ್ ಪೆರ್ಬಾಲೆಪುಯಿಲಲ್ಲಿ ಮಹಿಶೂರವರ್ಗೆ ಮುಱಿದು ಬಂದ ಚೆನ್ನಬಸವನನಿರ್ಕೇರಿಯ ದೊರೆ ಬಸವಪ್ಪನಾಯಕಂ ಪುಯಿಲೆಂತಾದುದೆಂದು ಕೇಳ್ವನಮವಂ ಎಮ್ಮ ರಾಮಬಾಣಮೆಂಬಾನೆಯುಂ ಅವರ ಬೇಂಟೆರಾಯನುಂ ಕಾದುತ್ತಿರೆ ಎಮ್ಮಾನೆ ಗೆಲ್ವುದೆಂದಾಸೆವಟ್ಟೆರ್ದೆನಂತಲ್ಲದೆ ಪೋದುದಱಿಂದಾನುಂ ಪುಯಿಲ್ಗಿಯ್ದೀತೆಱದೊಳುಸಿರೊಡನೆ ಗೆಲ್ದುವಂದೆನೆಂದು ಪದ್ಯಾರ್ಥದೊಳ್ಪುಯಿಲಂ ಗೆಲ್ವುದೆಂಬ ಕಜ್ಜಮನೆಳಸಿದ ಚೆನ್ನಬಸವಂಗೆ ತನ್ನಾನೆ ಮುಱಿದದಱೊಡನೆ ಪಲವುಮಾನೆಕುದುರೆಗಳುಂ ಗುರಿಮಾನಿಸರುಂ ಪಱಿಯಿಗೆ ಮುಂತಾದ ಬಿರುದುಗಳುಂ ಮಹಿಶೂರವರ ಬಸಮಾದುದೆಂಬನಿಷ್ಟಂ ತೋಱದೆ ತನ್ನುಸಿರುೞಿದುದೆಂಬ ಗೆಲ್ಲಂ ಕೈಸಾರ್ದುದೆಂದು ಪೇೞ್ವುದಱಿಂದಿದುವುಂ ಸಮಾಲಂಕಾರಂ.

ಇದಱೊಳ್ ಸ್ವಾಮಿಭಕ್ತಿಯುಂ ಶೌರ್ಯಮುಮುಂಟಾದವರ್ಗೆ ತನ್ನಾಳ್ದನಾನೆ ಕುದುರೆ ಮುಂತಾದವು ಪೋಪುದುಂ ಪುಯಿಲೊಳ್ಮಡಿದು ತಾನುಸಿರುವಿಡಿದಿರ್ಪುದುಮನಿಷ್ಟಮಾದೊಡಮಂತಲ್ಲದವರ್ಗದುವೆ ಬೇಳ್ಪ ಕಜ್ಜಮುಮಿಷ್ಟಮುಮಾಗಿರ್ಕುಂ.

ಇಂತಿವು ಮೂಱುಂ ಸಮಾಲಂಕಾರಂಗಳ್.

---

೩೯. ವಿಚಿತ್ರಾಲಂಕಾರಮೆಂಬುದು :—

“ ವಿಚಿತ್ರಂ ತತ್ಪ್ರಯತ್ನಶ್ಚೇ
ದ್ವಿಪರೀತಫಲೇಚ್ಛಯಾ ॥ ”

[ವೃತ್ತಿ] ಒಂದು ಕಜ್ಜಮನೆಳಸಿಯದರ್ಕೆ ವಿಪರೀತಮಾದ ನಡತೆಯೊಳಿರ್ಪುದು ವಿಚಿತ್ರಾಲಂಕಾರಮೆನಿಪುದು.

ಎಂತೆನೆ :—

ಕಂ॥ ನರಪತಿಪದವಾಂತಿಳೆಯಂ ।
ಪೊರೆವಿನಮಪ್ರತಿಮವೀರಚಿಕದೇವೇಂದ್ರಂ ॥
ದೊರೆತನಕೆಳಸಿದ ಬಳಸಿನ ।
ದೊರೆಗುವರರ್ ಸುಚಿವಡಿಗವಾವುಗೆವಿಡಿವರ್ ॥೧೦೪॥

ಇದಱೊಳ್ ದೊರೆತನಮನೆಳಸಿದವರ್ ಊಳಿಗಂಗೆಯ್ವುದು ವಿಪರೀತಮಾದ ನಡತೆಯಾದುದಱಿಂದಿದು ವಿಚಿತ್ರಾಲಂಕಾರಂ. ಅವನೊಳಿಗಂಗೆಯ್ವರ್ಗೆ ದೊರೆತನಂ ಬರ್ಪುದೆಂಬುದು ತಾತ್ಪರ್ಯಂ.

---

೪೦. ಅಧಿಕಾಲಂಕಾರಮೆರಡುಂ ತೆಱಂ :—

(1) “ ಅಧಿಕಂ ಪೃಥುಲಾಧಾರಾ
ದಾಧೇಯಾಧಿಕ್ಯವರ್ಣನಂ ॥ ”

[ವೃತ್ತಿ] ಪಿರಿದೆನಿಸುವಾಧಾರದತ್ತಣಿಂದಾಧೇಯಂ ಮಿಕ್ಕುಂ ಪಿರಿದಾಗಿರ್ಪ್ಪುದೆಂದು ಪೇೞ್ವುದಧಿಕಾಲಂಕಾರಂ.

ಎಂತೆನೆ :—

ಕಂ॥ ಆವನ ಪೊಡೆಯಡೆಯೊಳ್ಭುವ |
ನಾವಳಿಗಳ್ಪಸರಿಸಿರ್ಪವವನೊಡಲನಿತಂ ॥
ತೀವಿ ತುಳುಂಕಿದುವೀ ಚಿಕ |
ದೇವೇಂದ್ರನ ಭಕ್ತಿಸಂಭೃತಾನಂದಂಗಳ್ ॥೧೧೬

ಇದಱೊಳ್ ಜಗದಾಧಾರನ ಪೊಡೆಯತ್ತಣಿಂ ಚಿಕದೇವರಾಯನೆಸಗುವ ಪರಭಕ್ತಿಯಿಂ ಪುಟ್ಟಿದಾನಂದಮೆಂಬಾಧೇಯಂ ಪಿರಿದೆಂದು ಪೇೞ್ದುದಱಿಂದಿದು ಅಧಿಕಾಲಂಕಾರಂ.

ಮತ್ತಂ, (2) " ಪೃಥ್ವ್ಯಾಧೇಯಾದ್ಯದಾಧಾರಾ
ಧಿಕ್ಯಂ ತದಪಿ ತನ್ಮತಂ ॥ "

[ವೃತ್ತಿ] ಪಿರಿದೆನಿಸುವಾಧೇಯದತ್ತಣಿಂದಾಧಾರಂ ಮಿಕ್ಕುಂ ಪಿರಿದಾಗಿರ್ಪ್ಪುದೆಂದು ಪೇೞ್ವುದುಮಧಿಕಾಲಂಕಾರಂ.

ಎಂತೆನೆ :—

ಕಂ॥ ದಾನಕ್ಷಾತ್ರಾದಿಗಳಿಂ |
ಈನರಪತಿಕೀರ್ತ್ತಿ ಬಿತ್ತರಂಬಡೆಯೆ ಕರಂ ॥
ತಾನಿಂಬುಗುಡುವುದಕಟಕ |
ಟೇನೆಂಬೆನಜಾಂಡಭಾಂಡದೆಡೆಪೆಱಪೆಂತೋ ! ॥೧೧೭

ಇದಱೊಳ್ ಚಿಕದೇವಮಹಾರಾಯನ ಪಿರಿದಪ್ಪ ಕೀರ್ತ್ತಿಗಾಧಾರಮಾದುದಱಿಂ ಬ್ರಹ್ಮಾಂಡಂ ಪಿರಿದೆನಿಪ್ಪುದೆಂದು ಪೇೞ್ದುದಱಿಂದಿದುವುಂ ಅಧಿಕಾಲಂಕಾರಂ.

ಇಂತಿವೆರಡುಮಧಿಕಾಲಂಕಾರಂಗಳ್.

---

೪೧. ಅಲ್ಪಾಲಂಕಾರಮೆಂಬುದು :—

" ಅಲ್ಪಂತು ಸೂಕ್ಷ್ಮಾದಾಧೇಯಾ
ದ್ಯದಾಧಾರಸ್ಯ ಸೂಕ್ಷ್ಮತಾ ॥ "

[ವೃತ್ತಿ] ಸೂಕ್ಷ್ಮವಾಗಿರ್ಪಾಧೇಯವತ್ತಣಿಂದಾಧಾರಂ ಮಿಕ್ಕುಂ ಸೂಕ್ಷ್ಮವಾಗಿರ್ಪುದೆಂದು ಪೇೞ್ವುದಲ್ಪಾಲಂಕಾರಂ.

ಎಂತೆನೆ :—

ಕಂ॥ ಅನುಗೆಟ್ಟಗೂರಾಣ್ಮನ ।
ತನುಪೞಿಯಲ್ಚೆನ್ನಬಸವಬೊಮ್ಮಯ್ಯಗಳಾ ॥
ತನುಗಳ್ತನುತರಮಾದುವು ।
ಮನಮುಂ ಜೀವನಮುಮುಡಕಮಾಗದ ತೆಱದೊಳ್ ॥೧೦೪

ಇದಱೊಳ್ ಪರಮಾಣುಗಳೆಂದು ಪ್ರಸಿದ್ಧಂಗಳಾದ ಮನಸ್ಸುಂ ಜೀವಾತ್ಮನುಮೊಳಗಿರ್ಪವಕ್ಕೆ ತಾವಿಲ್ಲದಂತೆ ಚೆನ್ನಬಸವಬೊಮ್ಮಯ್ಯಗಳ ಮೆಯ್ಗಳ್ಕರಗಿದವೆಂಬುದಱಿಂದಾಧೇಯಂಗಳಪ್ಪ ಮನೋಜೀವಿತಂಗಳತ್ತಣಿಂದಾಧಾರಮಪ್ಪ ಶರೀರಂಗಳ್ಮತ್ತಂ ಕೃಶಂಗಳೆಂದು ಪೇೞ್ವುದಱಿಂದಲ್ಪಾಲಂಕಾರಂ. ಇಂತು ಪೇೞ್ವುದಱಿಂದೈಗೂರಕೃಷ್ಣಪನಾಯಕಂ ಬೀೞ್ವುದುಮಿವರಿರ್ವರುಂ ಬಗೆಗೆಟ್ಟು ಬಸವಱಿದರೆಂಬರ್ಥಂ ವ್ಯಂಗ್ಯಮಾಗಿ ತೋರ್ಪುದು.

---

೪೨. ಅನ್ಯೋನ್ಯಾಲಂಕಾರಮೆಂಬುದು :—

" ಅನ್ಯೋನ್ಯಂ ನಾಮ ಯತ್ರಸ್ಯಾ
ದುಪಕಾರಃ ಪರಸ್ಪರಂ ॥ "

[ವೃತ್ತಿ] ಎರಡುಂ ವಸ್ತುಗಳೊಂದೊಂದಱ ಕಜ್ಜವೊಂದರ್ಕುಪಕಾರವಾಗೆಯುದು ಅನ್ಯೋನ್ಯಾಲಂಕಾರಂ.

ಎಂತೆನೆ :—

ಕಂ॥ ಬನದೊಳ್ಕೃಷ್ಣಪನಾಯಕ ।
ನಿನಿಯಳ್ಪಸುಗೂಸು ಪಸಿಯೆ ಕಣ್ಣೀರ್ಗಱೆವಳ್ ॥
ಪೊನಲಿಡೆ ಚೂಚುಕದಿನದಂ ।
ತನಿವಾಲ್ಗೆತ್ತೀಂಟೆ ತೆಪ್ಪನಿರ್ದುದು ಮಗುವುಂ ॥೧೦೯

ಇದಱೊಳ್ ತಾಯ ಕಣ್ಣೀರಂ ಪಾಲೆಂದೀಂಟುವುದಱಿಂ ತಾಯಿಂದೆ ಮಗುವಿಂಗುಪಕಾರಂ. ಕಣ್ಣೀರನೀಂಟುತ್ತಳದಿರ್ಪುದಱಿಂ ಮಗುವಿಂದೆ ತಾಯ್ಗುಪಕಾರಂ.

---

೮೩. ವಿಶೇಷಾಲಂಕಾರಂ ಮೂಱುಂ ತೆಱಂ :—

(1) " ವಿಶೇಷಃ ಖ್ಯಾತಮಾಧಾರಂ
ವಿನಾಪ್ಯಾಧೇಯವರ್ಣನಂ ॥ "

[ವೃತ್ತಿ] ಪ್ರಸಿದ್ಧಮಾದಾಧಾರವಿಲ್ಲದೆಯುಮಾಧೇಯಂ ತೋರ್ಪುದು ವಿಶೇಷಾಲಂಕಾರಂ.

ಎಂತೆನೆ :—

ಕಂ॥ ರಾಮನ ಸತ್ವಪರಾಕ್ರಮ ।
ಮಾಮಾರ್ದವಮಾಮಹತ್ವಮಾಮಧುರತೆಯುಂ ॥
ತಾಮೆಳಸಿ ಶುಭಾಶ್ರಯಮಂ ।
ನೇಮದೆ ಚಿಕದೇವರಾಯನೊಳ್ನೆಲಸಿರ್ಕುಂ ॥೧೦೯

ಇದಱೊಳ್ ರಾಮಸ್ವಾಮಿಯಿಲ್ಲದೊಡಮವನ ಗುಣಂಗಳ್ಚಿಕದೇವರಾಯನೊಳ್ತೋರ್ಪುದಱಿಂದಿದು ವಿಶೇಷಾಲಂಕಾರಂ.

ಮತ್ತಂ, (2) “ ವಿಶೇಷಸ್ಸೋಽಪಿ ಯದ್ಯೇಕಂ
ವಸ್ತ್ವನೇಕತ್ರ ವರ್ಣ್ಯತೇ ॥ ”

[ವೃತ್ತಿ] ಒಂದು ವಸ್ತುವಂ ಪಲವೆಡೆಯೊಳಪ್ಪುದೆಂದು ಬಣ್ಣಿಸೆಯುದುವುಂ ವಿಶೇಷಾಲಂಕಾರಂ.

ಎಂತೆನೆ :—

ಕಂ॥ ಬೆದಱಿ ಬಸವಱಿದು ಬೀಗಿದ ।
ಬಿದಿರೂದೊರ್ಗರೆ ಪೊಕ್ಕು ಬನಮನಲ್ಲಿಯುಮುಳ್ಕಂ ॥
ದಿದಿರೊಳ್ಪೊಂತೆಡೆಬಲದೊಳ ।
ಮಿದೆ ಚಿಕದೇವೇಂದ್ರನೆಂದು ಬೆಜ್ಜರವಡೆವಂ ॥೧೧೧

ಮತ್ತಂ, (3) “ ಕಿಂಚಿದಾರಂಭತೋಽಶಕ್ಯ
ವಸ್ತ್ವಂತರಕೃತಿಶ್ಚ ಸಃ ॥ ”

[ವೃತ್ತಿ] ಕಿಱಿವಪ್ಪ ಯತ್ನದಿಂದಶಕ್ಯವಾದ ಕಾರ್ಯಾಂತರಂ ಸಿದ್ಧಿಪ್ಪುದುಂ ವಿಶೇಷಾಲಂಕಾರಂ.

ಎಂತೆನೆ:—

ಕಂ॥ ಕಂಡಪೆನಖಂಡಧರಣೀ ।
ಮಂಡಲಪತಿ ಚಿಕ್ಕದೇವನರಪತಿಯನಿದೇ ॥
ಕಂಡಪೆನಾಖಂಡಲನಂ ।
ಕಂಡಪೆನಾನಿಂದು ಪುಂಡರೀಕಾಕ್ಷನುಮಂ ॥೧೧೨

ಇದಱೊಳ್ ಪ್ರತ್ಯಕ್ಷಮಾದ ಚಿಕದೇವರಾಯನಂ ಕಾಣ್ಬುದಱಿಂದಪ್ರತ್ಯಕ್ಷರೆನಿಸುವ ಇಂದ್ರೋಪೇಂದ್ರರಂ ಕಾಣ್ಬುದೆಂಬ ದುರ್ಲಭಮಾದ ಕಾರ್ಯಂ ಸಿದ್ಧಿಪುದಱಿಂದಿದುವುಂ ವಿಶೇಷಾಲಂಕಾರಂ.

ಇಂತಿವು ಮೂಱುಂ ವಿಶೇಷಾಲಂಕಾರಂಗಳ್.

---

೪೪. ವ್ಯಾಘಾತಾಲಂಕಾರಮೆರಡುಂ ತೆಱಂ :—

(1) " ಸ್ಯಾದ್ವ್ಯಾಘಾತೋಽನ್ಯಥಾಕಾರಿ
ತಥಾಕಾರಿ ಕ್ರಿಯೇತ ಚೇತ್ ॥ "

[ವೃತ್ತಿ] ಲೋಕದೊಳಾವ ವಸ್ತುವಿನಿಂದಾವ ಕಾರ್ಯಮಪ್ಪುದಾ ವಸ್ತುವಿಂದದರ್ಕೆ ವಿರುದ್ಧವಾದ ಕಾರ್ಯಮನೆಸಗುವುದು ವ್ಯಾಘಾತಮೆನಿಪ್ಪುದು.

ಎಂತೆನೆ :—

ಕಂ॥ ಕತ್ತಿಯ ಬೆಳಕಿಂ ಕೞ್ತಲೆ।
ಯೊತ್ತರಮಂ ಕಣ್ಗೆ ಕವಿಸಿಯರಾತಿಯಪಡೆಯಂ ॥
ಮತ್ತಗೆ ತುತ್ತಗೊಳಿಸಿಯುಂ।
ಮತ್ತವರಂ ಸ್ವಸ್ಥರೆನಿಪನವ್ರತಿವೀರಂ ॥೧೧೩

ಇದಱೊಳ್ ಲೋಕದೊಳ್ ಕೞ್ತಲೆಯಂ ಕಳೆವ ಬೆಳಕಿಂದಮೆ ಕೞ್ತಲೆಯಂ ಕವಿಸುವನೆಂದು ಪೇೞ್ವುದಱಿಂದಿದು ವ್ಯಾಘಾತಮೆನಿಪ್ಪುದು. ಭೀರುಗಳ್ಗೆ ಕತ್ತಿಯ ಬೆಳಕಿಂ ಕಣ್ಗೆ ಕೞ್ತಲೆ ಕವಿವುದು ಸಾಜಮಲ್ತೆ!

ಮತ್ತಂ, (2) " ಸೌಕರ್ಯೇಣ ನಿಬದ್ಧಾಪಿ
ಕ್ರಿಯಾ ಕಾರ್ಯವಿರೋಧಿನೀ ॥ "

[ವೃತ್ತಿ] ಎಳಸಿದ ಕಾರ್ಯಕ್ಕೆ ವಿರುದ್ಧವಾದ ಕಜ್ಜಮೆ ಆಕಾರ್ಯಕ್ಕನುಕೂಲಮಾಗೆಯಂದುವುಂ ವ್ಯಾಘಾತಮೆನಿಪ್ಪುದು,

ಎಂತೆನೆ:—

ಕಂ॥ ತಗುೞ್ವ* ಮಹಿಶೂರ ಭಟರೊಡ।
ನಗಿಪಿಂ ಬೊಂಮರಸನುಸಿರ್ದ*ನೆಸವಂತನವೋಲ್ ॥
ನಗೆಗೀಡೆನಿಸದಿರಿಂ ದಲ್।
ವಗೆಯಪ್ಪೆಂ ತಪ್ಪನೆಣಿಸಿ ತಲೆಯಂ ಪುಯಿಸಿಂ ॥೧೧೪

ಇದಱೊಳ್ ಬಿದಿರೂರ ಸಬ್ಬನಿಸಬೊಂಮರಸಂ ಪೆರ್ಬುಲಿಯ ಪ್ರಯಿಲೊಳ್ಮೆಱೆವೋಡುವಾಗಳ್ ಗುಬ್ಬಿ ಮಹಿಶೂರ ಭಟರೊಳ್ಪೇೞ್ವಡೆಯೊಳಾಂ ಪಗೆಯುಪ್ಪುದಱಿಂ ತನ್ನಂ ತಲೆವ್ರಯಿಸಿಂ ಪೊಸಲೂಗೆಸವಂ ತರಾವ್ರವಂ ಮೂಗಂ ಕೊಯ್ದುಳುಪಿದಂತೆನ್ನಂ ನಗೆಗೀಡೆನಿಸಿದಿರಿಮೆಂದು ಪೇೞ್ದಂ. ಇದಱೊಳ್ ತಾಂ ಪಗೆಯಾದೊಡಂ ಪಾರ್ವನೆಂದು ತನ್ನೊಳ್ಪುಟ್ಟಿದ ದಯೆ ತನ್ನ ಜೀವಮನುಳುಪುವುದರ್ಕೆ ಕಾರಣವಾದೊಡನುಂತು ಮೂಗಱಿದುಱಿವುದು ತನಗಭೀಷ್ಟಮಲ್ಲದುದಱಿಂ ತನ್ನೊಳ್ಪುಟ್ಟಿದ ದಯೆಯುನೆ ತನ್ನ ತಲೆವೋಯ್ವುದರ್ಕೆ ಕಾರಣವಾಗಿ ಪೇೞ್ದುದಱಿಂದಿದುವುಂ ವ್ಯಾಘಾತಮೆನಿಪುದು.

ಇವೆರಡುಂ ವ್ಯಾಘಾತಾಲಂಕಾರಂ.

---

‡ ೪೫. ಗುಂಭಾಲಂಕಾರವೆಂಬುದು :—

"ಗುಂಭಃ ಕಾರಣಮಾಲಾಸ್ಯಾ
ದ್ಯಥಾ ಪ್ರಾಕ್ಪ್ರಾಂತಕಾರಣೈಃ ॥"

[ವೃತ್ತಿ] ಪೂರ್ವಪೂರ್ವಕಾರಣಗಳಿಂದುತ್ತರೋತ್ತರಕಾರ್ಯಂಗಳಪ್ಪವೆಂದು ಪೇೞೆಯುದು ಗುಂಭಾಲಂಕಾರಂ.

ಎಂತೆನೆ :—

ಕಂ॥ ಅನುಗೆಯ್ಮೆಯಿನಱಿವುಱಿದಿಂ ।
ವಿನಯಂ ವಿನಯದಿನಶೇಷಜನರಂಜನಮಾ ॥
ಜನರಂಜನದಿಂದೊಳ್ಜಸ ।
ಮನಿತುಂ ಚಿಕದೇವರಾಯನೊಳ್ಮೆಯೊಳಕ್ಕುಂ ॥೧೧೫

---

‡ ಇದಕ್ಕೆ ಸಂಸ್ಕೃತ ಗ್ರಂಥಗಳಲ್ಲಿ ಕಾರಣಮಾಲೆಯೆಂದು ಹೆಸರು.

(೪೬.) ಏಕಾವಳ್ಯಲಂಕಾರಮೆಂಬುದು :—

" ಗೃಹೀತಮುಕ್ತರೀತ್ಯಾರ್ಥ
ಶ್ರೇಣಿರೇಕಾವಳೀ ಮತಾ ॥ "

[ವೃತ್ತಿ] ಪೂರ್ವಪೂರ್ವಪದಾರ್ಥಂ ಉತ್ತರೋತ್ತರಪದಾರ್ಥಂಗಳ್ಗೆ ವಿಶೇಷಣಮಾಗಿರೆಯುದು ಏಕಾವಳ್ಯಲಂಕಾರಂ.

ಎಂತೆನೆ :—

ಕಂ॥ ಗಿರಿಶಿರದೊಳ್ಕಳವೆಪ್ಪೊಲಂ ।
ಪರಿವುವು ಪರಿಕಾಲ್ಗಳಲ್ಲಿ ಪೆರ್ವೊಳೆಗಳವೊಲ್ ॥
ಪರಿಗೋಲಾಡುವುವದಱೊಳ್ ।
ನಿರವಿಸೆ ಚಿಕದೇವರಾಯನೆಸಕಮಿದೆಂತೋ ! ॥೧೧೬

ಇದಱೊಳ್ ಗಿರಿಶಿರಂ ಕಳವೆಪ್ಪೊಲಕ್ಕೆ, ಆಕಳವೆಪ್ಪೊಲಂ ಪರಿಕಾಲ್ಗೆ, ಆಪರಿಕಾಲ್ ಪರಿಗೋಲ್ಗೆ ವಿಶೇಷಣಮಾಗಿರ್ಪುದಱಿಂದಿದು ಏಕಾವಳ್ಯಲಂಕಾರಂ.

---

೪೭. ಮಾಲಾದೀಪಕಮೆಂಬುದು :—

" ದೀಪಕೈಕಾವಳೀಯೋಗಾ
ನ್ಮಾಲಾದೀಪಕಮುಚ್ಯತೇ ॥ "

[ವೃತ್ತಿ] ದೀಪಕಲಕ್ಷಣಂ ಏಕಾವಳೀಲಕ್ಷಣಮುಮೊಂದುವೆರೆದಿರೆ ಮಾಲಾದೀಪಕಮೆನಿಪುದು.

ಎಂತೆನೆ :—

ವೃ॥ ಕೆಳದಿಯ ಪೊಜಿನೊಳ್ಪಡಿದುಮಾನೆಗಳೆಲ್ಲಮುಮಾನೆವೆಣ್ಗಳೊಳ್ ।
ಥಳಥಳಿನಿಪ್ಪಚಪ್ಪರದ ಮಂಚದ ಸಾಲ್ ಪಸಮಂಚಸಾಲ್ಗಳೊಳ್ ॥
ಕೊಳುಗುಳಮಾಂಪ ಬಲ್ಪಡೆವಳರ್ ಪಡೆಯಾಳ್ವರ ಬಾಸಿಗಂಗಳೊಳ್ ।

ತೊಳಪುವುಮುತ್ತುಗಳ್ಜಸದಬಿತ್ತುವೊಲೀಚಿಕದೇವರಾಯನಾ॥

ಇದಱೊಳ್ ತೊಳಪುವೆಂಬುದೊಂದೇ ಪದಮನಿತುಂ ವಾಕ್ಯಂಗಳೊಳನ್ವಿತವಾಗಿರ್ಪುದಱಿಂದೆಯುಂ ಪೂರ್ವಪೂರ್ವ ಪದಂಗಳುತ್ತರೋತ್ತರಪದಂಗಳ್ಗೆ ವಿಶೇಷಣವಾಗಿರ್ಪುದಱಿಂದೆಯುಂ ಮಾಲಾದೀಪಕಮೆನಿಪ್ಪುದು.

---

(೪೮) ಸಾರಾಲಂಕಾರಮೆಂಬುದು :—

"ಉತ್ತರೋತ್ತರಮುತ್ಕರ್ಷ
ಸ್ಸಾರ ಇತ್ಯಭಿಧೀಯತೇ ॥"

[ವೃತ್ತಿ] ಒಂದಱ ಬಱಿಕ್ಕೊಂದು ಪೆರ್ಚುಗೆಯುಳ್ಳ ವಸ್ತುಗಳಂ ತೆಱವಾಯಿಂ ಪೇೞ್ವುದು ಸಾರಾಲಂಕಾರಂ.

ಎಂತೆನೆ :—

ಕಂ॥ ಬವರಕೆ ಪೊಗಲರ್ವೆಗ್ಗಳ ।
ರವರತ್ತಣಿನಾಮರಾಟರವರನಿಬರುವಂ ॥
ಸವಱ ಸದೆಬಡಿದು ನೆಗೞ್ದಂ* ।
ವಿವರಿಸೆ ಚಿಕದೇವರಾಜನಪ್ರತಿರಾಜಂ ॥೧೧೮

---

(೪೯) ಯಥಾಸಂಖ್ಯಾಲಂಕಾರಮೆಂಬುದು :—

"ಯಥಾಸಂಖ್ಯಂ ಕ್ರಮೇಣೈವ
ಕ್ರಮಿಕಾಣಾಂ ಸಮನ್ವಯಃ ॥"

[ವೃತ್ತಿ] ಕ್ರಮದೊಳ್ಪೇೞ್ದ ವಸ್ತುಗಳ್ಗೆಯುದೇ ಕ್ರಮದೊಳನ್ವಯಮಂ ಪೇೞ್ವುದು ಯಥಾಸಂಖ್ಯಮೆನಿಪ್ಪುದು.

ಎಂತೆನೆ :—

ಕಂ॥ ಮೊಗದೊಳ್ಮೆಯ್ಯೊಳ್ಪೊಗರೊಳ್ ।
ಮಿಗೆ ಸೊಗಸಂ ಪಡೆಯೆ ಕಂಡು ಚಿಕದೇವೇಂದ್ರಂ ॥
ಬಗೆದಿಂದುಕಾಮಸೂರ್ಯರ್ ।
ಜಗುಳ್ದಿರ್ಕಱೆ* ರೂಪುಗೇಡು ನಿಡುಬವಣಿಗಳಂ ॥೧೧೯

---

೫೦. ಪರ್ಯಾಯಾಲಂಕಾರಮೆರಡುಂ ತೆಱಂ :—

(1) " ಪರ್ಯಾಯೋ ಯದಿ ಪರ್ಯಾಯೇ
ಣೈಕಸ್ಯಾನೇಕಸಂಶ್ರಯಃ ॥ "

[ವೃತ್ತಿ] ಒಂದು ವಸ್ತು ಮೊದಲೊಳಿರ್ಪ ತಾಣಮಂ ಬಿಟ್ಟು ಪೆಱಪೆಱತೊಂದೊಂದು ತಾಣಮಂ ಕ್ರಮದಿಂ ಸೇರಿತೆಂದು ಪೇೞ್ವುದು ಪರ್ಯಾಯಾಲಂಕಾರಂ.

ಎಂತೆನೆ :—

ಕಂ॥ ಮುನ್ನಿರ್ದುದಮರ್ದು* ಕಡಲೊಳ್ ।
ಪಿನ್ನಮರರ ಬೀಡೊಳೊಡನೆ ವಿನತೆಯ ಮನೆಯೊಳ್ ॥
ತನ್ನಿಂ ತಾನೊಲ್ದೀರ್ಪುವ ।
ಚೆನ್ನಿಗ ಚಿಕದೇವರಾಯನೆಱಕದೊಳೀಗಳ್ ॥೧೨೦

ಮತ್ತಂ, (2) " ಏಕಸ್ಮಿನ್ಯದ್ಯನೇಕಂ ವಾ
ಪರ್ಯಾಯಸ್ಸೋಽಪಿ ಸಮ್ಮತಃ ॥ "

[ವೃತ್ತಿ] ಒಂದು ತಾಣದೊಳ್ತುಱುವಾಯಿಂ ಪೆಱಪೆಱತೊಂದೊಂದು ವಸ್ತುಗಳ್ಸಂಬಂಧಿಸಿದುದಂ ಪೇೞ್ವುದುವುಂ ಪರ್ಯಾಯಾಲಂಕಾರಂ.

ಎಂತೆನೆ :—

ವೃ॥ ಪೊರೆದಕೊರ್ಗಂಗಣಿವರ್ದರಾಬೞಿಕೆ ಬಳ್ಳಾಳಕರ್ದುಂಬರ್ತೆಲುಂ ।
ಗರುಮನ್ದಿಂಗವರೊಳ್ಪುದುಂಗಬೆರವೆಂಬಂತಿರ್ದದಿಂದ್ಧಿಂತು ಸಾ ।

ದರದಿಂ ಕನ್ನಡರಾಯರಾಳ್ವನೆಗಮೀಕರ್ಣಾಟದೇಶಂ ಕರಂ ।
ಹರಿಸಂಚೆತ್ತುದು ಮತ್ತಮಪ್ರತಿಮನಿಂಬಳ್ದಪ್ಪುದಾನಂದದೊಳ್॥
ಇಂತಿವೆರಡುಂ ಪರ್ಯಾಯಾಲಂಕಾರಂಗಳ್.

---

೫೧. ‡ ಪರಿವೃತ್ತ್ಯಲಂಕಾರಮೆಂಬುದು :—

" ಪರಿವೃತ್ತಿರ್ವಿನಿಮಯೋ
ನ್ಯೂನಾಭ್ಯಧಿಕಯೋರ್ಮಿಥಃ ॥ "

[ವೃತ್ತಿ] ಕಿಱಿದಪ್ಪ ವಸ್ತುವನಿತ್ತು ಪಿರಿದಪ್ಪವಸ್ತುವಂ ಪಡೆದುದಂ ಪೇೞ್ವುದು ಪರಿವೃತ್ತಿಯೆನಿಪ್ಪುದು.

ಎಂತೆನೆ :—

ಕಂ॥ ಪಡೆಯುಡಿದೊಳಂ ಪಸರಿಸಿ ।
ಪಡೆವಂ ಪಗೆದೊರೆಗಳಾಳ್ದ ಪ್ರೊಡವಿಯನನಿತಂ ॥
ಕಡೆಗಣ್ಬೆಳಗಂ ಸುಱುಸುವ ।
ನೊಡನೀೞ್ವಂ ರಾಯಗನ್ನೆಯರನಪ್ರತಿಮಂ ॥೧೦೭

---

೫೨. ಪರಿಸಂಖ್ಯಾಲಂಕಾರಮೆಂಬುದು :—

" ಪರಿಸಂಖ್ಯಾನಿಷಿಧ್ಯೈಕ
ಮೇಕಸ್ಮಿನ್ವಸ್ತುಯಂತ್ರಣಂ ॥ "

[ವೃತ್ತಿ] ಒಂದಱೊಳೊಂದು ವಸ್ತುವನಿಲ್ಲೆಂದು ಪೆಱತೊಂದಱೊಳಾ ವಸ್ತುವಿಪ್ಪುದೆಂದು ಪೇೞ್ವುದು ಪರಿಸಂಖ್ಯೆಯೆನಿಪ್ಪುದು.

ಎಂತೆನೆ :—

ಕಂ॥ ಜಗದೇಕವೀರನರಪತಿ ।
ಜಗತೀಜನಮನಿತನೊಳ್ಪಿನಿಂದೋವುವಿನಂ ॥

---

‡ ಅಧಿಕದಿಂದ ಸಮಸ್ವೀಕಾರವೆಂದೂ, ಸಮದಿಂದ ಸಮಸ್ವೀಕಾರವೆಂದೂ, ಇನ್ನೂ ಎರಡು ಭೇದಗಳು ಸಂಸ್ಕೃತಗ್ರಂಥಗಳಲ್ಲಿ ಹೇಳಿವೆ.

ಮೊಗಗೇಡಿಸವಂತಿಗನೊಳ್ ।
ಬಗೆವಿನಮಾಚನ್ನಬಸವನೊಳ್ದ್ವಿಜಪತನಂ ॥೧೨೩

ಇದಱೊಳ್ ಚಿಕದೇವಮಹಾರಾಜವರಸುಗೆಯ್ಯುತ್ತಿರ್ಪಿನಂ ಮೊಗಗೇಡುಂ ದ್ವಿಜಪತನಮುಂ ನಾಡುಗರೊಳಿಲ್ಲ ; ಎಸವಂತರಾವ್ರುವಿನೊಳಂ ಚನ್ನಬಸವನೊಳಮೊಳವೆಂದು ಪೇೞ್ವುದಱಿಂದಿದು ಪರಿಸಂಖ್ಯಾಲಂಕಾರಂ.

---

೫೩. ವಿಕಲ್ಪಾಲಂಕಾರಮೆಂಬುದು :—

" ವಿರೋಧೇ ತುಲ್ಯಬಲಯೋ
ರ್ವಿಕಲ್ಪಾಲಂಕೃತಿರ್ಮತಾ ॥ "

[ವೃತ್ತಿ] ಸಮಬಲಮಾಗಿಯೊಂದಕ್ಕೊಂದು ವಿರುದ್ಧಮಾಗಿರ್ಪ ಕಜ್ಜಂಗಳೊಳಾವುದನಾದೊಡಮೊಂದನೆಸಗಲ್ವೇೞ್ಪುದೆಂಬುದು ವಿಕಲ್ಪಾಲಂಕಾರಂ.

ಎಂತೆನೆ: —

ಕಂ॥ ದೊರೆದೊರೆಗಳರಾ ಕೇಳಂ ।
ಪರಿಪರಿಯೊಳ್ಬನ್ನಬಟ್ಟು ಬಸವಱಿಯದಿರಿಂ ॥
ನರಪತಿಯಡಿನೆೞಲೊಳ್ಮೇಣ್ ।
ಸುರಪತಿಯಡಿನೆೞಲೊಳಾದೊಡಂ ಸೊಗವಾಳಂ ! ॥೧೨೪

---

೫೪. ಸಮುಚ್ಚಯಾಲಂಕಾರಮೆರಡುಂ ತೆಱಂ :—

(1) " ಬಹೂನಾಂ ಯುಗಪದ್ಭಾವ
ಭಾಜಾಂ ಗುಂಭಸ್ಸಮುಚ್ಚಯಃ ॥ "

[ವೃತ್ತಿ] ಒಂದರ್ಕೊಂದು ವಿರುದ್ಧವಿಲ್ಲದ ಕ್ರಿಯೆಗಳಂ ಏಕವೇಳೆಯೊಳ್ಪೇೞ್ವುದು ಸಮುಚ್ಚಯಾಲಂಕಾರಂ.

ಎಂತೆನೆ :—

ಕಂ॥ ಬೆದಱಿ ಬೆಸಂಗೆಟ್ಟೋಡುವ ।
ಬಿದಿರೂರ್ದಳವಾಯಿ ಚೆನ್ನಬಸವಂ ಬೆರ್ಚು ॥
ತ್ತಿದೆಕೊಳ್ ಮಹಿಶೂರವರೆಂ ।
ದೊದಱುವನುಡುಗುವನೊರಲ್ವನುಬ್ಬೆಗವಡೆವಂ ॥೧೨೫

ಮತ್ತಂ, (2) " ಅಹಂ ಪ್ರಥಮಿಕಾಭಾಜಾ
ಮೇಕಕಾರ್ಯಾನ್ವಯೋಽಪಿ ಸಃ ॥ "

[ವೃತ್ತಿ] ಒಂದು ಕಾರ್ಯಮಂ ಸಾಧಿಪ್ಪುದರ್ಕೆ ಪಲವುಂ ಕಾರಣಂಗಳ್ ಆಂ ತಾನೆಂದು ಪ್ರವರ್ತಿಸುವುದುಂ ಸಮುಚ್ಚಯಮೆನಿಪ್ಪುದು.

ಎಂತೆನೆ :—

ಕಂ॥ ವಿತರಣಮುಂ ವಿಕ್ರಮಮುಂ ।
ಶ್ರುತಮುಂ ಸುಚರಿತ್ರಮುಂ ಸುಶೀಲಮುಮೊಳ್ಪಂ ॥
ಜತೆವಡೆದಾಂ ತಾನೆಂದ ।
ಪ್ರತಿಮನ ಮಹನೀಯ್ಯಕೀರ್ತಿಯಂ ಬಿತ್ತರಿಕುಂ ॥೧೨೬

ಇಂತೆರಡುಂ ಸಮುಚ್ಚಯಂ.

---

೫೫. ಕಾರಕದೀಪಕಮೆಂಬುದು :—

" ಕ್ರಮಿಕೈಕಗತಾನಾಂ ತು
ಗುಂಫಃ ಕಾರಕದೀಪಕಂ ॥ "

[ವೃತ್ತಿ] ಒಂದು ಕಾರಕಮನೇಕವಾಕ್ಯಾರ್ಥಂಗಳೊಳನ್ವಿತಮಾಗೆಯುದು ಕಾರಕದೀಪಕಂ.

ಎಂತೆನೆ :—

ವೃ॥ನೆವಮಿನಿತಿಲ್ಲದೊಲುಗ್ಗವೊಸೆಗುಂ ನೆನೆಗುಂ ಬರಿಕುಂ ದಯಾರಸಂ।
ಕವಿತರೆ ನಿಬ್ಬಕುಂ ನಲಿಗುಮಾಪರಿಕುಂ ಮನವಾರೆ ಮನ್ನಿಕುಂ॥
ಸವಿನುಡಿದೋಱುಗುಂ ತಿರುಮಲಾರ್ಯನೊಳಪ್ರತಿಮಪ್ರಭಾವದಿಂ।
ದವನಿಯನಾಳ್ಗೆ ಬಾಳ್ಗೆ ಸತತಂ ಚಿಕದೇವನರೇಂದ್ರಚಂದ್ರಮಂ ॥

ಇದಱೊಳ್ ನರೇಂದ್ರಚಂದ್ರಮನೆಂಬ ಕರ್ತೃಕಾರಕಂ ಕ್ರಮದಿಂದನೇಕಕ್ರಿಯೆಗಳೊಳನ್ವಿತಮಪ್ಪುದಱಿಂದಿದು ಕಾರಕದೀಪಕಾಲಂಕಾರಂ.

---

೫೬. ಸಮಾಧ್ಯಲಂಕಾರಮೆಂಬುದು :—

“ಸಮಾಧಿಃ ಕಾರ್ಯಸೌಕರ್ಯಂ
ಕಾರಣಾಂತರಸನ್ನಿಧೇಃ ॥”

[ವೃತ್ತಿ] ಪೇೞ್ವ ಕಜ್ಜಮೊಂದು ಕಾರಣದಿಂದಪ್ಪುದೆಂದಿರ್ಪನಮದರ್ಕನುಗುಣಮಾಗಿ ಪೆಱತೊಂದು ಕಾರಣಂ ಸಮನಿಸೆಯುದು ಸಮಾಧಿಯೆನಿಪುದು.

ಎಂತೆನೆ :—

ಕಂ॥ ಮುಱಿದೋಡಿಯೋಡಿ ಕೆಳದಿಯ।
ಗುಱಿವಾನಿಸರೋಜೆಗುಂದಿ ನಿಂದಿರ್ಪನೆಗಂ॥
ತಱಿತಱಿದು ತಣಿದು ಮಹಿಶೂ।
ರೆಱೆಯನ ಪಡೆ ಧರ್ಮಗಾಳೆವಿಡಿಸಿದುದಾಗಳ್ ॥೧೨೮

ಇದಱೊಳ್ ಮುಱಿದೋಡಿದ ಕೆಳದಿಯ ಪಡೆವಳರ್ ಕೈಕಾಲುಡುಗಿ ಬಱಲ್ದು ಬಾಯಾಱಿ ಇನ್ನರೆಗಳಿಗೆಯ ಮೇಲೆ ಮಹಿಶೂರವರ್ ತಲೆವೊಯ್ದೊಡಂ ಪೊಯ್ಗೆ ಇನಿಸುಂ ಪೊಱ್ತಲ್ಲಿ ಕುಳ್ಳಿರ್ಪುದೆ ಸೊಗಮೆಂದೆಣಿಸಿರ್ಪನಿತಱೊಳ್ಮಹಿಶೂರವರುಂ ಪೊಯ್ದು ಪೊಯ್ದು ತಣಿದು ಧರ್ಮಗಾಳೆ

ವಿಡಿಸಿದರ್. ಈಕಾರಣದಿಂದವರ್ ಕೊಳ್ಪರ್ಗೆ ಕಜ್ಜಂ ಸಮಾಧಾನಂಗೊಂಡುದಱಿಂದಿದು ಸಮಾಧ್ಯಲಂಕಾರಂ.

---

೪೭. ಪ್ರತ್ಯನೀಕಾಲಂಕಾರಮೆಂಬುದು :—

"ಪ್ರತ್ಯನೀಕಂ ಬಲವತಃ
ಶತ್ರೋಃ ಪಕ್ಷೇ ಪರಾಕ್ರಮಃ ॥"

[ವೃತ್ತಿ] ಬಲವಂತನಾದ ಶತ್ರುವನೊಳ್ಸೆಣಸಲಾಱದೆ ಆಪಕ್ಷದವರ ಮೇಲೆ ಪರಾಕ್ರಮಂಗೆಯ್ವುದು ಪ್ರತ್ಯನೀಕಾಲಂಕಾರಂ.

ಎಂತೆನೆ :—

ಕಂ॥ ಕೊಳಲಾಱದೊಳ್ಮಹಿಶೂರವ ।
*ಗೊರ್ಳಗಾದವರೆಂದು ಬಱಿದೆ ತಂತಮ್ಮವರೊಳ್ ॥
ಪೞಿವೆಣಿಸಿ ಪೊಯ್ಸಿ ತಲೆಯಂ ॥
ಕೆಳದಿಯವರ್ಗೆಲ್ಲಮಾಂತವ್ರೋಲ್ಕೆಂಕರಿಪರ್ ॥ ೧೨೯

ಇದಱೊಳ್ ಕೆಳದಿಯವಂ ಮಹಿಶೂರವಱೊಳ್ಸೆಣಸಲಾರದೆ ತಮ್ಮವರೊಳೆ ಕೆಲಂಬರಂ ಮಹಿಶೂರವಗೊರ್ಳಗಾದರೆಂದು ಪೊಯ್ಸುವುದಱಿಂದಿದು ಪ್ರತ್ಯನೀಕಾಲಂಕಾರಂ.

---

೪೮. ಕಾವ್ಯಾರ್ಥಾಪತ್ತ್ಯಲಂಕಾರಮೆಂಬುದು :—

"ಕೈಮುತ್ಯೇನಾರ್ಥಸುಸಿದ್ಧಿಃ
ಕಾವ್ಯಾರ್ಥಾಪತ್ತಿರಿಷ್ಯತೇ ॥"

[ವೃತ್ತಿ] ಒಂದು ಕಾರಣದಿಂ ಪಿರಿದಾದ ಕಜ್ಜಮಪ್ಪುದೆಂಬುದಂ ಪೇೞ್ದು ಕಿಱಿದಾದ ಕಜ್ಜಮಪ್ಪುದಂ ಪೇೞ್ವುದೇನೆಂಬ ಕೈಮುತಿಕನ್ಯಾಯದಿಂ ಪೇೞೆಯದು ಕಾವ್ಯಾರ್ಥಾಪತ್ತಿಯೆನಿಪ್ಪುದು.

ಎಂತೆನೆ :—

ಕಂ|| ಸೆಣಸಿ ಮಹಿಶೂರಭಟರೊಳ್ |
ಪೊಣರ್ದ*ಱಿವರ್ ಪೊಲಬುಗೆಟ್ಟು ಮಾಯಿಮುರಾಟರ್ ||
ಮಣಿದವೋರ್ಗಲರುಮೆನೆಯುಂ |
ಬಣಗುಗಳೇಕೆಳದಿಮಧುರೆದೊರೆಗಳ ಪಾಡೇಂ || ೧೩೦

೫೯ ಕಾವ್ಯಲಿಂಗಾಲಂಕಾರಮೆರಡುಂ ತೆಱಂ :—

" ಸಮರ್ಥನೀಯಸ್ಯಾರ್ಥಸ್ಯ
ಕಾವ್ಯಲಿಂಗಂ ಸಮರ್ಥನಂ || "

[ವೃತ್ತಿ] ನೆಲೆಗೊಳಸವೇೞ್ಪುದೊಂದರ್ಥಮುಂ ನೆಲೆಗೊಳಿಸುವುದು ಕಾವ್ಯಲಿಂಗಮೆನಿಪ್ಪುದು. ಅದುವುಮೊಂದು ಪದಾರ್ಥಮುಂ ಕಾರಣಂಗೆಯ್ದುದಱಿಂ ನೆಲಗೊಳಸೆ (1) ಪದಾರ್ಥಹೇತುಕಮೆಂದುಂ, ವಾಕ್ಯಾರ್ಥಮುಂ ಕಾರಣಂಗೆಯ್ದು ನೆಲೆಗೊಳಸೆ (2) ವಾಕ್ಯಾರ್ಥಹೇತುಕಮೆಂದುಮೆರಡುಂತೆಱಂ.

(1) ಪದಾರ್ಥಹೇತುಕಮೆಂತೆನೆ :—

ಕಂ|| ಪಿರಿದುಂ ಬಲಮಿರ್ಪುದು ಪಡಿ |
ಬರಿಸುವೆವೆಂದೇಕೆ ಬಗೆವಿರರಿಭೂಪರಿರಾ ! ||
ನರಪತಿಚಿಕದೇವೇಂದ್ರಂ |
ಪೆರಬಲಭುಜನಮನೆಸಗದೇನುೞಿವವನೇ ? || ೧೩೧

ಇದಱೊಳ್ ದೇವೇಂದ್ರನೆಂಬ ಪೆಸರ್ವಡೆದ ನರಪತಿಯುಂ ಸುರಪತಿಯುಂ ದೇವೇಂದ್ರನೆಂಬೊಂದೆ ಪದದರ್ಥಮಾದುದಱಿಂದೊಂದೆನಿಸಿ ತೋರ್ಪರ್. ಪಗೆಯಪ್ಪ ಬಲನೆಂಬ ರಕ್ಕಸನುಂ ಕೊಲ್ವುದುಂ ಪಗೆಗಳುಮಂ ಕೊಲ್ವುದುಮೆಂಬೀಯೆರಡುಂ ಪರಭುಜನಮೆಂಬೊಂದೆ ಪದಕ್ಕೆ

ಅರ್ಥವಾದುದಱಿಂದೊಂದೆನಿಸಿ ತೋಱ್ಪುದು. ಈಪರಬಲಭಂಜನನೆಂಬ ಕಾರ್ಯಮಂ ನೆಲೆಗೆಯ್ವುದರ್ಕೆ ದೇವೇಂದ್ರನೆಂಬ ಪದಾರ್ಥಂ ಕಾರಣಮಾದುದಱಿಂದಿದು ಪದಾರ್ಥಹೇತುಕವಾದ ಕಾವ್ಯಲಿಂಗಾಲಂಕಾರಂ.

(2) ವಾಕ್ಯಾರ್ಥಹೇತುಕಮೆಂತೆನೆ :—

ಕಂ|| ನರಪತಿಯಲ್ತಮರೇಂದ್ರಂ |
ನರಪತಿಯಮರೇಂದ್ರನಲ್ತು ನಿರವಿಸೆ ಜಗದೊಳ್ ||
ನರಪತಿಚಿಕದೇವೇಂದ್ರಂ |
ಗರಿದಾಯ್ತುಪಮಾನಮದಱಿನಪ್ರತಿಮನಿವಂ ||೧೩೦

ಇದಱೊಳ್ ಅಪ್ರತಿಮನೆಂಬರ್ಥಮಂ ನೆಲೆಗೊಳಿಪುದರ್ಕೀವಾಕ್ಯಾರ್ಥಂ ಕಾರಣಮಾಗಿರ್ಪುದಱಿಂದಿದು ವಾಕ್ಯಾರ್ಥಹೇತುಕ ಕಾವ್ಯಲಿಂಗಾಲಂಕಾರಂ.

ಇಂತು ಕಾವ್ಯಲಿಂಗಮೆರಡುಂ ತೆಱಂ.

---

೬೨. ಅರ್ಥಾಂತರನ್ಯಾಸಮೆರಡುಂ ತೆಱಂ :—

“ ಉಕ್ತಿರರ್ಥಾನ್ತರನ್ಯಾಸಃ
ಸ್ಯಾತ್ಸಾಮಾನ್ಯವಿಶೇಷಯೋಃ || ”

[ವೃತ್ತಿ] ಸಾಮಾನ್ಯವಿಶೇಷಂಗಳಂ ಪೇೞ್ವುದು ಅರ್ಥಾಂತರನ್ಯಾಸಂ. ಅದುವುಂ ಪ್ರಸ್ತುತಮಾದರ್ಥಂ ವಿಶೇಷಮಾಗಿ ಅಪ್ರಸ್ತುತಮಾದರ್ಥಂ ಸಾಮಾನ್ಯಮಾಗೆಯುದು ಸಾಮಾನ್ಯದಿಂ ವಿಶೇಷಸಮರ್ಥನರೂಪಮಾದ ಅರ್ಥಾನ್ತರನ್ಯಾಸಾಲಂಕಾರಂ. ಸಾಮಾನ್ಯಂ ಪ್ರಸ್ತುತಮಾಗಿ ವಿಶೇಷಮಪ್ರಸ್ತುತಮಾಗೆ ವಿಶೇಷದಿಂ ಸಾಮಾನ್ಯಸಮರ್ಥನರೂಪಮಾದ ಅರ್ಥಾನ್ತರನ್ಯಾಸಾಲಂಕಾರಂ. ಅದಱೊಳ್,

**(1) ಸಾಮಾನ್ಯದಿಂ ವಿಶೇಷಸಮರ್ಥನಮೆಂತೆನೆ :—**

ಕಂ॥ ರಣಕೆಣೆಯಿಲ್ಲೆಂಬವ್ರೊಲುರ ।
ವಣಿಸುವ ಪಾದೋಜಿಜೆಯ್ತ್ತಜಿಗಳಱಿವರೆನ ॥
ಲ್ಕೆಣಿಸೆ ಮಹೀಶೂರವರಂ ।
ಕೆಣಕಿದವರೊಳಱಿಯುದುಱಿದಲಾರೀಧರೆಯೊಳ್? ॥೧೩೩

ಇದಱೊಳ್ ದಾದೋಜಿ ಜೆಯ್ತ್ತಜಿಗಳಱಿದರೆಂಬ ವಿಶೇಷಮಂ ಮಹೀಶೂರವರಂ ಕೆಣಕಿದವರೊಳುಱಿದರಾರೆಂಬ ಸಾಮಾನ್ಯದಿಂ ನಿರವಿಸುವ್ರುದಱಿಂದಿದು ಸಾಮಾನ್ಯದಿಂ ವಿಶೇಷಸಮರ್ಥನಮೆನಿಪ್ಪುದು.

(೨) ವಿಶೇಷದಿಂ ಸಾಮಾನ್ಯಸಮರ್ಥನಮೆಂತೆನೆ :—

ಕಂ॥ ದೊರೆಯೊಳ್ಸೆಣಸುಗೆ ತನ್ನಿಂ ।
ಪಿರಿಯರೊಳುರವಣಿಸಿ ಪ್ರೊಣರ್ದೊರ್ಡಱಿವ್ರುದು ದಿಟಮಿಾ ॥
ನರಪತಿಯೊಳ್ಪ್ರೊಣರ್ದಱಿದರ್ ।
ಪರಿಕಿಪ್ರೊಡಾಕೆಳದಿಮಧುರೆಬೇತಮರಾಟರ್ ॥೧೩೪

ಇದಱೊಳ್ ತಮ್ಮಿಂ ಪಿರಿಯರೊಳ್ಸೆಣಸಿದವರಱಿವರೆಂಬ ಸಾಮಾನ್ಯಮಂ ಚಿಕದೇವರಾಯನೊಳ್ಸೆಣಸಿದ ಕೆಳದಿಮಧುರೆಮುಂತಾದವರಱಿದರೆಂಬ ವಿಶೇಷದಿಂ ನಿರವಿಸುವದಱಿಂದಿದು ವಿಶೇಷದಿಂ ಸಾಮಾನ್ಯಸಮರ್ಥನಮೆನಿಪ್ಪುದು.

ಇಂತಿವೆರಡುಮರ್ಥಾನ್ತರನ್ಯಾಸಂಗಳ್.

---

೬೧. ವಿಕಸ್ವರಾಲಂಕಾರಮೆಂಬುದು :—

“ ಯಸ್ಮಿನ್ವಿಶೇಷಸಾಮಾನ್ಯ
ವಿಶೇಷಾಸ್ಸವಿಕಸ್ವರಃ ॥ ” 20

[ವೃತ್ತಿ] ಒಂದು ವಿಶೇಷಮಂ ಸಮರ್ಥಿಸುವ್ರುದರ್ಕೆ ಸಾಮಾನ್ಯಮಂ ಅದಂ ಸಮರ್ಥಿಸುವ್ರುದರ್ಕೊಂದು ವಿಶೇಷಮಂ ಪೇೞಿಯುದು ವಿಕಸ್ವರಾಲಂಕಾರಂ.

ಎಂತೆನೆ :—

ಕಂ॥ ತನ್ನಂ ನೆರೆನೆಮ್ಮಿದರಂ ।
ತನ್ನವೊಲುನ್ನತನನಿಕ್ಕುವೀಯಪ್ರತಿಮಂ ॥
ಮುನ್ನೆ*ಗಟ್ದ ಪಿರಿಯರುಂ ಶ್ರೀ ।
ಮನ್ನಾರಾಯಣನುಮೆಣಿಸಲಂತೆವೊಲ್ಕೈಸೆ ! ॥೧೩೪

೫೦. ಪ್ರೌಢೋಕ್ತ್ಯಲಂಕಾರಮೆಂಬುದು :—

‡ “ ಪ್ರೌಢೋಕ್ತಿಸ್ಸ್ಯಾತ್ಕ್ರಿಯೋತ್ಕರ್ಷಾ
ಹೇತೌ ಹೇತುತ್ವಕಲ್ಪನಂ॥ ”

[ವೃತ್ತಿ] ಒಂದು ಕಾರ್ಯದ ಪೆರ್ಚುಗೆಗೆ ಕಾರಣಮಲ್ಲದುದಂ ಕಾರಣಮಾಗಿ ಪೇೞ್ವುದು ಪ್ರೌಢೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಮಂದಮರಾಟರ ದುರ್ಯ್ಯಶ ।
ದಿಂದಂ ಮಿಗೆ ಮಾಸಿವಂದ ಕರ್ಣಾಟಕದಾ ॥
ಕಂದಂ ಕಳೆದಪ್ರತಿಮಂ ।
ಚಂದದೊಳುೞಿಯೊಳ್ಪವಡಿಸಿದಂ ನಿಜಯಶದಿಂ ॥೧೩೫

ಇದಱೊಳ್ ಮಂದಬುದ್ಧಿಗಳಪ್ಪ ಮರಾಟರಱಜಸಂ ಸ್ವರೂಪದಿಂ ಕಾಣಿಸದಿರ್ದೊಡಂ ಕವಿಗಳ ಸಂಕೇತದಿಂ ಕರಿದೆಂದು ನೆಲೆಗೆಯ್ದ ಕನ್ನಡನಾಡ ಉಪಟಲಮೆಂಬ ಕಂದಂ ಪೆರ್ಚಿಸುವುದೆಂದು ಪೇೞ್ವುದಱಿಂದಿದು ಪ್ರೌಢೋಕ್ತ್ಯಲಂಕಾರಂ.

‡ ನಮ್ಮಲ್ಲಿರುವ ಪ್ರತಿಗಳಲ್ಲಿ “ಪ್ರೌಢೋಕ್ತಿರುತ್ಕರ್ಷಾಹೇತೌ। ತದ್ಧೇತುತ್ವಪ್ರಕಲ್ಪನಂ॥ ” ಎಂದೂ ಪಾಠವಿದೆ.

೬೩. ಸಂಭಾವನಾಲಂಕಾರವೆಂಬುದು :—

" ಸಂಭಾವನಂ ಯದೀತ್ಥಂ ಸ್ಯಾ
ದಿತ್ಯೂಹೋऽನ್ಯಸ್ಯ ಸಿದ್ಧಯೇ ॥ "

[ವೃತ್ತಿ] ಪೆಱತೊಂದು ಕಾರ್ಯಮಿಂತಾದೊಡೀಕಾರ್ಯಮಿಂತಪ್ಪುದೆಂದೆಣಿಪುದು ಸಂಭಾವನಾಲಂಕಾರಂ.

ಎಂತೆನೆ :—

ಕಂ॥ ಕೊನಬೆನಿಸೆ ರಾಮಚಂದ್ರಂ ।
ಬಿನದಂಗಳನುೞಿದು ಕೃಷ್ಣನೊಪ್ಪದೊಳಿರೆಯುಂ ॥
ದನು ದೊರೆಯಪ್ರತಿಮಂಗೆಂ ।
ದನುವದಿಸಲ್ಕಪ್ಪುದೆಂದು ಕಬ್ಬಿಗರೊರೆವರ್ ॥ ೧೩೭

ಇದಱೊಳ್ ಶ್ರೀರಾಮಭದ್ರನಿನಿಸುಂ ಶೃಂಗಾರಲೀಲಾಸಕ್ತನಾದೊಡಂ ಶ್ರೀಕೃಷ್ಣಂ ಮರ್ಯಾದೆಯೊಳಿರ್ದೊಡಂ ಚಿಕದೇವೇಂದ್ರಂಗೆ ದೊರೆಗೊಳಿಸವಪ್ಪರ್ದೆಂಬುದಱಿಂದಿದು ಸಂಭಾವನಮೆನಿಪ್ಪುದು.

---

೬೪. ಮಿಥ್ಯಾಧ್ಯವಸಿತ್ಯಲಂಕಾರಮೆನೆ :—

" ಕಿಂಚಿನ್ಮಿಥ್ಯಾರ್ಥಸಿದ್ಧ್ಯರ್ಥಂ
ಮಿಥ್ಯಾರ್ಥಾಂತರಕಲ್ಪನಂ ॥ "

[ವೃತ್ತಿ] ಒಂದರ್ಥಂ ಪುಸಿಯೆಂದು ಪೇೞ್ವುದರ್ಕೆ ಪೆಱತು ಪಲವುಂ ಪುಸಿಗಳಂ ಪೇೞ್ವುದು ಮಿಥ್ಯಾಧ್ಯವಸಿತಿಯೆನಿಪ್ಪುದು.

ಎಂತೆನೆ :—

ಕಂ॥ ಪಿಡಿದು ಮೊಲೆಗೋಡಿನಲಗಂ ।
ಕಡುಗಿ ಬಿಸಿಲ್ಗುದುರೆಯೇಱಿ ಬಂಜೆಯ ಕುವರರ್ ॥
ನಡೆತರೆ ನೆಲನಂ ಸೋಂಕದೆ ।
ಪಡಿವರಿಸಲ್ಕರ್ಕುಮಂದು ಮಹಿಶೂರವರೊಳ್ ॥ ೧೩೮

೬೫. ಲಲಿತಾಲಂಕಾರಮೆಂತೆನೆ :—

“ ಪ್ರಸ್ತುತೇ ವರ್ಣ್ಯವಾಕ್ಯಾರ್ಥ
ಪ್ರತಿಬಿಮ್ಬಸ್ಯ ವರ್ಣನಮ್ ॥ ”

[ವೃತ್ತಿ] ವರ್ಣ್ಯಮಾದೊಂದು ವಸ್ತುವಿನ ಕಾರ್ಯಮಂ ತಿಳುಪಲೆಳಸಿ ಆಕಾರ್ಯಮಂ ಪೇೞದೆ ಆವಸ್ತುವಿನೊಳ್ ಅದರ್ಕೆ ಸಮಾನಮಾದ ಕಾರ್ಯಾನ್ತರಮಂ ಬಣ್ಣಿಸೆಯುದು ಲಲಿತಾಲಂಕಾರಂ.

ಎಂತೆನೆ :—

ಕಂ॥ ಅಂಗಱಿಯದೆ ಕನ್ನಡನಾ ।
ಡಿಂಗಾಮೇತರ್ಕೆ ಪೊಕ್ಕೆವೇೞೆಱಮಕಟಾ ! ॥
ತಾಂ ಗವಿಯೊಳ್ಮಲಗಿದ ಕಡು ।
ಸಿಂಗಮನೆಬ್ಬಿಸಿದೆವೆಂದರಂದು ಮರಾಟರ್ ॥೧೩೯

ಇದಱೊಳ್ಮರಾಟರ್ ಕನ್ನಡನಾಡಂ ಪೊಕ್ಕು ತಾವೆಸಗಿದೆಸಕಮನೆಣಿಸುವೆಡೆಯೊಳ್ ಚಿಕದೇವರಾಯನಂ ಕೆಣಕಿದುದಱಿಂ ತಾವಿಾದೇಶದೊೞರದಂತಾದುದೆಂಬರ್ಥಮಂ ಪೇೞಲೆಳಸಿ ಅದಂ ಪೇೞದೆ ಸಿಂಗಮನೆಬ್ಬಿಸಿದೆವೆಂದು ತತ್ಸಮಾನಮಾದ ಕಾರ್ಯಮಂ ಪೇೞ್ದುದಱಿಂದಿದು ಲಲಿತಾಲಂಕಾರಂ.

---

೬೬. ಪ್ರಹರ್ಷಣಾಲಂಕಾರಂ ಮೂಱುಂ ತೆಱಂ :—

(1) “ ಉತ್ಕಂಠಿತಾರ್ಥಸಂಸಿದ್ಧಿ
ರ್ವಿನಾ ಯತ್ನಂ ಪ್ರಹರ್ಷಣಮ್ ॥ ”

[ವೃತ್ತಿ] ಬಹುಪ್ರಯತ್ನಂಗೆಯ್ಯದೆ ಅಭೀಷ್ಟಕಾರ್ಯಂ ಸಿದ್ಧಿಪುದು ಪ್ರಹರ್ಷಣಾಲಂಕಾರಂ.

ಎಂತೆನೆ :—

ಮಸಗಿ ಚಿಕದೇವರಾಯಂ ।
ದೆಸೆಗೆಲಲೆಂದೆಳಸಿ ದೞಿಮನನುಗೊಳಿಸುವಿನಂ ॥
ಪಸಿದಿರ್ಪ ಪುಲಿಯನರಸುವ ।
ಬಸವನವೊಲ್ಬಂದನಂದು ಕೆಳದಿಯ ಬಸವಂ ॥೧೪೦

ಇದಱೊಳ್ ಚಿಕದೇವಮಹಾರಾಯಂ ದಿಗ್ವಿಜಯಕ್ಕೆಳಸಿ ಕೆಳದಿಯ ನಾಡಂ ಗೆಲ್ವುದಕ್ಕಾರ್ದೊಡೆಯ ತಪ್ಪನೆಣಿಸುತ್ತಿರ್ಪನವಾಬಸವಪ್ಪನಾಯಕಂ ತಾನೇ ಮುಂದುವರಿದು ಬಂದುದಱಿಂದಿದು ಪ್ರಹರ್ಷಣಾಲಂಕಾರಂ.

ಮತ್ತಂ, (2) " ವಾಂಛಿತಾದಧಿಕಾರ್ಥಸ್ಯ
ಸಂಸಿದ್ಧಿಶ್ಚ ಪ್ರಹರ್ಷಣಮ್ ॥ "

[ವೃತ್ತಿ] ಬಯಸಿದರ್ಥದತ್ತಣಿಂದಧಿಕವಾದರ್ಥಂ ಸಿದ್ಧಿಸೆಯುದುಂ ಪ್ರಹರ್ಷಣಂ.

ಎಂತೆನೆ :—

ಕಂ॥ ವಸಗೆಡಿಸಿ ಕೆಳದಿದೞಿಮಂ ।
ಬಸಗೊಳಲುರವಣಿಸೆ ರಾಮಬಾಣಮನನಿತುಂ ॥
ಬಸವಾದುವಾನೆಕುದುರೆಗ ।
ಳೊಸಗೆಯ ಮೇಲೊಸಗೆ ನಿನಗೆ ಚಿಕದೇವೇಂದ್ರಾ ! ॥೧೪೧

ಇದಱೊಳ್ ಪೆರ್ಬುಲಿಯ ಪುಯಿಲೊಳ್ಕೆಳದಿದೞಿಮಂಗೆಲ್ದ ವೃತ್ತಾನ್ತಮಂ ಪರೆಕಾಱಂ ಬಂದು ಚಿಕದೇವರಾಯನಡಿಗೆ ಬಿನ್ನವಿಸುವೆಡೆಯೊಳ್ಕೆಳದಿದೞಿದೊಳ್ಸೆಸರ್ವಡೆದ ರಾಮಬಾಣಮೆಂಬ ಸೊರ್ಕಾನೆಯುಂ ಬಸಂಗೆಯ್ಯಲೆಳಸಿಯೆಮ್ಮ ಪಡೆವಳರನಿಬರುಮುರವಣಿಸಿ ನಡೆಯೆ ಕೆಳದಿಯ ಪಡೆ ಮುಱಿದು ಪಲವುಮಾನೆಕುದುರೆಗಳುಮೆಮ್ಮ ಕೈಬಸವಾದು

ದೆಂದು ಪೇೞ್ವುದಱಿಂದಿದುವುಂ ಪ್ರಹರ್ಷಣಂ.

ಮತ್ತಂ, (3) " ಯತ್ನಾದುಪಾಯಸಿದ್ಧ್ಯರ್ಥಾ
ತ್ಸಾಕ್ಷಾಲ್ಲಾಭಃ ಫಲಸ್ಯ ಚ ॥ "

[ವೃತ್ತಿ] ಒಂದು ಕಾರ್ಯಕ್ಕುಪಾಯಮಂ ಸಾಧಿಸುವಾಗಳೇ ಆಕಾರ್ಯಂ ಸಿದ್ಧಿಸೆಯುದುವುಂ ಪ್ರಹರ್ಷಣಂ.

ಎಂತೆನೆ :—

ಕಂ॥ ಅಡವಿರಿಸಿ ಮಕ್ಕಳಂ ಸಿರಿ ।
ಯುಡಿಯೊಳಗವೆಸಗಿ ದೊರೆಗಳಪ್ಪನಿತಱೊಳೇ ॥
ಅಡವಿನೆಳೆಯೊಳಗದವರ್ ।
ಪಡೆದರ್ ಚಿಕದೇವರಾಯನಿಂ ದೊರೆತನಮಂ ॥೧೪೨

ಇದಱೊಳ್ ಚಿಕದೇವರಾಯನೊಳ್ಸೆಣಸಿ ತಂತಮ್ಮ ನಾಡುಗಳಂ ನೀಗಿದ ದೊರೆಗಳ್ಮಗುೞ್ದು ದೊರೆತನಮಂ ಪಡೆವುದರ್ಕೀ ಚಿಕದೇವರಾಯಂ ಗಡಿಯೊಳಗಂಗೆಯ್ವುದೇ ಉಪಾಯಮೆಂದು ತಿಳಿದು ತಮ್ಮೊಳ್ಳೆಂಬುಗೆ ಪುಟ್ಟುವುದರ್ಕೆ ತಂತಮ್ಮ ಮಕ್ಕಳನಡವಿರಿಸಿ ತಾಂ ಪುಯಿಲೊಳಗಕ್ಕೆ ಪೋಪನಿತಱೊಳಾಮಕ್ಕಳೊಳ್ದಯೆವಂದು ಚಿಕದೇವಮಹಾರಾಯಂ ದೊರೆತನಮನಿತ್ತನೆಂಬುದಱಿಂದಿದುವುಂ ಪ್ರಹರ್ಷಣಂ.

ಇಂತಿವು ಮೂಱುಂ ಪ್ರಹರ್ಷಣಾಲಂಕಾರಂಗಳ್.

---

೬೭. ವಿಷಾದನಾಲಂಕಾರಮೆಂಬುದು :—

" ಇಷ್ಯಮಾಣವಿರುದ್ಧಾರ್ಥ
ಸಂಪ್ರಾಪ್ತಿಸ್ತು ವಿಷಾದನಂ ॥ "

[ವೃತ್ತಿ] ಎಳಸಿದ ಕಜ್ಜಕ್ಕೆ ವಿಪರೀತವಾದ ಕಜ್ಜಂ ದೊರೆಕೊಳೆಯುದು ವಿಷಾದನಂ.

ಎಂತೆನೆ :—

ವಸುಧಾರೆಯುನಾಕ್ರಮಿಸುವ ।
ಬೆಸನದೊಳರ್ಕೀರಿವನೆಯು ಪಳಬೊಕ್ಕಸದೊಳ್ ॥
ವಸುಧಾರೆಯುೞಿದುದೆಂದೇ ।
ಬಸಗೆಟ್ಟ್ವಮರಿಯಸೆಟ್ಟ ಬಾಯ್ವಾಯ್ವಿಟ್ಟಂ ॥೧೪೩

ಇದಱೊಳ್ ವಸುಧಾರೆಯೆಂಬ ಗಡಿಗೋಂಟೆಯುಂ, ಸುರಿವ ಪಣದ ರಾಸಿಯುಂ, ವಸುಧಾರೆಯೆಂಬೊಂದೇಪದಕ್ಕರ್ಥವಾಗಿರ್ಪುದಱಿಂದೊಂದೆನಿಸಿ ತೋರ್ಪುದಱಿಂ ಕೆಳದಿಯ ದೊರೆತನಕ್ಕೆ ಮಹಾಪ್ರಧಾನನೆನಿಪ್ಪ ಮರಿಯಪ್ಪ ಸೆಟ್ಟ ಪೊಱಗಿರ್ಪ ವಸುಧಾರೆಗೆಳಸಿಯೊಳಬೊಕ್ಕಸದೊಳಿರ್ಪ ವಸುಧಾರೆಯುಂ ನೀಗಿದನೆಂದು ಪೇೞ್ವುದಱಿಂದಿದು ವಿಷಾದನಾಲಂಕಾರಂ :—

---

೬೮. ಉಲ್ಲಾಸಾಲಂಕಾರಂ ನಾಲ್ಕುಂ ತೆಱಂ :—

"ಏಕಸ್ಯ ಗುಣದೋಷಾಭ್ಯಾ
ಮುಲ್ಲಾಸೋನ್ಯಸ್ಯ ತೌ ಯದಿ ॥"

[ವೃತ್ತಿ] ಒಂದಱ ಗುಣದೋಷಂಗಳಿಂ ಪೆಱತೊಂದರ್ಕೆ ಗುಣದೋಷಂಗಳಪ್ಪುದು ಉಲ್ಲಾಸಾಲಂಕಾರಂ. ಅದುವುಂ (1) ಗುಣದಿಂ ಗುಣಮುಂ, (2) ದೋಷದಿಂ ದೋಷಮುಂ, (3) ದೋಷದಿಂ ಗುಣಮುಂ, (4) ಗುಣದಿಂ ದೋಷಮುಮುಪ್ಪುವಱಿಂ ನಾಲ್ಕುಂ ತೆಱನಾಗಿರ್ಕುಂ.

ಅವಱೊಳ್,

(1) ಗುಣದಿಂ ಗುಣನಿರೂಪಣಮೆಂತೆನೆ :— 20

ಕಂ॥ ಕಡುಗಲಿ ಚಿಕದೇವೇಂದ್ರನ ।
ಪಡೆವಳರಾವೆಡೆಗೆ ನಡೆವರಾಪರಿಸರದೊಳ್ ॥

ಪ್ರೌಢವಿ ಪ್ರೋಱಿಯಿಱುಪಿ ನೊಗವಂ ।
ಪಡೆವೆಂ ತಾನೆಂದು ಪೆರ್ಚಿ ಪೆಂಪಿಡಿದೆಸೆಗುಂ ॥೧೪೪

ಇದಱೊಳ್ ಚಿಕದೇವಮಹಾರಾಯನ ಪಡೆವಳರ್ ನಡೆವರೆಂಬ ಗುಣದಿಂ ಪ್ರೌಢವಿಗೆ ಪ್ರೋಱಿಯಿಱುಪುವುದೆಂಬ ಗುಣಮುಪ್ಪುದಱಿಂದಿದುಲ್ಲಾಸಂ.

ಮತ್ತಂ, (2) ದೋಷದಿಂ ದೋಷನಿರೂಪಣವೆಂತೆನೆ :—

ಕಂ॥ ಬಹುವಿಧದೊಳ್ಪೊಣರ್ದುಂ* ನಿ।
ರ್ವಹಿಸದೆ ಚಿಕದೇವರಾಯನೊಳ್ಸಾಮಂತರ್ ॥
ಮಹಿಶೂರ ಗಡಿಯ ಸನಿಯದ ।
ಮಹಿಯಂ ಪಡೆದಾತ್ಮವಂಶಜರನುೞಿ ಜಱಿವರ್ ॥೧೪೫

ಇದಱೊಳ್ ಸಾಮಂತನೃಪರ್ ಚಿಕದೇವರಾಯನೊಳ್ಪೊಣರಲಾಱರೆಂಬ ದೋಷದಿಂದವರ ಪೂರ್ವದವರೀ ನೆರೆಯೊಳ್ನೆಲನಂ ಪಡೆದರೆಂಬ ದೋಷಂ ತೋರ್ಪುದಱಿಂದಿದುವುಮುಲ್ಲಾಸಂ.

ಮತ್ತಂ, (3) ಗುಣದಿಂ ದೋಷನಿರೂಪಣವೆಂತೆನೆ :—

ಕಂ॥ ಮಾರ್ಕೊಂಡುರುಬುವ ಮಹಿಶೂ ॥
ರುರ್ಕಾಳ್ಗಳ ರಭಸಕಳ್ಕಿ ತಾನೇಱಿದ ಬ ।
ಲ್ಸೊರ್ಕಾನೆಯುದ್ಧವಂ ಜಱಿ ।
ದಿರ್ಕೇರಿಯ ಚೆನ್ನಬಸವನಳವಳಿದಿೞಿದಂ ॥ ೧೪೬

ಇದಱೊಳ್ ಇರ್ಕೇರಿಯ ಚೆನ್ನಬಸವನುಂ ಕೂಪ್ರಖಾನನುಮೊಂದಾನೆಯೇಱಿ ಬರ್ಪಿನಂ ಮಹಿಶೂರಭಟ್ಟರಿಟ್ಟ ಗುಂಡು ತಾಕಿ ಕೂಪ್ಖಾನಂ ಬೀೞ್ವಿನಮಳ್ಕಿ ಚೆನ್ನಬಸವಂ ದುಂಮಿಕ್ಕಲೆಳಸಿ ತಾನೇಱಿದಾನೆಯ ಔನ್ನತ್ಯಗುಣಮಂ ದೋಷಮಾಗಿ ಕೊಂಡುದಱಿಂದಿದುವುಮುಲ್ಲಾಸಂ.

ಮತ್ತಂ, (4) ದೋಷದಿಂ ಗುಣನಿರೂಪಣಮೆಂತೆನೆ :—

ಕಂ॥ ತಡೆವನಿವನಾನೆಯಿಱಿದುಸಿ ।
*ರ್ವಿಡಿದೋಡುವ ಗೆಯ್ಮೆಗೊಪ್ಪನೆಂಬಱಲಿಂ ತ॥
ನ್ನೊಡನಿರ್ದ ಕೂಪ್ರಖಾನಂ ।
ಮಡಿವಿನಮಾ ಚೆನ್ನಬಸವನುಂನತಿವಡೆದಂ ॥೧೪೭

ಇದಱೊಳ್ ಕೂಪ್ರಖಾನಂ ಬರ್ದುಂಕಿದೊಡೆ ತನ್ನಂ ಪೋಗಲೀಯನೆಂಬುದಱಿಂ ಕೂಪ್ರಖಾನನ ಸಾವೆಂಬ ದೋಷದಿಂ ಚೆನ್ನಬಸವಂಗೆ ಪಲಾಯನಮೆಂಬ ಗುಣಂ ದೊರೆಕೊಂಡುದಱಿಂದಿದುಮುಲ್ಲಾಸಮೆನಿಪುದು.

ಇಂತಿವು ನಾಲ್ಕುಮುಲ್ಲಾಸಾಲಂಕಾರಂಗಳ್.

---

೬೯. ಅವಜ್ಞಾಲಂಕಾರಮೆರಡುಂ ತೆಱಂ :—

" ತಾಭ್ಯಾಂ ತೌ ಯದಿ ನಸ್ಯಾತಾ
ಮವಜ್ಞಾಲಂಕೃತಿಸ್ತು ಸಾ ॥ "

[ವೃತ್ತಿ] ಪೆಱತೊಂದು ವಸ್ತುವಿನ ಗುಣದೋಷಂಗಳಿಂ ಪೆಱತೊಂದರ್ಕೆ ಗುಣದೋಷಂಗಳೊಂದದಿರ್ಪುದು ಅವಜ್ಞಾಲಂಕಾರಂ. ಅದು (1) ಗುಣದಿಂ ಗುಣಮೊಂದದಿರ್ಪುದೆಂದುಂ, (2) ದೋಷದಿಂ ದೋಷಮೊಂದದಿರ್ಪುದೆಂದುಮೆರಡುಂ ತೆಱಂ.

(1) ಗುಣದಿಂ ಗುಣಮೊಂದದಿರ್ಪುದೆಂತೆನೆ :—

ಕಂ॥ ಕನ್ನಡ ನಾಡೊಳ್ಬೆಳಸುಗ ।
ಳೆನ್ನಂ ಪೆರ್ಚಿದೊಡಮೇೞ್ಗೆವಡೆವರ್ ಪ್ರಜೆಗಳ್ ॥
ಮುನ್ನೆಲೆಗೆಯ್ದುದನಲ್ಲದೆ ।
ತನ್ನಂಶಕೆ ಕೊಂಬನಲ್ತು ಚಿಕದೇವೇಂದ್ರಂ ॥೧೪೮

ಇದಱೊಳ್ ಕನ್ನಡನಾಡೊಳ್ಬೆಳಸುಗಳೆನಿತು ಪೆರ್ಚಿದೊಡಂ ಪ್ರಜೆಗಳ್ಪೆರ್ಚುವರ್, ಚಿಕದೇವಮಹಾರಾಯಂ ಸತ್ಯಸಂಧನಾದುದಱಿಂ ಮುಂ ಮಿತಿಗೆಯ್ದ ಕಂದಾಯಮನಲ್ಲದೆ ಪೆಱತೊಂದು ಕಾಸುವೀಸಮನೊಲ್ಲನೆಂದು ಪದ್ಯಾರ್ಥಂ.

ಇದಱೊಳ್ ನಾಡೊಳ್ಬೆಳೆ ಪೆರ್ಚುವುದೆಂಬ ಗುಣದಿಂ ಬೊಕ್ಕಸಕ್ಕೆ ಪಣಂ ಪೆರ್ಚುವುದೆಂಬ ಗುಣಮಿಲ್ಲದುದಱಿಂದವಜ್ಞಾಲಂಕಾರಂ.

ಮತ್ತಂ, (2) ದೋಷದಿಂ ದೋಷಮಾಗದಿರ್ಪುದೆಂತೆನೆ :—

ಕಂ॥ ಚಾತುರ್ವರ್ಣ್ಯಾಚಾರದ ।
ರೀತಿಯನಱಿದೇೞ್ಗೆಗೊಳಿಸುವಪ್ರತಿಮಂಗೀ ॥
ಜಾತಿಕುಲದಿರವನಱಿಯದ ।
ಪಾತಕಿಗಳ್ಪೞಿಯೆ ಬರ್ಪ ತಪ್ಪಾವುದು ಪೇೞ್ ॥೧೪೯

ಇದಱೊಳ್ ಚಿಕದೇವಮಹಾರಾಯಂ ವರ್ಣಾಶ್ರಮಾನುಗುಣಮಾಗಿ ನಡೆಯದ ಪತಿತರಂ ಶಿಕ್ಷಿಸುವುದಱಿಂದವರ್ ದೂಷಿಸೆ ದೂಷಣಮೆಂಬ ದೋಷದಿಂದಿವರ್ಗೆ ದೋಷಂ ತಟ್ಟದಿರ್ಪುದಱಿಂದಿದುವುಮವಜ್ಞಾಲಂಕಾರಂ.

ಇಂತಿವೆರಡುಂ ಅವಜ್ಞಾಲಂಕಾರಂಗಳ್.

---

೭೦. ಅನುಜ್ಞಾಲಂಕಾರಮೆಂಬುದು :—

" ದೋಷಸ್ಯಾಭ್ಯರ್ಥನಾನುಜ್ಞಾ
ತತ್ರೈವ ಗುಣದರ್ಶನಾತ್ ॥ "

[ವೃತ್ತಿ] ಒಂದು ದೋಷದೊಳ್ಗುಣಂ ಕಾಣ್ಬುದಱಿಂದಂ ದೋಷಮನೆ ಬಯಸುವದನುಜ್ಞಾಲಂಕಾರಂ.

ಎಂತೆನೆ :—

ಕಂ॥ ನೊಂದು ಬಿದಿರೂರುಮಧುರೆಯು ।
ನೊಂದಿದ ನಾಱುರ್ದ್ದೆರೆಗಳವರನುೞಿದೊರ್ನ್ನೆವದಿಂ ॥
ಬಂದು ಮಹಿಶೂರ ನಾಡೊಳ್ ।
ಬಂದಿಯು ಮನೆವೊಕ್ಕು ಸೊರ್ಕಿ ಪೆರ್ಕಳವಡೆವರ್ ॥೧೫೦

ಇದಱೊಳ್ ಕೆಳದಿಮಧುರೆದೊರೆಗಳಂ ಸೇೞಿದ ಕಿಱುದೊರೆಗಳ್ಮಹಿಶೂರವರ ಉಪಟಳದಿಂ ತಂತಮ್ಮ ದೊರೆತನದೊಳ್ಸೊಗಮಿಲ್ಲೆಂಬುದಂ, ಮುಂ ದೊರೆತನಮಂ ಪೋಗಾಡಿ ಮಹಿಶೂರ ನಾಡೊಳ್ ಬಂದಿವನೆಯೊಳಿರ್ಪವರ ಸೊಗಮಂ ಕಂಡೊಂದು ನೆವದಿಂ ಸೆಱೆಸಿಕ್ಕುವರೆಂದು ಪದ್ಯಾರ್ಥಂ.

ಇದಱಿಂ ಸೆಱೆಸಿಕ್ಕುವ ದೋಷದೊಳ್ಸೊಗವಾೞ್ತೆಯೆಂಬ ಗುಣಂ ಕಾಣಿಪ್ರುದಱಿಂ ಸೆಱೆಸಿಕ್ಕುವದಂ ಬಯಸುವರೆಂದು ಪೇೞ್ವುದಱಿಂದಿದನುಜ್ಞಾಲಂಕಾರಂ.

---

೭೧. ಲೇಶಾಲಂಕಾರಮೆಂಬುದು :—

" ಲೇಶಸ್ಯಾದ್ದೋಷಗುಣಯೋ
ರ್ಗುಣದೋಷತ್ವಕಲ್ಪನಂ ॥ "

[ವೃತ್ತಿ] ಗುಣಮಂ ದೋಷಮೆಂದುಂ ದೋಷಮಂ ಗುಣಮೆಂದುಂ ಕಲ್ಪಿಪ್ರುದು ಲೇಶಾಲಂಕಾರಂ.

ಎಂತೆನೆ :—

ಕಂ॥ ತಾಮೆಳಸಿದಂತೆ ನಡೆಯುು ।
ತ್ತಾಮೋದದೊಳಿರ್ಪ ಜನಕೆ ಚಿಕದೇವೇಂದ್ರಂ ॥
ನೇಮಿಸಿ ನಿಜಕುಲವರ್ಣ್ಣದ ।
ನೇಮಂಗಳಗೆಯ್ಮೆದೊಡಕನೊಡನೊಡರಿಸುವಂ ॥೧೫೧

ಇದಱೊಳ್ ತಡೆಯಿಲ್ಲದೆ ತಾವೆಳಸಿದಂತೆ ನಡೆವ ನಾಡುಗರ್ಗೆ ವರ್ಣಾಶ್ರಮೋಚಿತಮಾಗಿ ಭಗವದಾರಾಧನಾತ್ಮಕಮಾದ ನಡತೆಯೆಂಬ ತೊಡಕಂ ತುಡಿಸುವನೆಂಬುದಱೊಳ್ ಪಸುಪಕ್ಕಿಗಳವೊಲ್ ಮುಂದೆಣಿಸದೆ ನಡೆವುದೆಂಬ ದೋಷಮುಂ ಸ್ವೇಚ್ಛಾವಿಹಾರಮೆಂಬ ಗುಣಮಾಗಿಯುಂ, ವರ್ಣಾಶ್ರಮಧರ್ಮಾಚರಣಮೆಂಬ ಗುಣಮುಂ ತೊಡಕೆಂಬ ದೋಷಮಾಗಿಯುಂ, ನಿರೂಪಿಸುವುದಱಿಂದಿದು ಲೇಶಾಲಂಕಾರಂ.

---

೭೨. ಮುದ್ರಾಲಂಕಾರಮೆಂಬುದು :—

“ ಸೂಚ್ಯಾರ್ಥಸೂಚನಾ ಮುದ್ರಾ
ಪ್ರಾಕೃತಾರ್ಥಪರೈಃ ಪದೈಃ ॥ ”

[ವೃತ್ತಿ] ಪ್ರಕೃತಾರ್ಥಪ್ರತಿಪಾದಕಂಗಳಾದ ಪದಂಗಳಿಂ ಸೂಚಿಸಲ್ತಕ್ಕರ್ಥಮುಂ ಸೂಚಿಪುದು ಮುದ್ರಾಲಂಕಾರಂ. 11

ಎಂತೆನೆ :—

ವೃ॥ ಶ್ರೀರಮಣನ ದಿವ್ಯಲೀಲೆವೊಲ್ ।
ಭೂರಿಭುವನ ಪೋಷಕಂ ಮಹೋ ॥
ದಾರನ ಚಿಕದೇವರಾಯನಾ ।
ವೀರವಿಲಸಿತಂ ವಿರಾಜಿಕುಂ ॥೧೫೦

ಇದಱೊಳ್ ವೀರವಿಲಸಿತಮೆಂಬ ಪದದ ವೃತ್ತದ ಪೆಸರ್ ಪೆತ್ತ ಚ್ಛಂದಸ್ಸಿನೊಳ್ತೋರ್ಪುದಱಿಂದಿದು ಮುದ್ರಾಲಂಕಾರಂ.

“ ವೀರವಿಲಸಿತಂ ಭಸೌ ಜಗೌ ” ಎಂದು ವೃತ್ತಲಕ್ಷಣಂ.

---

೭೩. ರತ್ನಾವಳಿಯೆಂಬುದು :— 20

“ ಕ್ರಮಿತಾಪ್ರಕೃತಾರ್ಥಾನಾಂ

ವ್ಯಾಸಂ ರತ್ನಾವಳಿಂ ವಿದುಃ ॥ ''

[ವೃತ್ತಿ] ಪ್ರಕೃತಾರ್ಥಪರಂಗಳಾದ ಪದಂಗಳಿಂದಪ್ರಕೃತಂಗಳಾದ ಪದಾರ್ಥಂಗಳಂ ಕ್ರಮದಿಂ ಪೇೞ್ವುದು ರತ್ನಾವಳ್ಯಲಂಕಾರಂ.

ಎಂತೆನೆ :—

ವೃ॥ ಶ್ರುತಿಯಿಂ ಕಾಪಿಟ್ಟು ಗೋತ್ರೋನ್ನತಿಯನೆಸಗಿ ಮಾಸಿಂಗ
ಮಂ ಪೋಲ್ತು ಗಾಢೋ । ದ್ಧತಿಯಿಂ ವಿಕ್ರಾಂತಿಗೆಯ್ದಾಕ್ರಮಿಸಿ
ವಸುಧೆಯಂ ದುಷ್ಟರಾಜನ್ಯರಂ ಗೆ ॥ ಲ್ದತಿಮಾತ್ರಂ ಧಾರ್ಮಿಕಂ ತಾನೆ
ನಿಸಿ ಯದುಕುಲೌನ್ನತ್ಯಮಂ ಪೊರ್ಮಿಸುತ್ತ । ಪ್ರತಿಮಂ ಲೋಕೈ
ಕವೀರಂ ಬಗೆವ್ರಗೆ ಕಲಿಯಂ ತೂಳ್ದ ಸಾಮ್ರಾಜ್ಯವಾಳ್ಗುಂ ॥ ೧೫೧

ಇದಱೊಳ್ ಗೋತ್ರಮೆಂದು ಪರ್ವತಕ್ಕಂ ಗೋತ್ರೆಯೆಂದು ಭೂಮಿಗಂ ಪೆಸರಪ್ಪುದಱಿಂ, ಗೋತ್ರೋನ್ನತಿಯನೆಸಗಿಯೆಂಬುದಱೊಳ್ ಕೂರ್ಮವರಾಹಾವತಾರಂಗಳೆರಡುಂ ತೋರ್ಕುಂ; ಯದುಕುಲೌನ್ನತ್ಯಮಂ ಪೊರ್ಮಿಸುತ್ತೆಂಬುದಱೊಳ್ ಬಲಭದ್ರಕೃಷ್ಣಾವತಾರಂಗಳೆರಡುಂ ತೋರ್ಕುಂ; ಇಂತು ಅಪ್ರಕೃತಂಗಳಾದ ಭಗವದವತಾರಂಗಳಪ್ಪತ್ತುಂ ಕ್ರಮದಿಂ ತೋರ್ಪುದಱಿಂದಿದು ರತ್ನಾವಳ್ಯಲಂಕಾರಂ.

---

೨೪. ತದ್ಗುಣಾಲಂಕಾರಮೆಂಬುದು :—

" ತದ್ಗುಣಸ್ಸ್ವಗುಣತ್ಯಾಗಾ
ದನ್ಯದೀಯಗುಣಗ್ರಹಃ ॥ ''

[ವೃತ್ತಿ] ಒಂದು ವಸ್ತು ತನ್ನ ಗುಣಮಂ ಬಿಟ್ಟು ಪೆಱತೊಂದಱ ಗುಣಮಂ ಪಡೆಯೆಯದು ತದ್ಗುಣಾಲಂಕಾರಮೆನಿಪ್ಪುದು.

ಎಂತೆನೆ :—

ಕಂ|| ಮುತ್ತಿನ ಸರಮಂ ಕೆಂದಳ |
ದೊತ್ತಿನೊಳಟ್ಟಿಱಗಿ ನಿನಗೆ ಸಾಮಂತನೃಪರ್ ||
ಮತ್ತದನೆ ಪದ್ಮರಾಗಂ |
ಗೆತ್ತಚ್ಚಱಿವಡುವರೊಡನೆ ಚಿಕದೇವೇಂದ್ರಾ ! ||೧೫೦

೭೫. ಪೂರ್ವರೂಪಾಲಂಕಾರಮೆರಡುಂ ತೆಱಂ :—

(1) " ಪುನಸ್ಸ್ವಗುಣಸಂಪ್ರಾಪ್ತಿಃ
ಪೂರ್ವರೂಪಮುದಾಹೃತಂ || "

[ವೃತ್ತಿ] ಒಂದು ವಸ್ತುವಿನ ಗುಣಂ ಪೆಱತೊಂದು ತೆಱನಾಗಿ ತೋಱಿ ಮಗುಳ್ದುಂದಿನಂತಾದುದೆಂಬುದು ಪೂರ್ವರೂಪಂ.

ಎಂತೆನೆ :—

ಕಂ|| ಐಗೂರರಸನ ಪೆಂಡಿರ |
ಮೂಗುತಿ ಕಣ್ಬನಿಯೊಳೞಿದ ಕಾಡಿಗೆಯಿಂ ಕ ||
ಪ್ಪಾಗಿ ಬೞಿಕುಗುವ ತನಿನೀರ್ |
ತಾಗುವಿನಂ ತೊಳಗಿತೆಂದಿನಂತಪ್ರತಿಮಾ ! ||೧೫೭

ಮತ್ತಂ, (2) " ಪೂರ್ವಾವಸ್ಥಾನುವೃತ್ತಿಶ್ಚ
ವಿಕೃತೇ ಸತಿ ವಸ್ತುನಿ || "

[ವೃತ್ತಿ] ವಸ್ತು ಪೆಱತೊಂದು ಬಗೆಯಾದೊಡಂ ಮೊದಲ ಗುಣಮೊಂದಿನಂತಿರ್ಪುದೆಂಬುದುಂ ಪೂರ್ವರೂಪಮೆನಿಪುದು.

ಎಂತೆನೆ :—

ಕಂ|| ಅಂದರಸುಗೆಯ್ಮೆಯೊಳ್ಮೇ |
ಣೊಂದೀಚಿಕದೇವರಾಯನಡಿಯೂಳಗದೊಳ್ ||
ಸಂದಪೆವರಿಗಳ ಶಿರದೊಳ್ |

ನಿಂದಪೆವೆಂದೆಂಮುಮೆಂಬರೀನೆರೆದೊರೆಗೞ್ ॥೧೫೪

ಇದಱೊಳ್ ಚಿಕದೇವರಾಯನಡಿಯಂ ಸಾರ್ದ ದೊರೆಗಳ್ಕುಂ ತಾಂ ಅರಸುಗೆಯ್ವಾಗಳ್ತಮ್ಮ ಪಗೆಗಳಂ ಕೀೞ್ಪಡಿಸಿರ್ದಂತರಸುತನಂ ಪೋದೊಡಂ ಮತ್ತತಿಶಯಂಬೆತ್ತಿರ್ಪರೆಂದು ಪೇೞ್ವುದಱಿಂದಿದುವುಂ ಪೂರ್ವರೂಪಮೆನಿಪುದು.

ಇವೆರಡುಂ ಪೂರ್ವರೂಪಾಲಂಕಾರಂ.

---

೨೬. ಅತದ್ಗುಣಾಲಂಕಾರಮೆಂಬುದು :—

" ಸಂಗತಾನ್ಯಗುಣಾನಂಗೀ
ಕಾರಮಾಹುರತದ್ಗುಣಂ ॥ "

[ವೃತ್ತಿ] ತಾನೊಂದು ವಸ್ತುವಿನೊಳ್ಪುದಿದಿರ್ದೊಡಮದಱ ಗುಣಮಂ ಪಡೆಯದಿರ್ಪುದು ಅತದ್ಗುಣಾಲಂಕಾರಂ.

ಎಂತೆನೆ :—

ಕಂ॥ ಏತೆಱದವರೊಡನಾಡುವ ।
ರಾತೆಱಮವರಪ್ಪರೆಂಬುದಿದು ನಾಣ್ನುಡಿ ಕೇೞ್ ॥
ಭೀತರೆರ್ದೆ*ವೊಕ್ಕು ನೀಂ ನಿ ।
ರ್ಭೀತಿಯೊಳಿರ್ಪಂದಮೆಂತು ? ಚಿಕದೇವೇಂದ್ರಾ ॥೧೫೫

---

೨೭. ಅನುಗುಣಾಲಂಕಾರಮೆಂಬುದು :—

" ಪ್ರಾಕ್ಸಿದ್ಧಸ್ವಗುಣೋತ್ಕರ್ಷೋ
ನುಗುಣಃ ಪರಸನ್ನಿಧೇಃ ॥ "

[ವೃತ್ತಿ] ಒಂದು ವಸ್ತುಗೆ ಪೆಱತೊಂದು ವಸ್ತುವಿನ ಸನ್ನಿಧಾನದಿಂ ಮಿಕ್ಕು ಮುನ್ನಿರ್ದ ಗುಣಮೆ ಪೆರ್ಚಿದೊಡದು ಅನುಗುಣಾಲಂಕಾರಂ.

ಎಂತೆನೆ :—

ಕಂ॥ ಕನ್ನಡನಾಡೊಳ್ಪ್ರಜೆ ತಾಂ ।
ತನ್ನಿಂ ಶುಭದಿಂ ಚರಿತ್ರದಿಂ ನೆಗೞ್ಗುಂ ಮೇಣ್ ॥
ಇನ್ನೆಗಮಿಾಚಿಕದೇವೇ ।
ನ್ದ್ರನ್ನೇಮಂಬೆರಸಿ ಪೊಱೆಯೆ ನೆಗೞ್ದುದು ಮತ್ತಂ ॥೧೫೪

ಇದಱೊಳ್ ಪ್ರಜೆಗಳ ಸಚ್ಚರಿತ್ರಮೆಂಬ ಗುಣಂ ಚಿಕದೇವಮಹಾರಾಯನ ಸನ್ನಿಧಾನದಿಂ ಮಿಕ್ಕು ಪೆರ್ಚಿತೆಂಬುದಱಿಂದಿದು ಅನುಗುಣಾಲಂಕಾರಂ.

---

೩೪. ಮೀಲಿತಾಲಂಕಾರಮೆಂಬುದು :—

" ಮೀಲಿತಂ ಯದಿ ಸಾದೃಶ್ಯಾ
ದ್ಭೇದ ಏವ ನ ಲಕ್ಷ್ಯತೇ ॥ "

[ವೃತ್ತಿ] ಒಂದು ವಸ್ತು ತನಗೆ ಸದೃಶಮಾದ ಪೆಱತೊಂದು ವಸ್ತುವಿನೊಳ್ಪುದುಗಿ ತಾಂ ಬೇಱಿಸಿಸಿ ತೋಱದಿರೆಯದು ಮೀಲಿತಂ.

ಎಂತೆನೆ :—

ಕಂ॥ ಚೆನ್ನಬಸವನೊಳ್ವೆಂಡಿರ ।
ಪೊನ್ನುದಿವರ್ೞೆ ತೋಱದಾವಗಂ ತೋಳ್ಪೊಗರಿಂ ॥
ದನ್ನೆಗಮವನುಡಿದಿಟ್ಟೊಡ ।
ಮಿನ್ನಾವುದು ಕೊಱತೆವರ್ಪುದವಳ್ಗೆದಱಿಂದಂ ॥೧೫೫

ಇದಱೊಳ್ ಕೈಯ ಕಾಂತಿಯಿಂ ಪೊಂಬಳೆಗಳ್ಕಾಣಿಸದಿರ್ದಪುವೆಂಬುದಱಿಂದಿದು ಮೀಲಿತಾಲಂಕಾರಂ.

---

೩೯. ಸಾಮಾನ್ಯಾಲಂಕಾರಮೆಂಬುದು :—

" ಸಾಮಾನ್ಯಂ ಯದಿ ಸಾದೃಶ್ಯಾ
ದ್ವಿಶೇಷೋ ನೋಪಲಕ್ಷ್ಯತೇ ‖ "

[ವೃತ್ತಿ] ಎರಡುಂ ವಸ್ತುಗಳುಂ ಸಮಾನಂಗಳಾಗಿರ್ಪುದಱಿಂದೊಂದರ್ಕೊಂದು ವಿಶೇಷಂ ಕಾಣಿಸದಿರೆಯುದು ಸಾಮಾನ್ಯಾಲಂಕಾರಂ.

ಎಂತೆನೆ :—

ಕಂ‖ ಪೆಱಗೊಳ್ಪೊಣರ್ವಂದೈಸೇ |
ಮೆಱೆದಪ್ಪುದು ಭೀರುಶೂರಭೇದವಿಮರ್ಶ್ಯಂ ‖
ತೆಱಚಿ ಮಹೀಶೂರ ಭಟರ್ |
ಮುಱಿದೋಡುವ ಕೆಳದಿದಟದೊಳೊಳದೆ ವಿವೇಕಂ ? ‖೧೬೦

ಉನ್ಮೀಲಿತಮೆಂದುಂ, ವಿಶೇಷಕಮೆಂದುಮೆರಡುಮಲಂಕಾರಂಗಳ್.

" ಭೇದವೈಶಿಷ್ಟ್ಯಯೋಸ್ಸ್ಫೂರ್ತಾ
ವುನ್ಮೀಲಿತವಿಶೇಷಕೌ ‖ "

[ವೃತ್ತಿ] ಎರಡುಂ ವಸ್ತುಗಳ್ಗೆ ಸಾದೃಶ್ಯದಿಂ ಮುಂ ತೋಱದಿರ್ಪ ಭೇದಮೊಂದು ನೆವದಿಂ ತೋಱೆಯುದು ಉನ್ಮೀಲಿತಮೆಂದುಂ, ಇದೇ ತೆಱದೊಳ್ಮುಂ ತೋಱದಿರ್ಪ ವಿಶೇಷಂ ತೋಱೆಯುದು ವಿಶೇಷಕಮೆಂದುಮೆರಡುಂ ತೆಱಂ.

೪೦. ಉನ್ಮೀಲಿತಮೆಂತೆನೆ :—

ಕಂ‖ ನರಪತಿಚಿಕದೇವೇಂದ್ರನ |
ಪರಿಪೂರ್ಣಯಶಃಪ್ರವಾಹದೊಳ್ಮುಱಿದೊಡಂ ‖
ಪರಿಕಿಪರ ಬಗೆಗೆ ಬಂದುದು |
ಬಿರಿದಪ ನೆಯ್ದಿಲ್ಗಳೆಸಕದಿಂಬೆಳ್ದಿಂಗಳ್ ‖ ೧೬೧

೮೧. ವಿಶೇಷಕಮೆಂತೆನೆ :—

ವೃ॥ ಪೊಣರ್ದಂದು ನೊಂದು ಮಹಿಶೂರ ವೀರರಿಂ ।
ರಣಭೀತಿವೆತ್ತು ಕೆಳದೀವಜೀರರುಂ ॥
ಪೆಣನಲ್ಲಿದೆಂದಱಿತು ಬಾಯುದಿರ್ಪರುಂ ।
ರಣಭೂಮಿಯಿಂ ತೆಗೆದರಂದು ಶೋಧಕರ್ ॥೧೬೧

ಇದಱೊಳ್ ರಣಭೀತಿಯಿಂ ಮಿಸುಕದ ಪಂದೆಗಳುಂ ಪೆಣಂಗಳುಮೊಂದೆ ತೆಱದೊಳಿರ್ದೊಡಂ ರಣಮಂ ಶೋಧಿಸುವರ್ ಬಾತುದು ಪೆಣಂ ಬಾಯುದಿರ್ಪವರ್ ಪಂದೆಗಳೆಂದು ವಿಶೇಷಮಂ ತಿಳದುದಱಿಂದಿದು ವಿಶೇಷಾಲಂಕಾರಂ.

---

೮೨. ಗೂಢೋತ್ತರಾಲಂಕಾರಮೆಂಬುದು :—

" ಕಿಂಚಿದಾಕೂತಪಿಹಿತಂ
ಸ್ಯಾದ್ಗೂಢೋತ್ತರಮುತ್ತರಂ ॥ "

[ವೃತ್ತಿ] ಕೇಳ್ದ ಮಾತಿಂಗೆ ಉತ್ತರಮಂ ಪೇೞ್ವಾಗಳ್ಪುಱತೊಂದಭಿಪ್ರಾಯದಿಂದಿನಿಸು ಮಱಸಿ ಪೇೞ್ವುದು ಗೂಢೋತ್ತರಮೆನಿಪ್ಪುದು.

ಎಂತೆನೆ :—

ಕಂ॥ ಸೊಗಮಿರ್ಪಳೆ? ಬರ್ದುಕಿರ್ಪಳ್ ।
ಸೊಗಮಂ ಪೇೞ್ ಬರ್ದುಕಿದಪ್ಪಳವಳಪ್ರತಿಮಾ ! ॥
ಸೊಗದಿರವನೇಕೆ ಸೊಲ್ಲಿಸೆ ? ।
ಬಗೆಗೊಳಸುವುದೆಂತು ಬೇೞ್ ಬರ್ದುಕಿರ್ಪವಳೊಳ್? ॥೧೬೨

ಇದಱೊಳ್ ಚಿಕದೇವಮಹಾರಾಯಂ ತನ್ನನಗಲ್ದು ನೊಂದಿರ್ಪ ಪ್ರಣಯಿನಿ ಸೊಗದಿರ್ಪಳೆಯೆಂದವಳ ಕೆಳದಿಯಂ ಕೇಳೆಯವಳ್ನೀನುದಾಸೀನನಾಗಿರ್ಪುದಱಿಂ ದುಃಖದೊಳಿರ್ಪಳೆಂದು ಪೇೞ್ವುದಂ ಮಱಸಿ

ಜೀವಿಸಿರ್ದಳೆಂದು ಪೇೞ್ವುದುಮಿಪರುಷುವಳಭಿಪ್ರಾಯಮುಂ ಬಯಲ್ಗೆಯ್ವುದರ್ಕಾಗಿ ಒಂದಂ ಕೇಳ್ದೊಡೊಂದನೇತರ್ಕೆ ಪೇೞ್ವೆ ಸೋಗಮಿರವು ಪೇೞ್ಬುದುಮುವಳುಂ ಮತ್ತಂ ವ್ಯಕ್ತಮಾಗಿ ಪೇೞವೆ ಬರ್ದುಕಿದವಳೆಂಬುದುಂ ಮತ್ತಂ ವ್ಯಕ್ತಂಗೆಯ್ವುದರ್ಕೆಂದು ಸೋಗಮಿರವು ಪೇೞ್ಬುದವುವಳುಂ ಇವಳ್ಗೆ ಮರಣಪ್ಪೆಸೆ ಸೋಗು ಬರ್ದುಕಿರ್ದವಳ್ಗದು ದೊರಕದಿಪ್ಪುದಱಿಂದದಂ ಪೇೞ್ವುದೆಂತೆಂದು ಮಱಸಿ ಉತ್ತರಂಗುಡುವುದಱಿಂದಿದು ಗೂಢೋತ್ತರಾಲಂಕಾರಂ.

---

೮೩. ಚಿತ್ರೋತ್ತರಾಲಂಕಾರಮೆರಡುಂ ತೆಱಂ :—

" ಪ್ರಶ್ನೋತ್ತರಾಂತರಾಭಿನ್ನ
ಮುತ್ತರಂ ಚಿತ್ರಮುತ್ತರಂ ॥ " 10

[ವೃತ್ತಿ] ಪ್ರಶ್ನದ ನುಡಿಯನೆ ಉತ್ತರಮಾಗಿ ಪೇೞ್ವುದೆಂದುಂ, ಪಲವುಂ ಪ್ರಶ್ನಂಗಳ್ಗೊಂದೆ ಉತ್ತರಮಂ ಪೇೞ್ವುದೆಂದುಮೆರಡುಂ ತೆಱಂ.

(1) ಪ್ರಶ್ನೋತ್ತರಂಗಳೇಕಮಾಗಿಪ್ಪುದೆಂತೆನೆ :—

ಕಂ॥ ಭೂರಿಮಹಿಶೂರಭೂಪರಿ ।
ಕೇರಿಯ ಪೆರ್ದಱಿಮನೞಿಸಿಯಾಂ ಬಾರದಮು ॥
ನ್ನಾರಿದನೋಡಿಸಿದವನೆನೆ ।
ಯಾರಿದನೋಡಿಸಿದನೆಂದು ಪಡಿನುಡಿಗುಡುವರ್ ॥೧೬೨

ಇದಱೊಳ್ ಮಹಿಶೂರವರೊರ್ಮ್ಮೆಯಿಕೇರಿಯವರ ಪಾಳೆಯಮಂ ಬೞಿಕ್ಕೆಯುಳೆಳಸಿ ಪತ್ತಸೂರ್ಬಿನಮವರ ಸೊಪ್ಪಳಂ ತಿಳದೋಡಿಪಾಗಳಾಮೂಲವಂ ತಿಳಯಲೆಳಸಿ " ಆರ್ ಇದಂ ಓಡಿಸಿದಂ ? " ಎಂದು ಕೇಳೆಯಲ್ಲಿರ್ದವರ್ " ಆರಿದಂ ಓಡಿಸಿದಂ " ಎಂದು ಪ್ರಶ್ನಮುಮುತ್ತ

ರಮುಮೊಂದೆ ತೆಱನಾಗಿರ್ಪುದಱಿಂದಿದು ಚಿತ್ರೋತ್ತರಂ.

ಆರಿದನೆನೆ ಬೊಬ್ಬಿರಿದವನೆಂದರ್ಥಂ.

ಮತ್ತಂ, (2) ಪಲವುಂ ಪ್ರಶ್ನಂಗಳ್ಗೊಂದೇ ಉತ್ತರಮೆಂತೆನೆ :—

ಕಂ॥ ಬಿದಿಯಿಂದಮೊ ? ಮೇಣ್ನಿನಗಾ ।
ಗದರಿಂದಮೊ ? ಚೆನ್ನಬಸವ ನೀಂ ಮುಱಿದೈಯಿಂ ।
ಬುದುಮೆಮ್ಮ ಬೊಮ್ಮಬರೆಪಂ ।
ಪದಗೆಡಿಸಿತ್ತೆಂದು ಕೆಳದಿದೊರೆಗೆವನೊರೆದಂ ॥೧೬೩

ಇದಱೊಳ್ ಚೆನ್ನಬಸವಂ ಮಹಿಶೂರವರ್ಗೆ ಮುಱಿದು ಬಿದಿರೂರ್ಗೆ ಪೋದಾಗಳಾ ದೊರೆಯುವನೊಡನೆ ನೀಂ ಮುಱಿದುದೇಂ ದೈವಯತ್ನದಿಂದಮೊ ನಿನಗಾಗದೆಮ್ಮ ಗುಱಿವಾನಿಸರ ಕವಡಿಂದಮೋ ಎಂದು ಕೇಳ್ದೆರಡುಂ ಪ್ರಶ್ನಂಗಳ್ಗೆಯುಮ್ಮಬೊಮ್ಮಬರೆಪಂ ಪದಗೆಡಿಸಿತ್ತೆಂದು ಒಂದೆ ಉತ್ತರಮುಂ ಪೇೞ್ದುದಱಿಂದಿದುವುಂ ಚಿತ್ರೋತ್ತರಂ.

ಇಲ್ಲಿ ಬೊಮ್ಮಬರೆಪಮೆನೆ ಬ್ರಹ್ಮಲಿಖಿತಮೆಂದುಂ, ಸಬ್ಬನಿಸ ಬೊಮ್ಮಯ್ಯನ ಕಳ್ಳೋಲೆಯೆಂದುಮೆರಡುಮರ್ಥಂಗಳ್.

ಇವೆರಡುಂ ಚಿತ್ರೋತ್ತರಾಲಂಕಾರಂ.

---

೪೪. ಸೂಕ್ಷ್ಮಾಲಂಕಾರಮೆಂಬುದು :—

" ಸೂಕ್ಷ್ಮಂ ಪರಾಶಯಾಭಿಜ್ಞೋ
ತರಸಾಕೂತಚೇಷ್ಟಿತಂ ॥ "

[ವೃತ್ತಿ] ಒರ್ವನಿಂಗಿತಮುಂ ತಿಳಿದು ಪೆಱತೊರ್ವನುಂ ಸಾಭಿಪ್ರಾಯಮಾಗಿ ಚೇಷ್ಟೆಗೆಯ್ಯುದು ಸೂಕ್ಷ್ಮಾಲಂಕಾರಂ.

ಎಂತೆನೆ :—

ಕಂ॥ ಕಡುಮುನಿಸಿಂದಪ್ರತಿಮಂ ।

ಪಡುಗಡೆಯುಂ ನೋಡೆ ಗಡಿಯ ಗುಱುವಾನಿಸನೆ ॥
ಬ್ಬಿಡಿಗೆಱಗಿ ನೋಡಿದಂ ಕೈ ।
ವಿಡಿದಸಿಯುಂ ಕೆಳದಿರಾಯಭೂರಿಗನೆಡೆಯುಂ ॥೧೬೪

ಇದಱೊಳ್ ಚಿಕದೇವಮಹಾರಾಯಂ ಕೋಪದಿಂ ಪಡುಗಡೆಯಂ ನೋಡೆಯಾಯಿಂಗಿತವಂ ತಿಳಿದ ಗುಱುವಾನಿಸನೊರ್ವಂ ಈಮಲೆನಾಡುಮಳ್ಮಳಗೊಳಸುವ್ವೊಳಗಮಂತ್ರಾಸೆಸೆಗುವೆನೆಂಬುದಂ ತನ್ನ ಕೈದುವಂ ಕೆಳದಿಯ ರಾಯಭೂರಿಗನುಮಂ ನೋಡುವಿಂಗಿತದಿಂ ತಿಳಪ್ಪುವ್ವುದಱಿಂದಿದು ಸೂಕ್ಷ್ಮಾಲಂಕಾರಂ.

---

೮೫. ಪಿಹಿತಾಲಂಕಾರಮೆಂಬುದು :—

"ಪಿಹಿತಂ ಪರವೃತ್ತಾನ್ತ
ಜ್ಞಾತುಸ್ಸಾಕೂತಚೇಷ್ಟಿತಂ ॥"

[ವೃತ್ತಿ] ಒರ್ವನ ವೃತ್ತಾಂತಮಂ ತಿಳಿದು ಪೆಱತೊರ್ವರೆಸಗುವಿಂಗಿತಚೇಷ್ಟೆಗಳ್ಪಿಹಿತಾಲಂಕಾರಂ.

ಎಂತೆನೆ :—

ಕಂ॥ ನರಪತಿ ಪ್ರೊಟ್ಟುಱುವರೆ ಪೊಗ ।
ಸಿರಿಯುರಮಂ ನೋಡಿ ನಮಿಸಿಯತಿವಿನಯದೊಳಾ ॥
ದರಿಸುತ್ತನುಗೆಯ್ದಳ್ಸ ।
ತ್ವರದಿಂ ತಾನೆಬ್ದು ಚದುರೆ ಮೆಲ್ಲಲರ್ವಾಸಂ ॥೧೬೫

ಇದಱೊಳ್ ಕಾಂತೆ ಧೀರೆಯಾದುದಱಿಂ ಕಾನ್ತನ ಅಪರಾಧಚಿಹ್ನಂಗಳಂ ನೋಡಿ ಮೋಹರಿಸುವ ಮುನಿಸು ಮಱಸಿ ಮೆಲ್ವಾಸನನುಗೆಯ್ವಿಂಗಿತಚೇಷ್ಟೆಯಿಂದೆಲ್ಲಂ ನಿದ್ದೆಗೆಟ್ಟವರೀಗಳ್ಮಲಗವರ್ಪುದೆಂಬಭಿಪ್ರಾಯಗರ್ಭವಾಗಿರ್ಪುದಱಿಂದಿದು ಪಿಹಿತಾಲಂಕಾರಂ.

---

೮೬. ವ್ಯಾಜೋಕ್ತ್ಯಲಂಕಾರಮೆಂಬುದು :—

“ ವ್ಯಾಜೋಕ್ತಿರನ್ಯಹೇತೂಕ್ತ್ಯಾ
ಯದಾಕಾರಸ್ಯ ಗೋಪನಂ ॥ ”

[ವೃತ್ತಿ] ಕಾರಣಮಲ್ಲದುದು ಕಾರಣಮಾಗಿ ಪೇೞ್ದು ತನ್ನ ಆಕಾರಮಂ ಮಱೆಗೆಯ್ವುದು ವ್ಯಾಜೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಮೂಗಱಿದೆನೆವಂತೆಂ ತಾ ।
ನಾಗಿಯೆ ಕರೆಕರೆದು ಜನಮನೆಲೆ ಲೋಗರಿರಾ ! ॥
ಈಗಳೊಯ್ದೇಱಿಸಿದೆಂ ।
ಮೂಗಂ ಕುಳಜಾಭವಾನಿಯುಮಿಗೆಂದೊರೆವಂ ॥ ೧೬೬

ಇದಱೊಳ್ ಮಹಿಶೂರವರ್ ಮೂಗಂ ಕೊಯ್ದರೆಂದು ಪೇೞವೆ ಅವರುಂ ಗೆಲ್ವುದಕ್ಕೆ ತಾನೆ ತನ್ನ ಮೂಗಂ ಕೊಯ್ದು ಭವಾನಿಗೇಱಿಸಿದೆನೆಂದು ಪೇೞ್ದು ಮಱಸಿದುದಱಿಂದಿದು ವ್ಯಾಜೋಕ್ತ್ಯಲಂಕಾರಂ.

---

೮೭. ಗೂಢೋಕ್ತ್ಯಲಂಕಾರಮೆಂಬುದು :—

“ ಗೂಢೋಕ್ತಿರನ್ಯೋದ್ದೇಶ್ಯಾ ಗೀಃ
ಯದನ್ಯಂ ಪ್ರತಿಕಥ್ಯತೇ ॥ ”

[ವೃತ್ತಿ] ಒರ್ವಂಗೆ ತಿಳಿಪುವುದಕ್ಕೆ ಪೆಱತೊರ್ವನಂ ನೆವಂಗೆಯ್ದು ಪೇೞ್ವುದು ಗೂಢೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ದೇವದ್ವೇಷಿಗಳಿರ ನೀ ।
ಮೀವಿಷಯಮನೇಕೆ ಪುಗುವಿರೀಗಳೆ ತೊಲಗಿಂ ॥
ಗಾವಳಿಸಿ ಗಲಬೆಗೆಯ್ವೊಡೆ ।

ತಾವಲ್ತುರವಣಿಸಿವರ್ಪನಿದೆಕೊಳುವೇಂದ್ರಾ ॥೧೬೭

ಇದಱೊಳ್ ದೇವದ್ವೇಷಿಗಳಪ್ಪ ರಕ್ಕಸರಂ ಕೊಱೆತು ಹಿತೋಪದೇಶಂಗೆಯ್ವ ನೆವದಿಂ ಮಲೆಸ ಮರಾಟ ಬೇಡ ಮೊರಸರ್ ಮುಂತಾದ ಪಲವುಂ ನಾಡ ದೊರೆಗಳನೆಚ್ಚರ್ಗೆಯ್ವುದಱಿಂದಿದು ಗೂಢೋಕ್ತ್ಯಲಂಕಾರಂ.

---

೮೮. ವಿವೃತೋಕ್ತ್ಯಲಂಕಾರಮೆರಡುಂ ತೆಱಂ :—

" ವಿವೃತೋಕ್ತಿಃ ಶ್ಲಿಷ್ಟಗುಪ್ತಂ
ಕವಿನಾವಿಷ್ಕೃತಂ ಯದಿ ॥ "

[ವೃತ್ತಿ] ಶ್ಲೇಷದಿಂ ಗೂಢಮಾದರ್ಥಮಂ ಕವಿ ಬಯಲ್ಗೆಯ್ಯೆಯದು ವಿವೃತೋಕ್ತಿಯೆನಿಪುದು. ಇದುವುಂ ಕವಿತ್ವದೊಳ್ಪ್ರತಿಪಾದಿಸಲ್ಪಡುವ ಪುರುಷರ್ ಮಱೆಗೆಯ್ದರ್ಥಮಂ ಕವಿ ಬಯಲ್ಗೆಯ್ಯೆ (1) ಕವಿನಿಬದ್ಧವಕ್ತೃಗುಪ್ತಾವಿಷ್ಕರಣಮೆಂದುಂ, ಕವಿ ತಾನೆ ಮಱೆಗೆಯ್ದರ್ಥಮಂ ತಾನೆ ಬಯಲ್ಗೆಯ್ಯೆ (2) ಕವಿಗುಪ್ತಾವಿಷ್ಕರಣಮೆಂದುಮೆರಡುಂ ತೆಱಂ.

(1) ಇದಱೊಳ್ಮೊದಲದೆಂತೆನೆ :—

ಕಂ॥ ಬೇಡರಿರಾ ! ನೀಮುಂ ಮಲೆ ।
ನಾಡವರುಂ ಮಲೆವುದರಿದು ಮಹಿಶೂರ ಭಟ ॥
ರ್ಗಾಡುವೆವಾಂ ಹಿತಮಂ ಬಿ ।
ಟ್ಟೋಡಿಂ ಕಟ್ಟುಱಮೊಳೆಂದು ಬಲ್ಲವರೊರೆವರ್ ॥೧೬೮

ಇದಱೊಳ್ ಬೇಡರುಂ ಮಲೆನಾಡುಗರುಂ ಮಹಿಶೂರ ಭಟರೊಳ್ ಮಲೆವುದರಿದೆಂದು ಪೇಳ್ವುದಱೊಳ್ನೀಂ ಭೀರುಗಳ್ಕಳದಿಯವರ್ ಕಾಳ್ವನಿಸರ್ ನೀಮಿರ್ವರುಂ ಶೂರರುಂ ನಾಗರಿಕರುಮಪ್ಪ ಚಿಕದೇವ

ಮಹಾರಾಯನ ಭಟರ್ಗೆ ಪಾಟಯಲ್ತೆಂಬರ್ಥಂ ಮಱೆಯಾಗಿರೆ ಬಲ್ಲವರೊರೆವರೆಂಬುದಱಿಂದದಂ ವ್ಯಕ್ತಂಗೆಯ್ವುದಱಿಂದಿದು ವಿವೃತೋಕ್ತಿಯೆನಿಪ್ಪುದು. ಕನ್ನಡಪೊಳ್ ಜೇಡರೆಂದು ಭೀತರ್ಗೆ ಪೆಸರ್.

(೨) ಕವಿಗುಪ್ತವಿಸ್ಫುರಣವೆಂತೆನೆ :—

ಕಂ॥ ಧುರಕಾನೆ ಮೊಗದೊಳಾಂಪೆಂ ।
ಭರದೊಳ್ದ್ವಿಜರಾಜನಿರವುಗೆಡಿಸದೆ ಬಿಡನೆಂ ॥
ಒರೆ ಚೆನ್ನಬಸವಸೆಟ್ಟಿಗೆ ।
ದೊರೆಕೊಳಿಸಿತ್ತಳಿಸಿದಂತೆ ಗಾಣಾಪತ್ಯಂ ॥೧೬

ಇದಱೊಳ್ ಚೆನ್ನಬಸವಂ ಧುರಕ್ಕೆ ತಾನೆ ಮುಂಬರಿದು ಪಾರ್ವಗುಱಿಮಾನಿಸನಪ್ಪ ಬೊಮ್ಮರಸಯ್ಯನಂ ಕಡೆಗಣಿಸಿ ಕೆಳದಿಯ ದಳವಾಯಿತನಮಂ ಪಡೆವೆನೆಂದೆಣಿಸಿ ಅದೆ ತೆಱನಾದಪನೆಂಬುದಱೊಳ್ ಗಜಮುಖನೆನಿಸಿ ಚಂದಿರನೊಳ್ಮುಚ್ಚರಿಸಿ ಭಗ್ನದಂತನಾದ ವಿಘ್ನೇಶ್ವರನಂತಾದನೆಂದು ಮಱಸಿ ಪೇೞ್ದರ್ಥಮಂ ಗಾಣಾಪತ್ಯಂ ದೊರೆಕೊಳಿಸಿತ್ತೆಂದು ಕವಿ ತಾನೆ ವ್ಯಕ್ತಂಗೆಯ್ವುದಱಿಂದಿದುವುಂ ವಿವೃತೋಕ್ತಿಯೆನಿಪ್ಪುದು.

ಇವೆರಡುಂ ವಿವೃತೋಕ್ತ್ಯಲಂಕಾರಂ.

---

೪೯. ಯುಕ್ತ್ಯಲಂಕಾರಮೆಂಬುದು :—

" ಯುಕ್ತಿಃ ಪರಾತಿಸಂಧಾನಂ
ಕ್ರಿಯಯಾ ಮರ್ಮಗುಪ್ತಯೇ ॥ "

[ವೃತ್ತಿ] ತನ್ನ ಬಗೆಯಂ ಪೆಱರ್ ತಿಳಿಯದಂತೆ ಮಱೆಸುವುದಕ್ಕೊಂದು ಕಜ್ಜಮನೆಸಗುವುದು ಯುಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ತೆಱಸಂದಪ್ರತಿಮಭಟರ್ ।

ತೞುಬುವಿನಂ ಪರಿವ ಕೆಳದಿದಱವೊಳಡೊಪ್ಪಂ ॥
ಮುಱಿವುದು ಕೆಳದಿಯ ದಱನಿಱ |
ಯಿಱಿಯೆಂದೊದಱುತ್ತೆ ತಮ್ಮವರನೇ ತಱಿದಂ ॥೧೨೦

ಇದಱೊಳ್ ಮಹಿಶೂರವರ್ ತಱುಬಿ ಪೊಯ್ಯುತ್ತಿರೆ ಮುಱಿವೋಡುವ ಕೆಳವಿದಱಬೊಳ್ಚದುರನೊರ್ವಂ ತನ್ನಂ ತಮ್ಮವಂಗೆತ್ತು ತಲೆಗೊಯ್ಯದಿರಲೆಂದೆಣಿಸಿ ತಾನುಂ ಕೆಳದಿಯ ದಱಿ ಮುಱಿವುದು ಇಱಿಯಿಱಿಯೆಂದೊದಱಿ ತಮ್ಮವರನೆ ತಱಿವನೆಂಬುದಱಿಂದಿದು ಯುಕ್ತ್ಯಲಂಕಾರಂ.

---

೯೦. ಲೋಕೋಕ್ತಿಯೆಂಬುದು :—

“ ಲೋಕಪ್ರವಾದಾನುಕೃತಿಃ
ಲೋಕೋಕ್ತಿರಿತಿ ಭಣ್ಯತೇ ॥ ”

[ವೃತ್ತಿ] ಪ್ರಕೃತೋಪಯುಕ್ತಮಾಗಿ ನಾಣ್ನುಡಿಯನನುಸರಿಪ್ಪುದು ಲೋಕೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಆವೇಳೆ ಚೆನ್ನಬಸವಂ | 15
ಜೀವನ್ ಭದ್ರಾಣಿ ಪಶ್ಯತೀತ್ಯಾದಿಗಳಂ ॥
ಭಾವಿಸಿ ಮುಱಿದಂ ಮುಂ ನ |
ಟ್ಟಾವರದೊಳ್ಮುಱಿದು ಪಾಱುಗಂಡಿರ್ದದಱಿಂ ॥೧೨೧

ಇದಱೊಳ್ ಪೆರ್ಬಲೆಯ ಪುಯಿಲೊಳ್ಚೆನ್ನಬಸವಂ ತನ್ನ ಜಸುಮಸುಳಿಸಿದೊಡಮುಸುವನುಱಿಯಿಸಿಕೊಂಬೆನೆಂದು ಮುಂ ನಟ್ಟಾವರದ ಪುಯಿಲೊಳ್ಮುಱಿವು ಓಡಿದಂತೆ ಓಡುವಾಗಳ್ “ ಜೀವನ್ ಭದ್ರಾಣಿ ಪಶ್ಯತಿ ” ಎಂಬ ನಾಣ್ನುಡಿಯಂ ನೆನೆದನೆಂದನುವದಿಸುವುದಱಿಂದಿದು ಲೋಕೋಕ್ತಿಯೆನಿಪ್ಪುದು.

೯೧. ಛೇಕೋಕ್ತಿಯೆಂಬುದು :—

“ ಛೇಕೋಕ್ತಿರ್ಯತ್ರಲೋಕೋಕ್ತೇಃ
ಸ್ಯಾದರ್ಥಾನ್ತರಗರ್ಭತಾ ॥ ”

[ವೃತ್ತಿ] ಈನಾಣ್ಣುಡಿಗೆ ಪ್ರಸಿದ್ಧವಾದರ್ಥಮಲ್ಲದೆ ಪೆಱತೊಂದರ್ಥಮಂ ಕಲ್ಪಿಸಿ ಪೇೞ್ವುದು ಛೇಕೋಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ಕತ್ತರಿಸಿ ನೆತ್ತಿದೊವಲಂ ।
ಪತ್ತಿಸಿ ಪೊಸಮೂಗುಗೆಯ್ವಮೆನಲೆಸಮಂತಂ ॥
ಸತ್ತಾಂ ಸಗ್ಗಂಬಡೆವೆಂ ।
ಮತ್ತ ವಿರಕ್ತಂಗೆ ಮೂಗದೇತರ್ಕೆಂದಂ ॥೧೨೩

ಇವಱೊಳ್ ‘ ವಿರಕ್ತಂಗೆ ಮೂಗೇತರ್ಕೆ’ ಎಂಬ ನಾಣ್ಣುಡಿಗೆ ಪ್ರಕೃತದೊಳ್ ರಕ್ತಂ ಬಸಿದು ಪೋಪವಂಗೆ ಮೂಗು ಪತ್ತದೆಂದು ತನಗೆ ಮೂಗುವೇಡೆಂಬರ್ಥಾಂತರಂ ತೋರ್ಪುದಱಿಂದಿದು ಛೇಕೋಕ್ತಿಯೆನಿಪ್ಪುದು.

---

೯೨. ವಕ್ರೋಕ್ತಿಯೆಂಬುದೆರಡುಂ ತೆಱಂ.

“ ವಕ್ರೋಕ್ತಿಃ ಶ್ಲೇಷಕಾಕುಭ್ಯಾ
ಮಪರಾರ್ಥಪ್ರಕಲ್ಪನಮ್ ॥ ”

[ವೃತ್ತಿ] ಶ್ಲೇಷದಿಂದಾದೊಡಂ ಕಾಕುಸ್ವರದಿಂದಾದೊಡಂ ನುಡಿಗಳ್ಗೆ ಪೆಱತೊಂದಭಿಪ್ರಾಯಮಂ ಕಲ್ಪಿಪ್ಪುದು ವಕ್ರೋಕ್ತಿಯೆನಿಪ್ಪುದು.

(1) ಶ್ಲೇಷದಿಂ ಕಲ್ಪಿಪ್ಪುದೆಂತೆನೆ :—

ಕಂ॥ ನೀಮಾರಿಕೇರಿಯವರ್ ।
ಭೂಮಿಗೆ ಪಿರಿದೊರೆಗಳಪ್ಪಿರಾಂ ಕೆಳದಿಯವರ್ ॥

ಮಾಮಾಪೊರುಷದೇಟ್ಟರ |
ಮಾಮಿಃಮಲೆನಾಡ ಗೌಡಗಳುಂ ನಾಗರಿಕರ್ ||೧೩೩

ಇದಱೊಳ್ ಇರ್ಕೇರಿಯವರೆಂಬುದರ್ಕೆರಡುಂ ಕೇರಿಯನಾಳ್ವರೆಂದುಂ, ಕೆಳದಿಯವರೆಂಬುದರ್ಕೊಡನಾಡಿವೆಣ್ಗಳೆಂದುಂ, ಮಲೆನಾಡುಗರೆಂಬುದರ್ಕೆ ಕಾಡ್ವನಿಸರೆಂದುಮಭಿಪ್ರಾಯಮಂ ಕಲ್ಪಿಸಿಯುತ್ತರಂಗುಡುವುದಱಿಂದಿದು ಶ್ಲೇಷಮೂಲವಕ್ರೋಕ್ತಿಯೆನಿಪ್ಪುದು.

(2) ಕಾಕುಸ್ವರದಿಂ ಕಲ್ಪಿಪ ವಕ್ರೋಕ್ತಿಯೆಂತೆನೆ :—

ಕಂ|| ಮೊನೆಗಾಱಂ ಬೊಮ್ಮಯ್ಯಂ |
ಮೊನೆಗಾಱನೆಯುಂಚೆಯೋಱ್ ಪರಿದಂ ರಣದಿಂ ||
ದನುವರೆಪಗಾಱನಿವನಿವ |
ನನುವರವದನ್ನೈಸೆ ಚೆನ್ನಬಸವಂ ಮುಱಿದಂ ||೧೩೪

ಇದಱೊಳ್ ಕೆಳವಾಡದ ಬೊಮ್ಮಯ್ಯನ ಬಗೆಯವರ್ ಅವಂ ಮೊನೆಗಾಱಂ ಅನುವರೆಪಗಾಱಂ ಎಂಬುದರ್ಕೆ ಚೆನ್ನಬಸವನ ಬಗೆಯವರ್ ಅಂಚೆಯೋಱ್ ರಣದಿಂ ಪರಿದವಂ ಮೊನೆಗಾಱನೆ ಎಮ್ಮ ಚೆನ್ನಬಸವಂ ಮುಱಿದುದೀಬರೆಪದಿಂದೈಸೆ ಎಂಬ ಕಾಕುಸ್ವರಂಗಳಿಂ ಮೊನೆಗಾಱನಲ್ಲ ಅನುವರೆಪಗಾಱನುಮಲ್ಲ ಎಂದು ನಿರವಿಸುವದಱಿಂದಿದುವುಂ ವಕ್ರೋಕ್ತಿಯೆನಿಪ್ಪುದು. ಮತ್ತಮಿದಱೊಳ್ ಬೊಮ್ಮಯ್ಯಂ ಮೊನೆಗೆ ಆಱಂ ಅಂಚೆಯೋಱ್ ಪರಿದವಂ ಅನುವರೆಪಗಾಱಂ ಈಬರೆಪದಿಂದೈಸೆ ಚೆನ್ನಬಸವಂ ಮುಱಿದಂ ಎಂಬ ನುಡಿಗಳಿಂ ನಾಲ್ಕೊಗಂ ವಿಷ್ಣುರುದ್ರರಂತೆ ಯುದ್ಧಂಗೆಯ್ವನಲ್ಲ; ಹುಸಿವಾಹನಂ ಪುಣ್ಯಪಾಪಾನುರೂಪವಾಗಿ ಪಣೆಯೊಳ್ಬರೆದವನೆಂಬ ವೃತ್ತಾಂತಂ ವ್ಯಂಗ್ಯವಾಗಿ ತೋರ್ಕುಂ.

ಇವೆರಡುಂ ವಕ್ರೋಕ್ತ್ಯಲಂಕಾರಂಗಳ್.

೯೩. ಸ್ವಭಾವೋಕ್ತಿಯೆಂಬುದು :—

" ಸ್ವಭಾವೋಕ್ತಿಸ್ಸ್ವಭಾವಸ್ಯ
ಜಾತ್ಯಾದಿಸ್ಥಸ್ಯ ವರ್ಣನಮ್ " ॥

[ವೃತ್ತಿ] ಒಂದು ವಸ್ತುವಿನ ಜಾತ್ಯಲಂಕಾರಾದಿಗಳ ನೆಲೆಯುಂ ಬಣ್ಣಿಪುದು ಸ್ವಭಾವೋಕ್ತಿಯೆನಿಪ್ಪುದು.

ಎಂತೆನೆ :—

ವೃ॥ ಕಿಱುಗಿವಿ ದೇಸಿವೆತ್ತಸಿಮೊಗಂ ಸಘುರುಸ್ವನನಾಸಿಕಾಪುಟಂ ।
ಮಿಱುಗುವ ಕಂದಮುಬ್ಬಿದೆರ್ದೆ ಪೆರ್ದೊಡೆ ನುಣ್ಪೊಡೆ ಸಣ್ಣಗಾಲ್ಗಳುಂ ॥ ನೆಱೆಗೊಳಗುಬ್ಬ ವಚ್ಚಳಮುದಂಚಿತವಾಲಧಿ ಸೂಕ್ಷ್ಮರೋಮದಿಂ । ಮೆಱೆದುವು ಸಂಗರಾಂಗಣದೊಳಪ್ರತಿವೀರನ ವಾಜಿರಾಜಿಗಳ್ ॥೧೭೫

ಮತ್ತಂ,

ಇಕ್ಕಿದ ಪಕ್ಕರಕ್ಕೆ ನಿಡುಜ್ಝಲ್ಲಿ ತೊಡುಕುವ ತೋಱಗೊಂಡೆಯುಂ ।
ಸೆಕ್ಕಿದ ಖಂಡೆಯುಂ ಬಿಗಿದ ಬಿಲ್ಪೊದೆದುಂಬಿದ ಬೋಳೆಯೆಂಬು ಕಂ ॥
ದಕ್ಕಮುರ್ದಿಟ್ಟ ದಿಟ್ಟಸರಪೊಂಬಲೆಗಳ್ಮಿಗರುಬವೊಂದು ಪೊಂ ।
ಬಕ್ಕೆಯು ಬಾಸಿಗಂ ಮೆಱೆಯೆ ರಾಜಿಪುವಾಮಹಿಶೂರ ವಾಜಿಗಳ್ ॥

ಇಲ್ಲಿ ಮೊದಲ ಪದ್ಯದೊಳ್ ಕುದುರೆಗಳ ಮೆಯ್ನೆಲೆಯುಂ, ಎರಡನೆಯ ಪದ್ಯದೊಳ್ ಸಿಂಗರದ ನೆಲೆಯುಂ ಬಣ್ಣಿಸಿಪ್ಪುದೆಂದು ಭೇದಂ.

---

೯೪. ಭಾವಿಕಾಲಂಕಾರಮೆಂಬುದು :—

" ಭಾವಿಕಂ ಭೂತಭಾವ್ಯರ್ಥ
ಸಾಕ್ಷಾತ್ಕಾರಸ್ಯ ವರ್ಣನಮ್ ॥ "

[ವೃತ್ತಿ] ಪಿಂದೆ ಪೋದುದಂ ಮುಂತೆ ಬರ್ಪುದನಾಪುದನಾದೊಡಮೊಂದು ರಸಾವೇಶದಿಂ ಪ್ರತ್ಯಕ್ಷದಂತೆ ಕಾಣ್ಬುದು ಭಾವಿಕಮೆನಿಪ್ಪುದು.

ಎಂತೆನೆ :—

ಕಂ॥ ಇದೆ ಬಂದರ್ ಮಹಿಶೂರದ ।
ರಿದೆ ಕೊಂದರ್ ಕೂರ್ಪುಖಾನನಂ ಮಿಕ್ಕವರಂ ॥
ಸದೆದಪರಿದೆ ಸಲವ್ವುದೆಂ ।
ದೊದಱುವನಾ ಚೆನ್ನಬಸವನಿರ್ಕೇರಿಯೊಳಂ ॥೧೩೩

ಇದಱೊಳ್ ರಣಭೀತಿಯಿಂ ಚೆನ್ನಬಸವಂ ಪುಯಿಲೊಳ್ ಕಂಡುದಂ ಪುರದೊಳ್ಪ್ರತ್ಯಕ್ಷಾತ್ಕರಿಪುದಱಿಂದಿದು ಭಾವಿಕಾಲಂಕಾರಂ.

---

೯೫. ಉದಾತ್ತಾಲಂಕಾರಮೆಂಬುದು.

"ಉದಾತ್ತಮೃದ್ಧೇಶ್ಚರಿತಂ
ಶ್ಲಾಘ್ಯಂವಾನ್ಯೋಪಲಕ್ಷಣಂ ॥"

[ವೃತ್ತಿ] ಉತ್ತಮವಾದ ಸಂಪತ್ತಾದೊಡಂ ಚರಿತ್ರಮಾದೊಡಂ ಪೆಱತೊಂದರ್ಕಂಗವಾಗಿ ಬಣ್ಣಿಸೆಯುದು ಉದಾತ್ತಾಲಂಕಾರಂ.

(1) ಋದ್ಧ್ಯುದಾತ್ತಾಲಂಕಾರಮೆಂತೆನೆ :—

ಕಂ॥ ಓಲಗಿಸುವರಿರ್ದ ವಜ್ರದ ।
ದಾಲಿಗಳೊಳ್ಛಾಯೆಗೊಂಡು ಚಿಕದೇವೇಂದ್ರಂ ॥
ಲೀಲೆ ಮಿಗೆ ಸಕಲಜನಹೃದ ।
ಯಾಲಯದೊಳ್ತೊಳಪ ಹರಿಯ ಮೆಯ್ಸಿರಿವೆತ್ತಂ ॥೧೩೪

ಇದಱೊಳ್ ಓಲಗಿಸುವರನಿಬರುಂ ವಜ್ರಭೂಷಣಂಗಳಂ ಧರಿಸಿರ್ಪರೆಂಬ ದಿವ್ಯೈಶ್ವರ್ಯಂ ಹರಿಯ ಮೆಯ್ಸಿರಿವೆತ್ತನೆಂಬ ನಿದರ್ಶನಾಲಂಕಾರಕ್ಕಂಗವಾಗಿರ್ಪುದಱಿಂದಿದು ಋದ್ಧ್ಯುದಾತ್ತಾಲಂಕಾರಂ.

(2) ಚರಿತೋದಾತ್ತಾಲಂಕಾರಮೆಂತೆನೆ :—

ಕಂ॥ ಸಿರಿ ಕರಮುಣ್ಬೆಸೆಯುನ ಪ್ರೊಡೆ ।
ಪರಿಪೂರ್ಣತೆವಡೆಯೆ ಬಡಿಸಿ ಮುನಿಗೌತಮನಂ ॥
ಪರಿಕಲಿಸಿದಳಾವೆಡೆಯೊಳ್ ।
ನರಪತಿಚಿಕದೇವರಾಯನಾಪುರವಾಟ್ಗಂ ॥೧೭೯

ಇವಱೊಳ್ ಗೌತಮಕ್ಷೇತ್ರಮೆನಿಪ ಶ್ರೀರಂಗಪಟ್ಟಣದೊಳ್ ಮುಂ ಗೌತಮಮುನಿ ಸಿಚ್ಛೆಯುಂ ಪನ್ನೀರ್ಛಾಸಿರಂ ಪಾರ್ವರ್ಗುಣಬಡಿಸೆಯುದರ್ಕೆ ಮೆಚ್ಚಿ ಅಚ್ಯುತಂ ತಾನುಮೀಭಾಗವತಾನ್ನಕ್ಕೆಳಸಿ ಕಡುಪಸಿದ ಪಾರ್ವನುತೇಟ್ತಂದಾರೋಗಿಸುವಾಗಳ್ ಭಕ್ತಿಯಿಂ ಬಿತ್ತನ್ನಮಾದುದಱಿಂದದಂ ಸವಿಸವಿದು ತಣಿಯದನಿತುಮನುಂಡು ಮುಗಿಸುತ್ತಿರೆ ಗೌತಮನನಿತುಂ ಪಾರ್ವರುಂ ಪಸಿದರ್ಪರಿದರ್ಕೆನೆಂ ತೆಱಮೆಂದು ಚಿಂತಾಕುಲನಪ್ಪಿನಂ ಮನಂಗರಗಿ ಸಿರಿರಾಣಿಯುರುಂ ಪಾರ್ತಿವರಿಜಾಂತು ಅಡಿಗೆವನೆಯೊಳುೞಿದನ್ನಮಂ ರನ್ನದ ಕೈವಟ್ಟಲೊಳ್ತಂಮ ಬಡಿಸುತ್ತಿರೆಯುದು ಸಮೆಯುದೆ ಬಳೆವುದಂ ಕಂಡು ಮೊಗಮೆತ್ತಿ ಸಿರಿಯುರಸು ಸಿರಿರಾಣಿಯುಂ ಕಣ್ಣ್ಡ ನಾಣ್ಚೆಯುವರುಂ ನಸುನಗುತ್ತೆ ನಮಿಸೆ ಇರ್ವರುಂ ನಿಜರೂಪಮೊಳ್ನಿಂದು ಗೌತಮಂಗೆಯ್ವ ಪೂಜೆಗಳನಂಗೀಕರಿಸಿ ನೆಲಸಿದರೆಂಬ ಪಶ್ಚಿಮರಂಗಮಹಾತ್ಮ್ಯದ ಕಥೆಯುಂ ತಿಳಿದುಕೊಳ್ವುದು.

ಇಂತಪ್ಪ ಲಕ್ಷ್ಮೀನಾರಾಯಣರ ದಿವ್ಯಚರಿತಮೀಪುರವರ್ಣನಕ್ಕಂಗಪಾದುದಱಿಂದಮ ಚರಿತೋದಾತ್ತಾಲಂಕಾರಂ.

---

(೯೬) ಅತ್ಯುಕ್ತ್ಯಲಂಕಾರಮೆಂತೆನೆ :—

" ಅತ್ಯುಕ್ತಿರದ್ಭುತಾ ತಥ್ಯ

ಶೌರ್ಯೌದಾರ್ಯಾದಿವರ್ಣನಮ್ ॥ ''

[ವೃತ್ತಿ] ಆಶ್ಚರ್ಯಕರಂಗಳಾದ ಶೌರ್ಯೌದಾರ್ಯಾದಿಗುಣಂಗಳಂ ಬರ್ಣಿಸುವುದು ಅತ್ಯುಕ್ತಿಯೆನಿಪ್ಪುದು.

ಶೌರ್ಯಾತ್ಯುಕ್ತಿಯೆಂತೆನೆ :—

(1) ಕಂ॥ ಸೆಣಸಿ ಮಹಿಶೂರಭಟನೊ ।
ಳ್ಪ್ರಾಣಬೊರ್ಲಿಡಿದ ಪಡೆಗಮಿಳೆಯೊಳೇನೆಣೆಯೊಳದೆ? ॥
ರಣದೊಳ್ಮುಱಿದ ಮರಾಟರ್ ।
ತೃಣಕೆಣಿಪರ್ ಮಲೆಸಬೇಡವೊಗಲರ ಪಡೆಯಂ! ॥೧೮೦

ಇದು ಶೌರ್ಯಾತ್ಯುಕ್ತಿವರ್ಣನಂ.

(2) ಔದಾರ್ಯಾತ್ಯುಕ್ತಿಯೆಂತೆನೆ :—

ಕಂ॥ ಮನ್ನಣೆಗೆಯ್ದು ಪ್ರತಿಮಂ ।
ತನ್ನೊಲವಿಂದೀವ ಚಾಗಕೇನಳವ್ರೊಳದೆ ? ॥
ಮುನ್ನಿವನಿಂ ಪ್ರುರುಳ್ವಡೆದರ್ ।
ಪಿನ್ನೆಱೆವರ್ಗಿತ್ತು ತಣಿಸಿ ಪೆಂಪೇಱುಸುವರ್! ॥೧೮೧

ಇದಱೊಳ್ ಮೊದಲೊಳ್ತ್ಯಾಗಮಂ ಕೊಂಡವರ್ ಬೞಿಕ್ಕೆ ಬೇಡಲ್ಬಂದವರ್ಗೆ ತಾಮೆ ಬೇೞ್ಪುದಂ ಕುಡುವರೆಂದು ಪೇೞ್ವುದಱಿಂದಿದು ಔದಾರ್ಯಾತ್ಯುಕ್ತಿಯೆನಿಪ್ಪುದು.

೯೩. ನಿರುಕ್ತ್ಯಲಂಕಾರಮೆಂಬುದು :—

" ನಿರುಕ್ತಿರ್ಯೋಗತೋ ನಾಮ್ನಾ
ಮನ್ಯಾರ್ಥತ್ವಪ್ರಕಲ್ಪನಂ ॥ ''

[ವೃತ್ತಿ] ಪ್ರಸಿದ್ಧಮಾದ ಪೆಸರ್ಗಳ್ಗೆ ಯೌಗಿಕಮಾಗಿ ಪೆಱತೊಂದರ್ಥಮಂ ಪೇೞ್ವುದು ನಿರುಕ್ತಿಯೆನಿಪ್ಪುದು.

ಎಂತೆನೆ :—

ಕಂ॥ ನೊಂದು ಮಹಿಶೂರಭಟರಿಂ ।
ಪಿಂದೆಗೆದೋಡುತ್ತೆ ಬೇಡತುರುಕಮರಾಟರ್ ॥
ಸಂದಣಿಸಿ ಕೆಳದಿದಟದೊಡ ।
ನೊಂದೆನೆ ಪುಲ್ಗರ್ಚಿ ಬಸವವಡೆಯೊನಲೆಸೆದರ್ ॥೧೮೨

ಇದಱೊಳ್ ಇಕ್ಕೇರಿಯ ಬಸವಪ್ಪನಾಯಕನನೋಲಗಿಸಿದ ಬೇಡತುರುಕಮರಾಟರ ನೆರವಿಗೆ ಬಂದ ಬಸವವಡೆಯೆಂಬ ಪೆಸರ್ಗೆ ಪುಲ್ಗರ್ಚಿದುದಱಂ ಬಸವನಡೆಯೆಂದು ಪೆಱತೊಂದರ್ಥಮಂ ಪೇೞ್ದುದಱಿಂದಿದು ನಿರುಕ್ತ್ಯಲಂಕಾರಂ.

---

೯೮. ಪ್ರತಿಷೇಧಾಲಂಕಾರಮೆಂಬುದು :—

" ಪ್ರತಿಷೇಧಃ ಪ್ರಸಿದ್ಧಸ್ಯ
ನಿಷೇಧಸ್ಯಾನುಕೀರ್ತನಂ ॥ "

[ವೃತ್ತಿ] ಅಲ್ತೆಂದು ತಿಳಿದಿರ್ದುದಂ ಮಗುೞ್ದುಮನುವದಿಪುದು ಪ್ರತಿಷೇಧಾಲಂಕಾರಮೆನಿಪುದು.

ಎಂತೆನೆ :—

ಕಂ॥ ಎಲೆಲೆ ಮರಾಟರಿರಾ ! ನೀಂ ।
ತೊಲತೊಲಗಿಂ ಭಾಗನಗರವಿಜಯಾಪುರದಾ ॥
ನೆಲನಲ್ತಿದು ನಿಮ್ಮಾಟಕೆ ।
ಪೊಲನಲ್ತಪ್ರತಿಮವೀರಸೀಧರೆಯಾಳ್ಗಂ ॥೧೮೩

ಇದಱೊಳ್ ಮಹಿಶೂರ ನೆಲಂ ಭಾಗನಗರವಿಜಯಾಪುರಂಗಳ ನೆಲನಲ್ತೆಂಬ ಪ್ರಸಿದ್ಧಮಾದ ನಿಷೇಧವನನುವದಿಸಿ ಪೇೞ್ದುದಱಿಂದಿದು ನಿಷೇ

ಧಾಲಂಕಾರಂ. ಇದಱಿಂದೀನೆಲಮವರಂತೆ ಸುಲಭಸಾಧ್ಯಮಲ್ತು, ಅಸಾಧ್ಯಂ ಎಂಬರ್ಥಂ ವ್ಯಂಗ್ಯಮಾಗಿ ತೋರ್ಕುಂ.

---

೯೯. ವಿಧ್ಯಲಂಕಾರಮೆಂಬುದು :—

"ಸಿದ್ಧಸ್ಯೈವ ವಿಧಾನಂ ಯ
ತ್ತಮಾಹುರ್ವಿಧ್ಯಲಂಕೃತಿಂ ॥"

[ವೃತ್ತಿ] ಇದೀತೆಱಮೆಂದು ಸಿದ್ಧಮಾದ ವಸ್ತುವನೆ ಮಗುೞ್ದುಮನುವದಿಸೆಯುದು ವಿಧ್ಯಲಂಕಾರಮೆನಿಪ್ಪುದು.

ಎಂತೆನೆ :—

ಕಂ॥ ಬಗೆವಿನಮೆಣ್ದೆಸೆದೊರೆಗಳ ।
ನೊಗುಮಿಗೆಯೊಳ್ತುೞಿದು ತೂಳ್ದಪಾರ್ಥಿಂದೆಸೆವಾ ॥
ಮೊಗಲಮರಾಟರ ಪಡೆಯುಂ ।
ತಗುೞ್ದಸೆವೀಚಿಕ್ಕದೇವರಾಯಂ ರಾಯಂ ॥೧೮೪

ಇದಱೊಳ್ ಪ್ರಸಿದ್ಧನಾದ ಚಿಕದೇವರಾಯನುಂ ಮಗುೞ್ದುಂ ರಾಯನೆಂದನುವದಿಪ್ಪುದಱಿಂದಿದು ವಿಧ್ಯಲಂಕಾರಂ. ಇದಱಿಂ ಮೊಗಲಮರಾಟರ್ಗಂಜುವ ಪೆಱರಾಯರ್ ರಾಯರಲ್ತು, ಅವರಂ ಜಯಿಸಿರ್ಪ ಚಿಕದೇವರಾಯನೆ ರಾಯನೆಂದಿವನಪ್ರತಿಮತ್ವಂ ವ್ಯಂಗ್ಯಮಾಗಿ ತೋರ್ಕುಂ.

---

೧೦೦. ಕಾರಣಾಲಂಕಾರಮೆರಡುಂ ತೆಱಂ :—

(1) "ಕಾರಣಸ್ಯ ಸಕಾರ್ಯಸ್ಯ
ವರ್ಣನಂ ಕಾರಣಂ ವಿದುಃ ॥"

[ವೃತ್ತಿ] ಕಾರಣಮುಂ ಪೇೞ್ವಾಗಳ್ ಕಾರ್ಯಮುಂ ಕೂಡೆ ಬಣ್ಣಿಸೆಯುದು ಕಾರಣಾಲಂಕಾರಮೆನಿಪ್ಪುದು. ಅದರ್ಕೆ ಹೇತ್ವಲಂಕಾರಮೆಂದುಂ ಪೆಸರ್.

ಎಂತೆನೆ :—

ಕಂ॥ ಪರಿಪಾಲಿಸೆ ಸಾಧುಗಳಂ ।
ಪರಿಪರಿಯೊಳ್ಬನ್ನಪಡಿಸೆ ದುಷ್ಕೃತ್ಯಗಳಂ ॥
ನಿರವಿಸೆ ಧರ್ಮಸ್ಥಿತಿಯುಂ ।
ನರಪತಿಚಿಕದೇವರಾಯನುದಿಸಿದನಿಳೆಯೊಳ್ ॥೧೯೫॥

ಇದಱೊಳ್ " ಪರಿತ್ರಾಣಾಯ ಸಾಧೂನಾಂ " ಎಂಬ ಗೀತಾಶ್ಲೋಕಾರ್ಥಂ ತಿಳಿಯಲ್ಪಡುಗುಂ.

ಮತ್ತಂ, (2) " ಕಾರ್ಯಕಾರಣಯೋರೈಕ್ಯಂ
ಕಾರಣಂ ಕೇಚಿದೂಚಿರೇ ॥ "

[ವೃತ್ತಿ] ಕಾರ್ಯಕಾರಣಂಗಳುಮೆರಡುಮೊಂದೆನಿಸಿ ಪೇೞ್ವುದು ಕಾರಣಾಲಂಕಾರಂ.

ಎಂತೆನೆ :—

ಕಂ॥ ಇನ್ನಿದಕೆಣೆಯಿಲ್ಲೆಂಬ ಪ್ರೊ ।
ಲುನ್ನತಿವೆತ್ತೆಸೆವ ಬಿಜ್ಜೆಸಿರಿಯೈಸಿರಿಗಳ್ ॥
ಚೆನ್ನಿಗಚಿಕದೇವೇಂದ್ರಂ ।
ತನ್ನಿಂ ತಾನೊಲ್ದುಗೆಯ್ವ ಮನ್ನಣೆವಗೆಗಳ್ ॥೧೯೬॥

ಇದಱೊಳ್ ಚಿಕದೇವರಾಯನಮನ್ನಣೆಯೆಂಬ ಕಾರಣದಿಂ ಪುಟ್ಟುವ ಬಿಜ್ಜೆ ಮುಂತಾದ ಕಾರ್ಯಂಗಳನಾಮನ್ನಣೆವಗೆಗಳೆಂದೇಕಮೆನಿಸಿ ಪೇೞ್ದುದಱಿಂದಿದುಮುಂ ಕಾರಣಾಲಂಕಾರಂ.

ಇಂತಿವೆರಡುಂ ಕಾರಣಾಲಂಕಾರಂಗಳ್.

---

ಇಂತೀನೂಱುಮಲಂಕಾರಂಗಳಂ ಪೞೆಯ ಬಿಜ್ಜೆವಳರ್ ಪೇೞ್ದರ್.

ಇದು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರನರಪತಿ ಶ್ರೀಚಿಕದೇವಮಹಾರಾಜ ಕೃಪಾಪರಿಪಾಲಿತ ಶ್ರೀತಿರುಮಲೆಯಾರ್ಯ ವಿರಚಿತಮಪ್ಪ ಶ್ರೀಮದಪ್ರತಿಮವೀರಚರಿತಮೆಂಬ ಅಲಂಕಾರಗ್ರಂಥದೊಳ್ ಅರ್ಥಾಲಂಕಾರನಿರೂಪಣಂ,

ತೃತೀಯಪ್ರಕರಣಂ ಸಂಪೂರ್ಣಂ.

## —ಚತುರ್ಥ ಪ್ರಕರಣಂ—

ನಾಲ್ಕನೆಯ ಪ್ರಕರಣದೊಳ್ ಪೊಸಬಿಜ್ಜೆವಳರ್ ಪೇೞ್ವುದುಂ ಪದಿನೈದುಮಲಂಕಾರಂಗಳೊಳವು. ಅವಾವುವೆನೆ :—

" ಚತ್ವಾರೋ ರಸವತ್ಪ್ರೇಯ
ಊರ್ಜಸ್ವೀ ಚ ಸಮಾಹಿತಂ ।
ಭಾವಸ್ಯೋದಯಸ್ಸನ್ಧಿ
ಶ್ಶಬಲತ್ವಮಿತಿ ತ್ರಯಃ ॥
ಅಷ್ಟೌ ಪ್ರಮಾಣಾಲಂಕಾರಾಃ
ಪ್ರತ್ಯಕ್ಷಪ್ರಮುಖಾಃ ಕ್ರಮಾತ್ ।
ಏವಂ ಪಂಚದಶಾಪ್ಯನ್ಯಾ
ನಲಂಕಾರಾನ್ವಿದುರ್ಬುಧಾಃ ॥ "

[ವೃತ್ತಿ] ರಸವತ್, ಪ್ರೇಯಃ, ಊರ್ಜಸ್ವೀ, ಸಮಾಹಿತಂ, ಭಾವೋದಯಂ; ಭಾವಸನ್ಧಿ, ಭಾವಶಬಳಂ ಎಂದು ರಸಾಲಂಕಾರಂಗಳೇೞುಂ, ಪ್ರತ್ಯಕ್ಷಂ, ಅನುಮಾನಂ, ಉಪಮಾನಂ, ಶಬ್ದಂ, ಅರ್ಥಾಪತ್ತಿ, ಅನುಪಲಬ್ಧಿ, ಸಂಭವಂ, ಐತಿಹ್ಯಂ ಎಂದು ಪ್ರಮಾಣಾಲಂಕಾರಂಗಳೆಂಟುಂ ಕೂಡೆ ಪದಿನೈದುಮಲಂಕಾರಂಗಳ್.

ಇವಱೊಳ್,

೧. ರಸವದಲಂಕಾರಮೆನೆ :—

" ರಸೋ ಯತ್ರ ಪರಸ್ಯಾಙ್ಗಂ
ರಸವಾನ್ ಸೋಭಿಧೀಯತೇ ॥ "

[ವೃತ್ತಿ] ಶೃಂಗಾರಾದಿರಸಂಗಳೊಳೊಂದು ರಸಂ ಪೆಱತೊಂದು ರಸಕ್ಕಾದೊಡಂ, ನಿರ್ವೇದಗ್ಲಾನಿಶಂಕಾದಿ ಮೂವತ್ತು ಮೂಱುಂ ಭಾವಂಗಳೊಳೊಂದು ಭಾವಕ್ಕಾದೊಡಮಂಗಮಾಗೆಯದು ರಸವದಲಂಕಾರಂ.

ಎಂತೆನೆ :—

ವೃ॥ ಮಿಸುಗುವ ಮುಂಮು ಮುದ್ದುನಗೆ ಮೆಲ್ನುಡಿ ಕುಂಕುಮ ಕೋರೆ
ನೋಟದಿಂ । ದಸೆಗಳೆದೆಮ್ಮ ನೇಹಮುನಿಸು ಸವಿಮಾಯ್ದೆರೆಯಾಡಿ
ಯಾಡಿಯು ॥ ಞ್ಬ ಸಸಿಮೊಗಂ ಪೊಗರ್ದೆಗೆದು ಮಾಗಱಿಮೊಚ್ಚ
ತಮುಚ್ಚಿ ಮುಚ್ಚಿದೂ । ಳ್ಮಸಗದುಡೆಂದು ಕೃಷ್ಣಪನ ರಾಣಿ
ಯರಬ್ತಪರಾರ್ತನಾದದಿಂ ॥೧

ಇವಱೊಳ್ ಐಗೂರ ಕೃಷ್ಣಪನಾಯಕನ ರಾಣಿಯರ ಕರುಣರಸಕ್ಕೆ ಶೃಂಗಾರಬೀಭತ್ಸಂಗಳೆರಡುಮಂಗಮಾಗಿರ್ಪುದಱಿಂದಿದು ರಸವದಲಂಕಾರಂ.

ಭಾವಕ್ಕಂಗಮಾಗಿರ್ಪುದೆಂತೆನೆ :—

ಕಂ॥ ಮಾಗಿಲಿಯೆಸವಂತಂ ಮನೆ ।
ವಾಗಿಲ್ವಗೆ ಜೋಗಿ ಬಂದನೆಂದೆಳಮಕ್ಕಳ್ ॥
ಕೂಗಿಡೆ ಬಿಗುರ್ತದೇಂ ಗಾ ।
ಳಾಗರೆ ಚಿಕದೇವರಾಯನೊಳ್ಸೆಣಸಿದವರ್ ॥ ೨

ಇದಱೊಳ್ ಚಿಕದೇವರಾಯನೊಳ್ಸೆಣಸಿದವರ್ ಗಾಳಾಗುವರೆಂಬ ಚಿಕದೇವರಾಯವಿಷಯಮಪ್ಪ ಕವೀಶ್ವರನ ಪ್ರೀತಿಭಾವಕ್ಕೆ ಜೋಗಿ ಬಂದನೆಂ

ಬ ಭಯಾನಕರಸಮಂಗಮಾಗಿರ್ಪುದಱಿಂದಿದುವುಂ ರಸವದಲಂಕಾರಂ.

ಇಂತು ರಸವದಲಂಕಾರಮೆರಡುಂ ತೆಱಂ.

---

೨. ಪ್ರೇಯೋಽಲಂಕಾರಮೆಂಬುದು :—

" ಯತ್ರ ಭಾವಃ ಪರಸ್ಯಾಂಗಂ
ಸ ಪ್ರೇಯಾನಿತಿ ಕಥ್ಯತೇ ॥ "

[ವೃತ್ತಿ] ನಿರ್ವೇದಾದಿಭಾವಂಗಳೊಳೊಂದು ಭಾವಂ ಪೆಱತೊಂದು ಭಾವಕ್ಕಾದೊಡಂ, ರಸಕ್ಕಾದೊಡಮಂಗಮಾಗೆಯದು ಪ್ರೇಯೋಽಲಂಕಾರಂ.

ಎಂತೆನೆ :—

ವೃ॥ ಸಿರಿಯಡಿಗಳ್ಗೆ ಸಾರ್ಚಿ ಮಣಿವಾವುಗೆಯಂ ಮಣಿದೊರ್ಮೆ ಕೂರ್ಮೆ
ಯಿಂ । ಪರಿದು ಪತದ್ಗ್ರಹಂಬಿಡಿದು ನಿಂದೆವೆಯಾಡದೆ ಭಕ್ತಿಯಿಂ
ದೆ ಮೆ ॥ ಯ್ಸರಿ ಸಿರಿಯೋಜೆಯೊಲ್ಮೆ ಚದುಗೈಸರಿ ದೇಸಿ ಪ್ರೊಡ
ರ್ಪಿನೊಪ್ಪಮುಂ । ನಿರವಿಸುತೊರ್ಮೆಯುಪ್ರತಿಮವೀರನ ಸೇನೆಯ
ನೆಂದೊಡರ್ಚುವೆಂ ॥೩

ಇದಱೊಳ್ ಪ್ರಭುವಿಷಯಮಾದ ಭಕ್ತಿಭಾವಕ್ಕೆ ಎಂದೊಡರ್ಚುವೆನೆಂಬ ಚಿಂತಾಖ್ಯಭಾವಮಂಗಮಾಗಿರ್ಪುದಱಿಂದಿದು ಪ್ರೇಯೋಽಲಂಕಾರಂ.

---

೩. ಊರ್ಜಸ್ವಿಯೆಂಬುದು :—

" ರಸಾಭಾಸಃ ಪರಸ್ಯಾಂಗಂ
ಯತ್ರೋರ್ಜಸ್ವೀ ಸ ಉಚ್ಯತೇ ॥ "

[ವೃತ್ತಿ] ಒಂದು ರಸಕ್ಕಾದೊಡಂ ಭಾವಕ್ಕಾದೊಡಂ ರಸಾಭಾಸಮಂಗಮಾದೊಡೆಯದು ಊರ್ಜಸ್ವ್ಯಲಂಕಾರಂ.

ಎಂತೆನೆ :—

ವೃ॥ ಕಡುಬಡವಾದುದವ್ವ ನಡುವೇಂ ಪೊಡೆದುಂಬುವೊಲುಣ್ಬುದಿ ಲ್ಲವೇ ? । ಮುಡಿಯುಮಿದೊಂದು ಬತ್ತಿಯೆನಿಸಿತ್ತಯಯೋ ! ಕಡು ನೊಂದಿರೆಂದು ಕಾ॥ ಬ್ಬಡದಿಯರೊಳ್ಗೊಗೂಡಿ ಮಱುಕಂಗೊಳೆಯಾ ರೆಯುವೆಂಡಿರಟ್ಟಿಯಿಂ। ನುಡಿಗುಡದಿರ್ಪರಪ್ರತಿಮ ನಿನ್ನ ಭಟಾಳಿಯು ದಾಟಿಗೆಯ್ಮೆಯೊಳ್ ॥೪

ಇದಱೊಳ್ ಚಿಕದೇವಮಹಾರಾಯನ ದಟಂ ದಾಟಿವಾಟ್ಪಗಳೀ ಮರಾಟರಾಣಿಯರ್ ಬಡನಡುವುಂ ಜಡೆಮುಡಿಯುಮಾಗಿ ಕಾಡಂ ಪುಗೆ ಕಂಡು ಸೋಲಗಿತಿಯರ್ ತಾಂ ತೋಱನಡುವುಂ ಬಿಡುಮುಡಿಯುಮಾಗಿ ಪ್ರಿದಱಂ ನಾಟ್ಯಂಡಿರುಮಿಂತಿರ್ಪರ್ ಇವರ್ಗೆ ಪೊಡೆದುಂಬದುದಱಂ ನಡು ಬಡವಾದುದೆಂದುಮಂದಂದಿಂಗನುಗೊಳಸದುದಱಂ ಮುಡಿ ಜಡೆಗ ಟ್ಟಿತೆಂದುಂ ಮಱುಂಗುವರೆಂದು ಪದ್ಯಾರ್ಥಂ.

ಇದಱೊಳ್ ಸೋಲಗಿತಿಯರ ಕರುಣರಸಾಭಾಸಂ ರಾಜವಿಷಯಮ ಪ್ಪ ಕವೀಶ್ವರನ ಪ್ರೀತಿಭಾವಕ್ಕಂಗವಾದುದಱಂದಿದುಂ ಊರ್ಜಸ್ವ್ಯ ಲಂಕಾರಂ. ಇಲ್ಲಿ ಸಾಜದಿಂ ಬಡವಾದ ನಡುವಂ ಸಿಂಗರಕ್ಕೊಡರ್ಚದ ಜಡೆಯುಂ ಕಂಡು ಪೆಱತೊಂದೆಣಿಕೆಯಿಂ ಮಱುಗುವದಱಂದೀಮಱುಕಂ ಕರುಣರಸಾಭಾಸಮೆನಿಸಿತು.

---

೪. ಸಮಾಹಿತಾಲಂಕಾರಮೆನೆ :—

“ ಭಾವಶಾಂತಿಃ ಪರಸ್ಯಾಂಗಂ
ಯತ್ರ ತತ್ಸ್ಯಾತ್ಸಮಾಹಿತಂ ॥ ” 20

[ವೃತ್ತಿ] ಒಂದು ರಸಕ್ಕಾದೊಡಂ ಭಾವಕ್ಕಾದೊಡಂ ಭಾವಶಾಂತಿ ಯಂಗವಾಗೆಯದು ಸಮಾಹಿತಾಲಂಕಾರಂ.

ಎಂತೆನೆ :—

ವೃ॥ ಎಲೆಲೇ ರಾವುತ ನಿಲ್ಲೆಲಾ ಮಹಿಶೂರಯ್ಯಂಗೆ ನೀನಾರವಂ
ಮಲೆನಾಡೊಳ್ಗಱಿವಾನಿಸಂ ಕೆಡಪಿ ಮೂಗಂ ಕೊಯ್ಯದಂ ಮಾ
ಣ್ದ ವಂ ॥ ದಲೆಯುಂ ಪೊಯ್ದಿಡಿಮೆಂದು ಕಾಲ್ಗೆಱಗಿಯುಂಗುಷ್ಠಂ
ಗಳಂ ಕರ್ಚಿ ವಂ । ಬಲಿಸಲ್ಮೆಲ್ಲಿರ್ದ*ಗೊಂಡನಪ್ರತಿಮ ಕೇಳಾಳಾ
ಳ್ದನಂ ಪೋಲ್ದವಂ ॥೫

ಇದಱೊಳ್ ಬಿದಿರೂರ ದಟ್ಟಂ ಮುಱಿಪೋಟುವಾಗಳ್ ತೆಱಬುವ ಮಹಿಶೂರ ಭಟನೊರ್ವಂ ಗರ್ವದಿಂದೆಲೆ ರಾವುತ ನಿಲ್ಲೆಂಬುದುಮಂ ಭಯವಿನಯಂಗಳಿಂದಯ್ಯ ಸಲಾಮೆಂಬುದುಮಿವಂ ಬಿದಿರೂರವನೋ ಅವರ್ಗೆ ನೆರವಾಗಿ ಬಂದ ಚಿಂತನಕಲ್ಮಂತಾದ ಪಾಳೆಯಗಾಱರೊಳೊರ್ವನೋ ಎಂಬ ಸಂದೆಯದಿಂ ನೀನಾರೆನಲವಂ ತಾಂ ಬಿದಿರೂರವನೆಂಬುದುಮಿವಂ ಕೋಪಾತಿಶಯದಿಂ ಮೂಗಂ ಕೊಯ್ಯಲೆಳಸುವಿನಮವಂ ಕಾಲ್ಗೆಱಗಿ ತಲೆಪೊಯ್ಸಿದೊಡಂ ಲೇಸು ಮೂಗನುೞಿಸಲ್ವೇೞ್ಪುದೆಂದು ದೈನ್ಯಂಬಡುವಿನಮಿವಂ ಕೋಪಮಂ ಶಾಂತಿಗೊಳಿಸಿಯವನಂ ಮನ್ನಿಸಿದನೆಂದು ಪದ್ಯಾರ್ಥಂ.

ಇಲ್ಲಿ ಕೋಪಾಖ್ಯಭಾವಶಾಂತಿ ಪ್ರಭುವಿಷಯಮಾದ ಕವೀಶ್ವರನ ಪ್ರೀತಿಭಾವಕ್ಕಂಗಮಾಗಿರ್ಪುದಱಿಂದಿದು ಸಮಾಹಿತಾಲಂಕಾರಂ.

---

೫. ಭಾವೋದಯಾಲಂಕಾರಮೆಂಬುದು :—

“ ಭಾವೋದ್ಗಮಃ ಪರಸ್ಯಾಂಗಂ
ಯತ್ರ ಭಾವೋದಯಸ್ತು ಸಃ ॥ ” 20

[ವೃತ್ತಿ] ಒಂದು ರಸಕ್ಕಾದೊಡಂ ಭಾವಕ್ಕಾದೊಡಂ ಭಾವೋದಯಮಂಗಮಾಗೆಯದು ಭಾವೋದಯಾಲಂಕಾರಮೆನಿಪ್ಪುದು.

ಎಂತೆನೆ :—

ಕಂ॥ ಮುನ್ನಿವನ ತಂದೆ ಮಧುರೆಯ |
ಮನ್ನೆಯನಂ ಗೆಲ್ವನಾವನಿದೆ ಪೀಳೆಯುಮೆಂ ॥
ಬನ್ನಂ ಚಿಕದೇವೇಂದ್ರಂ |
ಕನ್ನೆವೃಯಿಲ್ಗೆಳಸಿ ನಮಿಸಿ ಮನ್ನಣೆವಡೆದಂ ॥೬

ಇದಱೊಳ್ ಚಿಕದೇವರಾಯನ ಯುದ್ಧವಿಷಯಮಾದೌತ್ಸುಕ್ಯಭಾವೋದಯಂ ವೀರರಸಕ್ಕಂಗಮಾಗಿರ್ದಱಿಂದಿದು ಭಾವೋದಯಾಲಂಕಾರಂ.

೬. ಭಾವಸಂಧಿಯೆನೆ :—

“ಸ ಭಾವಸಂಧಿರ್ಯತ್ರಸ್ಯಾ
ದ್ಭಾವಸಂಧೇಃ ಪರಾಙ್ಗತಾ ॥”

[ವೃತ್ತಿ] ಪೆಱಪೆಱತಪ್ಪ ಭಾವಂಗಳ ಸನ್ಧಿ, ಒಂದು ರಸಕ್ಕಾದೊಡಂ ಭಾವಕ್ಕಾದೊಡಮಂಗಮಾಗೆಯದು ಭಾವಸಂಧ್ಯಲಂಕಾರಂ.

ಎಂತೆನೆ :—

ಕಂ॥ ಈರೋಡುಗೋಂಟೆಯುಂ ಬಿ |
ಟ್ಟಾರೊಡನೆಯುಮಱಿವದೋಡೆ ಚೊಕಲಿಂಗನೃಪಂ ॥
ವೀರಚಿಕದೇವನರಪತಿ |
ಯಾರಯೆ ನಿರ್ವೇದಗರ್ವಸಂಧಿಯೊಳೆಸೆದಂ ॥೭

ಇದಱೊಳ್ ಚಿಕದೇವರಾಯಂ ತಂದೆಯಾಣತಿವಡೆದು ದಂಡಿಗೆ ಬರ್ಪನೆಂಬ ಸುದ್ದಿಯಂ ಚೊಕಲಿಂಗನಾಯಕಂ ಕೇಳ್ದಾಗಳೆ ತಾಂ ಮುತ್ತಿರ್ದ ಈರೋಡುಗೋಂಟೆಯುಂ ಬಿಟ್ಟು ತನ್ನೊಡನಿರ್ದ ಶ್ರೀರಂಗರಾಯಂಗಂ ಅನಂತೋಜಿಪಂಡಿತಂಗಂ ದಾಮಲ್ಲಿತುಮಾಕದವರ್ಗಂ ಪೇೞದೆ

ನಿಟ್ಟೋಟದಿಂ ತಿರುಚನಾಪಳ್ಳಿಯುಂ ಸಾರ್ಪುದುಂ, ಪಗೆ ಕೈಸೆಱೆಸಿಲ್ಕದೆ ತಪ್ಪಿ ಪೋದನೆಂದು ನಿರ್ವೇದಮುಂ ತನ್ನ ಪೆಸಱಂ ಕೇಳ್ದ ಮಾತ್ರದಿಂದಮೆ ಬೆದಱಿ ಪೋದನೆಂದು ಗರ್ವಮುಮೆಂಬೆರಡುಂ ಭಾವಂಗಳುಂ ಚಿಕದೇವರಾಯನೊಳ್ ಬಳೆದುವೆಂಬುದಱಿಂ ಭಾವಸಂಧಿ.

ಇದು ಪ್ರಭುವಿಷಯಮಾದ ಕವೀಶ್ವರನ ಪ್ರೀತಿಭಾವಕ್ಕಂಗಮಾಗಿರ್ಪುದಱಿಂ ಭಾವಸಂಧ್ಯಲಂಕಾರಂ.

---

೭. ಭಾವಶಬಳತ್ವಾಲಂಕಾರಮೆನೆ :—

"ಉತ್ತರೋತ್ತರಭಾವಾನಾಂ
ಪೂರ್ವಪೂರ್ವೋಪಮರ್ದಿನಾಂ ।
ಉತ್ಪತ್ತಿರ್ಯತ್ರ ತದ್ಭಾವ
ಶಬಳತ್ವಮುದಾಹೃತಂ ॥"

[ವೃತ್ತಿ] ಪೂರ್ವಪೂರ್ವಭಾವಂಗಳನುತ್ತರೋತ್ತರಭಾವಂಗಳುಪಮರ್ದಿಸೆಯುದು ಭಾವಶಬಳತ್ವಂ; ಒಂದು ರಸಕ್ಕಾದೊಡಂ ಭಾವಕ್ಕಾದೊಡಮಂಗಮಾಗೆಯುದು ಭಾವಶಬಳತ್ವಾಲಂಕಾರಂ.

ಎಂತೆನೆ :—

ವೃ॥ ಮಲೆತು ಜೈಯ್ತಜಿ ತಕ್ಕುದೊಳ್ಪಡೆವಳಂಗುರ್ಜಿಟ್ದು ಮೆಲ್ವಾ
ಯ್ದಪಂ। ಕಲಿಯಪ್ಪಂ ಕಡುವೇಗದಿಂ ಸನಿಯಮುಂ ಸಾರ್ದತ್ತಣಿಂ
ತೇಲ್ದಪಂ ॥ ಪಲವುಂ ಮಾಯೆಯನಾರೆಯರ್ ಬಳಸುವರ್ ಕೊತ್ತ
ತ್ತಿಯೂರೊತ್ತಿನೊಳ್। ಛಲದಿಂದಂ ಮಹಿಶೂರವರ್ ಕಡಿಯೆ ಬಿಟ್ದಂ
ಬಾಟ್ದಪರ್ ನಾಡುಗರ್ ॥೮ 20

ಇದಱೊಳೊಳನಾಡಂ ಪೊಕ್ಕ ಜೈಯ್ತಜಿಯಂ ಮಹಿಶೂರವರ್ ತೆಗುಳ್ವಾಗಳ್ ನಾಡುಗರೊಳೊರ್ವಂ ಜೈಯ್ತಜಿಯ ವೃತ್ತಾಂತಮಂ

ತೆಱದು ಪೆಱತೊರ್ವನಂ ಕೇಳೆಯುವಂ ತೆಗುಬ್ಬ ಮಹಿಶೂರ ದಱಕ್ಕೆ ಜೈಯ್ತ್ರಾಜೆ ಮಾರ್ಮಲೆತು ನಿಂದನೆನೆ, ಇವಂ ಮಲೆತವಂ ಸಿಲ್ಕುವನೆಂದೌತ್ಸುಕ್ಯದಿಂ ಪಡೆವಳಂಗಿದುಚಿತವೆಂಬುದುಮವಂ ಕಟ್ಟುಱದಿಂ ಪತ್ತೆಸಾರ್ಪ ಬಂದತ್ತಣಿಂ ತೇಲ್ದಪನೆನೆ, ಇವಂ ಕೈವಟ್ಟುವಂ ತಪ್ಪಿಸಿಕೊಂಡು ಪೋದನೆಂಬ ನಿರ್ವೇದದಿಂದಾರೆಯರ್ಮಹಾಮಾಯಾವಿಗಳೆಂಬುದುಂ ಮತ್ತಮವಂ ಕೊತ್ತತ್ತಿಯೂರೊತ್ತಿನೊಳೋಡುತ್ತಿರೆ ತಱಬಿ ಮಹಿಶೂರ ಭಟರಿಱದು ಕೆಡಪಿದರೆನೆ, ಇವಂ ಪಗೆ ಬಿಟ್ದನೆಂಬಾನಂದದಿಂ ನಾಡುಗರ್ಬ್ಬಿಟ್ದರೆಂದಂ. ಇದು ಪದ್ಯಾರ್ಥಂ.

ಇಲ್ಲಿ ಜೈತಜೆಯ ವೃತ್ತಾಂತಮಂ ಕೇಳ್ದವಂಗೌತ್ಸುಕ್ಯ ಧೈರ್ಯ ನಿರ್ವೇದಾನಂದಭಾವಂಗಳ್ ತಱವಾಯಿಂದೊಂದಱ ಮೇಲೊಂದು ಉದಿಸುವದು ಭಾವಶಬಲತ್ವಂ. ಇದು ಕವೀಶ್ವರನ ಪ್ರಭುವಿಷಯಮಾದ ಪ್ರೀತಿಭಾವಕ್ಕಂಗಮಾಗಿರ್ಪುದಱಂದಿದು ಭಾವಶಬಲಾಲಂಕಾರಂ.

---

೮. ಪ್ರತ್ಯಕ್ಷಾಲಂಕಾರಮೆಂಬುದು :—

“ಇಂದ್ರಿಯೈರರ್ಥನಿಷ್ಕರ್ಷಃ
ಪ್ರತ್ಯಕ್ಷಮಭಿಧೀಯತೇ ॥”

[ವೃತ್ತಿ] ಚಕ್ಷುರಾದೀಂದ್ರಿಯಂಗಳಿಂದೆ ಅರ್ಥಮಂ ನೆಲೆಗೆಯ್ವುದು ಪ್ರತ್ಯಕ್ಷಂ.

ಎಂತೆನೆ :—

ಕಂ॥ ಸತ್ತವರೊಡಲೊಟ್ಟಲೊಳಱ ।
ಸುತ್ತೆಯ್ಯೊಗ್ಗಿರ್ದೆರೆಯ ರಾಣಿ ಮೂಗಱದಿರೆಯಾ ॥
ನೆತ್ತರ್ದೊಡೆದು ನಿರೂಪಿಸಿ ।
ಮತ್ತಿನಿಯಂಗೆತ್ತ ಮೊಗದೆ ಮೊಗವಿಟ್ಟಿರ್ದ ॥೯

ಇದಱೊಳ್ ಮಹಿಶೂರ ಭಟರ್ ಅಱಿಕಲ್ಗಡಂ ಮುತ್ತಿದ್ದೈಯುಗ್ರ ಕೃಷ್ಣಪನಾಯಕನನಿಱಿದು ಕೆಡಪಿದರೆಂದು ಕೇಳ್ದವನ ಪೆಂಡಿರಾಪೆಣನನಱಸುತ್ತೆ ಕುಱುಪುಗೆಂಡು ಪಱಿವುಱಗಿಂ ಬಸಿದ ನೆತ್ತರ್ಮುಸುಂಕಿಪ್ಪುದಱಿಂ ಸಂದೆಯಂಗೊಂಡಾನೆತ್ತದೊರ್ಡೆದು ನಿರವಿಸಿ ನೆಲೆಗೆಯ್ದರೆಂಬುದಱಿಂದಿದು ಪ್ರತ್ಯಕ್ಷಾಲಂಕಾರಂ.

---

೯. ಅನುಮಾನಾಲಂಕಾರಮೆನೆ :—

"ಲಿಂಗಜ್ಞಾನಾತ್ಸಾಧ್ಯಸಿದ್ಧಿ
ರನುಮಾನಮಿಹೋಚ್ಯತೇ"

[ವೃತ್ತಿ] ನಲ್ಗುಱುಪಂ ಕಂಡುದಱಿಂ ತಿಳಿಯವೇಳ್ಪುದಂ ತಿಳಿವುದನುಮಾನಾಲಂಕಾರಂ.

ಎಂತೆನೆ :—

ಕಂ॥ ಇವರಱಿವಿಂತಿವರಾಪಿರ್ಗಂ ।
ತಿವರೆಳಸಿಂತಿವರ ಗೆಯ್ಮೆ ಮೆಯ್ಮೆಗಳಂತೆಂ ॥
ದವರಿಂಗಿತದಿಂ ತಿಳಿದಾ ।
ಪವಣಿಂದಾಳ್ಗೆಯ್ಮೆಗೊಂಬನವೃತಿವೀರಂ ॥೧೦

ಇದು ಅನುಮಾನಂ.

---

೧೦. ಉಪಮಾನಾಲಂಕಾರಮೆಂಬುದು :—

"ಯತ್ರಾತಿದೇಶವಾಕ್ಯಾರ್ಥ
ಸ್ಮರ್ತುಸ್ಸದೃಶದರ್ಶನಾತ್ ॥
ವಾಚ್ಯಸ್ಯಾರ್ಥಸ್ಯ ನಿಷ್ಕರ್ಷ
ಮುಪಮಾನಂ ವಿದುರ್ಬುಧಾಃ ॥"

[ವೃತ್ತಿ] ಒಂದು ವಸ್ತುವಿನ ಪೆಸರುಂ ಕೇಳ್ದವಸ್ತುವನಱಿಯದಿರ್ದ್ದವನಾವಸ್ತುವಿಂತಿರ್ಪ್ಪುದೆಂದು ತಿಳಿಪಿದವರ ನುಡಿಯೆಂಬತಿದೇಶವಾಕ್ಯದರ್ಥಮಂ ಮಱೆಯದೆ ಆಕುಱುಪಿನ ವಸ್ತುವಂ ಕಂಡಾಗಳೀವಸ್ತುವಿನದು ಈಪೆಸರೆಂದು ನಿಶ್ಚಯಂಗೆಯ್ವುದುಪಮಾನಾಲಂಕಾರಂ.

ಎಂತೆನೆ :—

ಕಂ॥ ಆವಂ ಖಳನಾರೆಯುರೊಳ ।
ಮಾವಂ ಕಲಿಯುಗದೊಳಿಂದ್ರಜಿತ್ತುವೆನಿಕ್ಕುಂ ॥
ಭಾವಿಸಿ ಜೈಯ್ತ್ರಜಿಯೆಂದಾ ।
ಗಾವಿಲನಂ ಕಡಿದು ಬಿಸುಡಿಮಪ್ರತಿಮಭಟರ್ ॥೧೧

ಇದಱೊಳ್ ಜೈಯ್ತ್ರಜಿಯೆಂನೊಂದು ನಾಡುಗರವನಂ ಕೊಲಿಸುವುದರ್ಕೆ ಮಹಿಶೂರಭಟರೊಡನೆ ಅವನ ಕುಱುಪಂ ಪೇೞ್ದುದಱಿಂದವರುಮಾಕುಱುಪುಳ್ಳವನಂ ಕಂಡಿವನೇ ಜೈಯ್ತ್ರಜಿಯೆಂದು ನೆಲೆಗೆಯ್ದು ಪೊಯ್ದುದಱಿಂದಿದುಪಮಾನಾಲಂಕಾರಂ.

---

೧೧. ಶಬ್ದಾಲಂಕಾರಮೆನೆ :—

« ಸಶಬ್ದೋಯತ್ರ ವಾಕ್ಯೇನ
ಭವೇದರ್ಥಸ್ಯ ನಿರ್ಣಯಃ ॥ »

[ವೃತ್ತಿ] ಆಪ್ತವಾಕ್ಯದಿಂದರ್ಥಮಂ ನಿಶ್ಚಯಿಪ್ಪುದು ಶಬ್ದಾಲಂಕಾರಂ.

ಎಂತೆನೆ :—

ಕಂ॥ ಆರಯೆ ಕಾಲಕೆ ರಾಯಂ ।
ಕಾರಣಮೆಂದೊರೆವ ಶಾಸ್ತ್ರವಚನಕ್ರಮದಿಂ ॥
ವೀರಚಿಕದೇವನರಪತಿ ।
ಧಾರಿಣಿಯಂ ಪೊರೆಯೆ ಕಲಿಯೊಳಾದತ್ತು ಕೃತಂ ॥ ೧೨

ಇದಱೊಳ್ ಚಿಕದೇವಮಹಾರಾಯಂ ಧರ್ಮದಿಂ ರಾಜ್ಯಪರಿಪಾಲನಂಗೆಯ್ವುದಱಿಂ ಕಲಿಯುಗಂ ಕೃತಯುಗಮೆನಿಸಿತೆಂಬ ಅರ್ಥಮಂ "ರಾಜಾ ಕಾಲಸ್ಯ ಕಾರಣಂ" ಎಂಬ ಭಾರತವಚನದಿಂ ನಿಶ್ಚಯಂಗೆಯ್ವುದಱಿಂದಿದು ಶಬ್ದಾಲಂಕಾರಂ.

---

೧೨. ಅರ್ಥಾಪತ್ತ್ಯಲಂಕಾರಮೆನೆ :—

" ಯತ್ರ ದೃಷ್ಟಶ್ರುತಾರ್ಥಾ
ಭ್ಯಾಮನ್ಯಥಾನುಪಪತ್ತಿತಃ ॥
ಅರ್ಥಾಂತರಂ ಕಲ್ಪ್ಯತೇ ಸಾ
ವರ್ಥಾಪತ್ತಿರಲಂಕೃತಿಃ ॥ "

[ವೃತ್ತಿ] ಕಂಡುದಾದೊಡಂ ಕೇಳ್ದುದಾದೊಡಮೊಂದು ವಸ್ತು ಪೆಱತೊಂದು ವಸ್ತುವಿಲ್ಲದೆ ಕೂಡದೆಂಬುದಱಿಂದಾಪೆಱತೊಂದು ವಸ್ತುವಂ ಕಲ್ಪಿಪುದರ್ಥಾಪತ್ತ್ಯಲಂಕಾರಂ.

ಎಂತೆನೆ :—

ಕಂ॥ ನರಪತಿ ಚಿಕದೇವೇಂದ್ರಂ ।
ಪರಿಕಿಸೆ ಹರಿಯಂಶಮಕ್ಕುಮಂತಲ್ಲದೊಡೀ ॥
ಗರುಡಧ್ವಜಮುಂ ಸುರಭೂ ।
ಸುರರಿಪುಶಿಕ್ಷಾಧಿಕಾರಮುಂ ಸುಮನಿಕುಮೇ! ॥೧೩

ಇದಱೊಳ್ ಚಿಕದೇವರಾಯನ ಗರುಡಧ್ವಜಮುಂ ಸುರಭೂಸುರವೈರಿಶಿಕ್ಷಾಧಿಕಾರಮುಂ ಕಂಡು ಇದು ವಿಷ್ಣ್ವಂಶಮಲ್ಲದೊಡೆ ಕೂಡದೆಂಬುದಱಿಂ ವಿಷ್ಣ್ವವತಾರಮೆಂದು ನಿರ್ಣಯಿಪುದಱಿಂದಿದು ಅರ್ಥಾಪತ್ತ್ಯಲಂಕಾರಂ.

---

೧೩. ಅನುಪಲಬ್ಧ್ಯಲಂಕಾರಮೆಂಬುದು :—

" ಅರ್ಥೋಪಲಬ್ಧ್ಯಭಾವೇನ
ಯತ್ರಾರ್ಥಾಬಾಧನಿಶ್ಚಯಃ ॥
ತಮೇವಾನುಪಲಬ್ಧ್ಯಾಖ್ಯ
ಮಲಂಕಾರಂ ಪ್ರಚಕ್ಷತೇ ॥ "

[ವೃತ್ತಿ] ಒಂದು ವಸ್ತುವನೊಂದೆಡೆಯೊಳ್ ಕಾಣದಿರ್ದುದಱಿಂದಾವಸ್ತುವಲ್ಲಿಲ್ಲೆಂದು ನಿಶ್ಚಯಿಪುದುನುಪಲಬ್ಧಿಯೆನಿಪುದು.

ಎಂತೆನೆ :—

ಕಂ॥ ಪ್ರತಿಯೆನಿಸುವ ನೃಪತಿಯನೀ ।
ಕ್ಷಿತಿಯೊಳ್ ತಾಮಱಸಿಯಱಸಿ ಕಾಣದುದಱಿನ ॥
ಪ್ರತಿಮಂ ನೀನೆಂಬುದನೇ ।
ಕೃತಿಗಳ್ನೆಲೆಗೆಯ್ದರಿಂದು ಚಿಕದೇವೇಂದ್ರಾ ॥೧೪

ಇದಱೊಳ್ ನಿರೂಪಕರ್ ಜಗದೊಳ್ ಚಿಕದೇವರಾಯಂಗೆ ಪಡಿಯಂ ಕಾಣದೆ ಪಡಿಯಿಲ್ಲೆಂದು ನೆಲೆಗೆಯ್ದುದಱಿಂದಿದು ಅನುಪಲಬ್ಧ್ಯಲಂಕಾರಂ.

---

೧೪. ಸಂಭವಾಲಂಕಾರಮೆಂಬುದು :—

" ವಸ್ತು ಸಂಭಾವ್ಯತೇ ಯತ್ರ
ಸಂಭವಾಲಂಕೃತಿಸ್ತು ಸಾ ॥ "

[ವೃತ್ತಿ] ಈವಸ್ತುವಿಂತಾಗವೇಳ್ಪುದೆಂದು ತಿಳಿವುದು ಸಂಭವಾಲಂಕಾರಂ.

ಎಂತೆನೆ :—

ಕಂ॥ ಭವಭೂತಿ ತನ್ನವೊಲ್ ಕವಿ ।
ಭುವನದೊಳೆತ್ತಾನುಮೊರ್ವನುದಿಸುವನೆಂದಂ ॥
ವಿವರಿಸಿಯುವನಂ ತಿಳಿವೊಡೆ ।

ಸವನಿಕುಮಪ್ರತಿಮವೀರನರಪತಿಯೊರ್ವಂ ॥೧೫

ಇದಱೊಳ್ "ಉತ್ಪತ್ಸ್ಯತೇ ಮಮತು ಕೋಽಪಿ ಸಮಾನಧರ್ಮಾ" ಎಂದು ಕಾಲಂ ನಿರವಧಿಕವಾಗಿಯುಂ ದೇಶಂ ವಿಶಾಲವಾಗಿಯುಮಿರ್ಪು ದಱಿಂದೆತಾನ್ತುವೊರ್ವಂ ತನ್ನ ಸಾಹಿತ್ಯರಸಮನಱಿವಂ ಸಂಭವಿಸುವ ನೆಂದು ಪೇೞ್ದಂ. ಅಂತಪ್ಪ ರಸಿಕನಿವನೆಂದು ಕುಱುಪುಗೊಂಬೆಡೆಯೊಳ್ ಚಿಕದೇವಮಹಾರಾಯನೊರ್ವನೆ ಸಮನಿಕುಮೆಂದು ಪದ್ಯಾರ್ಥಂ.

ಇದಱೊಳೆತಾನ್ತುವೊರ್ವನುದಿಸುವನೆಂಬುದಱಿಂದಿದು ಸಂಭವಾಲಂಕಾರಂ.

---

೧೫. ಐತಿಹ್ಯಾಲಂಕಾರಮೆನೆ:—

"ಪರಂಪರಾ ಪ್ರವಾದಾನಾ
ಮನಿರ್ದಿಷ್ಟಪ್ರವಕ್ತೃತಾ ॥
ವೃಕ್ಷೇತ್ರಯಕ್ಷ ಇತ್ಯಾದಿ
ರೈತಿಹ್ಯಾಲಂಕೃತಿಸ್ತು ಸಾ ॥"

[ವೃತ್ತಿ] ಮೊದಲೊಳ್ ಪೇೞ್ದವನಿವನೆಂದು ಕುಱುಪಿಲ್ಲದೆ ಒರ್ವರಿಂದೊರ್ವರ್ ಕೇಳ್ದು ನುಡಿದೊಡದೈತಿಹ್ಯಾಲಂಕಾರಂ.

ಎಂತೆನೆ:—

ಕಂ॥ ಆವಿಷ್ಣುವಂಶದೊಳುದಿಸಿದ।
ಭೂವರನಪ್ರತಿಮವೀರನಾಳ್ದಪನದಱಿಂ ॥
ಜೀವಂತಮೇತಿಶುಭಮೆಂ।
ಬೀವಾರ್ತೆಯೆ ಸತ್ಯಮೆನಿಸಿತಖಿಳಜಗಕ್ಕಂ ॥೧೬ 20

ಇದಱೊಳ್ "ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ" ಎಂಬೈತಿಹ್ಯದರ್ಥಮನನುವದಿಪ್ಪುದಱಿಂದಿದೈತಿಹ್ಯಾಲಂಕಾರಂ.

ಇಂತೆವೆಣ್ಬಂ ಪ್ರಮಾಣಾಲಂಕಾರಂಗಳ್.

ಇಂತೊಂದೊಂದಲಂಕಾರಂಗಳ್ಗೆ ಲಕ್ಷಣೋದಾಹರಣಂಗಳಂ ಬೇಱೆವೇಱೆ ಪೇೞ್ದು ಬೞಿಕ್ಕೆ ಪಲವುಮಲಂಕಾರಂಗಳ ಬೆರಕೆಗಳ ಬಗೆಯಂ ಪೇೞ್ವಂ. ಆಬೆರಕೆ ೧. ಸಂಸೃಷ್ಟಿಯೆಂದುಂ, ೨. ಸಂಕರಮೆಂದುಮೆರಡುಂ ತೆಱಂ.

೧. ಸಂಸೃಷ್ಟಿಯೆನೆ :—

" ಸ್ಫುಟಭೇದಾವಲಂಕಾರೌ
ವೇಕತ್ರ ಭವತೋ ಯದಿ ॥
ಅಲಂಕಾರಸ್ವರೂಪಜ್ಞಾ
ಸ್ಸಂಸೃಷ್ಟಿಂ ತಾಂ ಪ್ರಚಕ್ಷತೇ ॥ "

[ವೃತ್ತಿ] ಸ್ಫುಟಮಾದ ಭೇದಂಗಳನುಳ್ಳ ಅಲಂಕಾರಂಗಳ್ ಬೆರದಿರೆ ಸಂಸೃಷ್ಟಿಯೆನಿಪುದು.

ಎಂತೆನೆ :—

ವೃ॥ ಧರೆ ಸೊಂಪೇಱೆ ಧರಾಮರರ್ ಪದಪಿನಿಂ ಪೆಂಪೇಱೆ ವಿದ್ವಜ್ಜನಂ।
ನೆರೆದಿಂಪೇಱೆ ಪೊದಳ್ದು ಬೀರವಡೆಗಳ್ಬಣ್ಪೇಱೆ ಮುಂ ಪೊರ್ದಿದರ್॥
ಪಿರಿದುಂ ಪೊಂಪುೞಿಯೇಱೆ ಪಟ್ಟವಣೆಯುಂ ತಾನೇಱಿದಂ ಸದ್ಗುಣಾ। ಕರನಂತೆಂಬರ ಗಂಡನಿಂದು ಚಿಕದೇವೇಂದ್ರಂ ಮಹೇಂದ್ರೋಪಮಂ ॥೧೩

ಇದಱೊಳ್ ಪಟ್ಟವಣೆಯೇಱುವುದೆಂಬ ಕಾರಣಮುಂ ಧರೆ ಸೊಂಪೇಱುವುದು ಮುಂತಾದ ಕಾರ್ಯಂಗಳುಮೊಂದೇ ವೇಳೆಯೊಳಾದುವೆಂದು ಪೇೞ್ವುದಱಿಂದೆ ಅಕ್ರಮಾತಿಶಯೋಕ್ತಿಯೆಂಬರ್ಥಾಲಂಕಾರಮುಂ, ಸೊಂಪು ಪೆಂಪೆಂಬಿವು ಮುಂತಾದೆಡೆಯೊಳ್ ವೃತ್ತ್ಯನುಪ್ರಾಸಮೆಂಬ ಶಬ್ದಾಲಂಕಾರಮುಂ ಬೆರದಿರ್ಪುದಱಿಂದಿದು ಸಂಸೃಷ್ಟಿಯೆನಿಪುದು.

ಮತ್ತಂ,

ಕಂ॥ ಅಂಜುವರವ್ರತಿಮಂಗಾ ।
ತಂಜಾವೂರ್ ಚೆಂಜಿ ಮಧುರೆ ಶೀರೆಯ ದೊರೆಗಳ್ ॥
ಕುಂಜರಕಿದಿರ್ಚುವಜದಂ ।
ತೇಂ ಜಡನಿದಿರಾಂತು ಮುಱಿದನಿರ್ಕೇರಿಯುವಂ ॥೧೪

ಇದಱೊಳ್ ಕುಂಜರಕಿದಿರ್ಚುವಜದಂತೆ ಎಂಬೆಡೆಯೊಳುಪಮಾಲಂಕಾರಮುಂ, ಇರ್ಕೇರಿಯುವನೆಂಬೆಡೆಯೊಳೆರಡುಂ ಕೇರಿಯುವನೆಂದು ಸಾಭಿಪ್ರಾಯವಿಶೇಷ್ಯಮುಂ ಪೇೞ್ದುದಱಿಂ ಪರಿಕರಾಂಕುರಾಲಂಕಾರಮುಂ ಎಂಬೆರಡುಮರ್ಥಾಲಂಕಾರಂಗಳ್ ಸ್ಫುಟಭೇದಂಗಳಾಗಿ ಬೆರದಿರ್ಪುದಱಿಂದಿದುವುಂ ಸಂಸೃಷ್ಟಿಯೆನಿಪ್ಪುದು.

ಮತ್ತಂ,

ಕಂ॥ ತೆಱಬಿ ಮಹಿಶೂರವರ್ ಪೊ ।
ಯ್ದಿಱಿದರ್ ಮಹಿಶೂರರೆನಿಸಿ ಮಲೆನಾಡುಗರಂ ॥
ಮುಱಿದೋಡಿ ಕೆಳದಿಯುವರುಂ ।
ಮೊಱೆದರ್ಕೆಳದಿಯರ ತೆಱದ ಕೆಳೆತನದೊಳ್ಪಂ ॥೧೫

ಇದಱೊಳ್ ತೆಱಬಿ ಇಱಿದರ್ ಎಂಬಿವು ಮುಂತಾದೆಡೆಗಳೊಳನುಪ್ರಾಸಮೆಂಬ ಶಬ್ದಾಲಂಕಾರಮುಂ, ಮಹಿಶೂರ ಮಹಿಶೂರ, ಕೆಳದಿಯ ಕೆಳದಿಯ ಎಂಬೆಡೆಗಳೊಳ್ ಯಮಕಮೆಂಬ ಶಬ್ದಾಲಂಕಾರಮುಂ ಎರಡುಂ ಸ್ಫುಟಭೇದಂಗಳಾಗಿ ಬೆರದಿರ್ಪುದಱಿಂದಿದುವುಂ ಸಂಸೃಷ್ಟಿಯೆನಿಪ್ಪುದು.

ಇಂತಿವು ಮೂಱುಂ ಸಂಸೃಷ್ಟಿಗಳ್.

ಸಂಕರಮೆಂಬುದು :—

" ಅಲಂಕೃತೀನಾಮಸ್ಪಷ್ಟ
ಭೇದಾನಾಂ ಯತ್ತು ಮೇಳನಂ ॥
ಸ ಸಂಕರಸ್ತಸ್ಯ ಭೇದಾ
ಶ್ಚತ್ವಾರಸ್ಸಮುದಾಹೃತಾಃ ॥ "

[ವೃತ್ತಿ] ಅಸ್ಪಷ್ಟಭೇದಂಗಳಾದಲಂಕಾರಂಗಳ ಬೆರಕೆ ಸಂಕರಮೆನಿಪ್ಪುದು. ಅದು 1. ಅಂಗಾಂಗಿಸಂಕರಮೆಂದುಂ, 2. ಸಮಪ್ರಧಾನಸಂಕರಮೆಂದುಂ, 3. ಸಂದಿಗ್ಧಸಂಕರಮೆಂದುಂ, 4. ಏಕವಾಚಕಾನುಪ್ರವಿಷ್ಟಸಂಕರಮೆಂದುಂ ನಾಲ್ಕುಂ ತೆಱಂ.

ಇವಱೊಳ್,

1. ಅಂಗಾಂಗಿಸಂಕರಮೆನೆ :—

" ಉಪಜೀವ್ಯಂ ಯತ್ತದಂಗ
ಮಂಗಿಸ್ಯಾದುಪಜೀವಕಂ ॥
ಉಭಯೋರ್ಮೇಳನಂ ಯತ್ರ
ಸ ಸ್ಯಾದಂಗಾಂಗಿಸಂಕರಃ ॥ "

[ವೃತ್ತಿ] ಆವಲಂಕಾರಂ ತೋಱಿದುದಱಿಂ ಪೆಱತೊಂದಲಂಕಾರಂ ಬೞಿಕ್ಕೆ ತೋರ್ಪುದು ; ಇದಱೊಳ್ ಮೊದಲ್ ತೋಱಿದಲಂಕಾರಮುಪಜೀವ್ಯಮಾಗಿರ್ಪುದಱಿಂದಂಗಮೆನಿಪ್ಪುದು; ಬೞಿಕ್ಕೆ ತೋಱಿದಲಂಕಾರಮುಪಜೀವಕಮಾಗಿರ್ಪುದಱಿಂದಂಗಿಯೆನಿಪ್ಪುದು ; ಇವೆರಡುಂ ಬೆರೆದಿರೆಯದು ಅಂಗಾಂಗಿಸಂಕರಂ.

ಎಂತೆನೆ :—

ಕಂ॥ ಮುತ್ತಿನ ಸರಮುಂ ಕೆಂದಳ ।

ದೊತ್ತಿನೊಳಟ್ಟೆಱಗಿ ನಿನಗೆ ಸಾಮಂತನೃಪರ್ ‖
ಮತ್ತದನೆ ಪದ್ಮರಾಗಂ ।
ಗೆತ್ತಚ್ಚರಿವಡುವರಿಂದು ಚಿಕದೇವೇಂದ್ರಾ ‖೭೦

ಇದಱೊಳ್ ತದ್ಗುಣಾಲಂಕಾರಂ ತೋಱಿದ ಬೞಿಕ್ಕದನವಲಂಬಿಸಿ ಭ್ರಾಂತಿಮದಲಂಕಾರಂ ತೋರ್ಪುದಱಿಂದಿದಂಗಾಂಗಿಸಂಕರಂ.

2. ಸಮಪ್ರಧಾನಸಂಕರಮೆಂಬುದು :—

" ಯತ್ರಾಂಗಿನೋರ್ಮಿಥಶ್ಶೋಭಾ
ಕರಯೋರಂಗತೋ ಭವೇತ್ ‖
ಪ್ರತೀತಿರ್ಯುಗಪತ್ತತ್ರ
ಸಮಪ್ರಾಧಾನ್ಯಸಂಕರಃ ‖ "

[ವೃತ್ತಿ] ಅಂಗವಾದೊಂದೊಂದಲಂಕಾರದಿಂ ತಮ್ಮೊಳ್ ತಾಮೊಂದರ್ಕೊಂದಱ ಶೋಭೆಗೆ ಕಾರಣಂಗಳಾಗಿ ಸಮಪ್ರಧಾನಂಗಳಾದೆರಡುಮಲಂಕಾರಂಗಳೊಂದೇ ವೇಳೆಯೊಳ್ ತೋಱುವುದು ಸಮಪ್ರಾಧಾನ್ಯಸಂಕರಂ.

ಎಂತೆನೆ :—

ವೃ॥ ಬಿನಯದ ಬಿತ್ತು ಬಿನ್ನಣದ ಪೆರ್ಮೊಳೆ ಬಿಜ್ಜೆಯ ಬೇರ್ ವಿವೇ
ಕದೊ।ಳ್ಗೊನರನುಗೆಯ್ತದೊತ್ತರದ ದಾಂಗುಡಿ ನಲ್ಮೆಯ ಮೊಲ್ದ
ಳರ್ ಜನಾ॥ನುನಯದ ಮೊಗ್ಗು ನನ್ನಿಯಲರಾರ್ಪಿನ ಕಾಯನುಮಾ
ತುಮಣ್ಣು ಬಿ।ಣ್ಗೊನೆಯೆನೆ ಚಿಕ್ಕದೇವನೆಸೆದಂ ಗುಣಸಾಂದ್ರನುಪೇ
ನ್ದ್ರವೈಭವಂ ‖೭೧

ಇದಱೊಳ್ ಬಿನಯದ ಬಿತ್ತೆಂಬಿವು ಮೊದಲಾದ ವ್ಯಸ್ತರೂಪಕದಿಂ ರತ್ನಾವಲ್ಯಲಂಕಾರಮುಂ, ಉಲ್ಲೇಖಾಲಂಕಾರಮುಂ ತೋರ್ಪುದಱಿಂದಿದು ಸಮಪ್ರಧಾನಸಂಕರಂ.

೩. ಸಂದಿಗ್ಧಸಂಕರಮೆನೆ :—

" ಯತ್ರಾನ್ಯೋನ್ಯೋಪಮರ್ದೇನ
ಕವಿಚ್ಛಂದಾನುರೋಧತಃ ||
ಸಂಭಾವಿತಾವಲಂಕಾರೌ
ತತ್ರ ಸಂದಿಗ್ಧಸಂಕರಃ || "

[ವೃತ್ತಿ] ಕವಿಯ ಅಭಿಪ್ರಾಯಮೊಂದು ತೆಱನಾದೊಡದರ್ಕನುಗುಣಮಾಗಿಯೊಂದಲಂಕಾರಂ ತೋಱುವುದುಂ, ಅಭಿಪ್ರಾಯಂ ಪೆಱತೊಂದು ತೆಱನಾದೊಡಮದರ್ಕನುಗುಣಮಾಗಿ ಮುಂ ತೋಱಿದಲಂಕಾರಮಂ ಮೆಟ್ಟಿ ಪೆಱತೊಂದಲಂಕಾರಂ ತೋಱುವುದುಮಾಗಿರೆಯದು ಸಂದಿಗ್ಧಸಂಕರಂ.

ಎಂತೆನೆ :—

ಕಂ|| ಸಮದೃಷ್ಟಿಯೆನಿಸೆ ಶಂಕರ |
ನಮರೇಂದ್ರಂ ಗೋತ್ರವೈರಮಂ ಕಳೆದಿರೆ ಚಂ ||
ದ್ರಮನಮಲನೆನಿಸೆ ನಿನ್ನೊಳ್ |
ಸಮಮೆನಿಸಲ್ಕಾರ್ಪರಂದು ಚಿಕದೇವೇಂದ್ರಾ ||೨೨

ಇದಱೊಳ್ ಶಂಕರಾದಿಗಳ್ಗೆ ಸಮದೃಷ್ಟಿತ್ವಂ ಮುಂತಾದ ಗುಣಂಗಳ್ ದೊರೆಕೊಂಡಿರ್ದೊಡಂನಿಂಗೆ ಸರಿಯೆನವರ್ಪರ್ದೆಂದು ಕವಿಗಭಿಪ್ರಾಯಮಾದೊಡೆ ಸಂಭಾವನಾಲಂಕಾರಮಕ್ಕುಂ. ಅಂತಲ್ಲದೆ ಶಂಕರಾದಿಗಳ್ಗೆ ಸಮದೃಷ್ಟಿತ್ವಂ ಮುಂತಾದ ಗುಣಂಗಳೆಂದೆಂದುಂ ದೊರಕೊಳ್ಳದುದಱಿಂದೆಂದೆಂದುಂ ಸರಿವರಲಾಱರೆಂದು ಕವಿಗಭಿಪ್ರಾಯಮಾದೊಡೆ ಮಿಥ್ಯಾಧ್ಯವಸಿತಾಲಂಕಾರಮೆನಿಕ್ಕುಂ. ಇಂತೊಂದೊಂದಲಂಕಾರಂ ಪೆಱತೊಂದಲಂಕಾರಮಂ ಮೆಟ್ಟಿ ತೋರ್ಪೆರಡಱೊಳ್ ನಿಶ್ಚಯಂ ಪುಟ್ಟದಿ

ವುದಱಿಂದಿದು ಸಂದಿಗ್ಧಸಂಕರಂ.

4. ಏಕವಾಚಕಾನುಪ್ರವಿಷ್ಟಸಂಕರಮೆಂಬುದು :—

" ಮಿಥಶ್ಯೋಽಭಾವತೋ ಯತ್ರ
ಪ್ರತೀಯೇತಾಮಲಂಕೃತೀ ॥
ತತ್ರೈಕವಾಚಕಾನುಪ್ರ 5
ವಿಷ್ಟಸಂಕರ ಇಷ್ಯತೇ ॥ "

[ವೃತ್ತಿ] ಆವೆಡೆಯೊಳೆರಡುಮಲಂಕಾರಂಗಳ್ ಮುಂ ಪಿಂ ತೋಱುವುದೆಂಬ ಅಂಗಾಂಗಿಭಾವಮುಂ ಒಂದು ಪೆಱತೊಂದಂ ಪೊಱಸುತ್ತೆ ನೆಲೆಯಿಲ್ಲದಿರ್ಪ ಸಂದೇಹಮುಂ ಪೆಱತೊಂದಲಂಕಾರಕ್ಕಂಗಿಗಳಾಗಿರ್ಪ ಸಮಪ್ರಾಧಾನ್ಯಮುಮಿಲ್ಲದೆ ಎಲ್ಲೆಡೆಯೊಳಂ ತೋಱುಯುದು ಏಕವಾಚಕಾನುಪ್ರವಿಷ್ಟಸಂಕರಂ. 11

ಎಂತೆನೆ :—

ವೃ॥ ಶ್ರುತಿಯುಂ ಕಾಪಿಟ್ಟು ಗೋತ್ರೋನ್ನತಿಯನೆಸಗಿ ಮಾಸಿಂಗಮಂ
ಪೋಲ್ತುಗಾಢೋ[1]ನ್ನತಿಯಿಂ ವಿಕ್ರಾಂತಿಗೆಯ್ದಾಕ್ರಮಿಸಿ ವಸು
ಧೆಯಂ ದುಷ್ಟರಾಜನ್ಯರಂ ಗೆಲ್ದತಿಮಾತ್ರಂ ಧಾರ್ಮಿಕಂ ತಾನೆನಿಸಿ
ಯದುಕುಲೌನ್ನತ್ಯಮಂ ಪೊರ್ಮಿಸುತ್ತಂ ಪ್ರತಿಮಂ ಲೋಕೈಕವೀ
ರಂ ಬಗೆವುಗೆ ಕಲಿಯುಂ ತೂಳ್ದ ಸಾಮ್ರಾಜ್ಯವಾಳ್ಗಂ ॥೭೩

ಇದಱೊಳ್ ಪ್ರಕೃತವಾದ ರಾಜವರ್ಣ್ಣನದೊಳ್ ವಿಶೇಷಣಾದಿಸಾಮ್ಯದಿಂದಪ್ರಕೃತವಾದ ಭಗವದ್ವ್ಯಾಪಾರಂ ತೋಱುವುದಱಿಂ ಸಮಾಸೋಕ್ತಿಯುಂ ಪತ್ತುಂ ಭಗವದವತಾರಂಗಳ್ ಕ್ರಮದಿಂ ತೋಱು

[1] ಗಾಢೋದ್ಧತಿಯಿಂ.

ದಱಿಂ ರತ್ನಾವಳಿಯುಮೆಂಬೆರಡುಮಲಂಕಾರಂಗಳೊಂದೇ ಪದ್ಯದೊಳಿ ರ್ಪುದಱಿಂದಿದು ಏಕವಾಚಕಾನುಪ್ರವಿಷ್ಟಸಂಕರಂ.

ಇಂತು ಸಂಕರಂ ನಾಲ್ಕುಂ ತೆಱಂ.

---

ಇದು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪನಪ್ರತಿಮವೀರ ನರಪತಿ ಶ್ರೀಚಿಕದೇವಮಹಾ ರಾಜ ಕೃಪಾಪರಿಪಾಲಿತ ಶ್ರೀತಿರುಮಲಾರ್ಯ ವಿರಚಿತಮಪ್ಪ ಶ್ರೀಮದಪ್ರತಿಮವೀರಚರಿತಮೆಂಬ ಅಲಂಕಾರಗ್ರಂಥದೊಳ್ ನವೀನಾಲಂಕಾರಾದಿ ನಿರೂಪಣಂ,

ಚತುರ್ಥಪ್ರಕರಣಂ ಸಂಪೂರ್ಣಂ.

ಅಪ್ರತಿಮವೀರಚರಿತಾಲಂಕಾರಂ ಸಮಾಪ್ತಂ.

# ಪದ್ಯಾನುಕ್ರಮಣಿಕೆ.

( * ಇಲ್ಲಿ ಸಂಖ್ಯೆಗಳು ಪುಟಸಂಖ್ಯೆಗಳು )


(ಅ)

ಅಂಗಱಿಯದೆ . . . ೧೦೯
ಅಂಜುವರಪ್ರತಿಮಂಗಾ ೬೭,೧೫೮
ಅಂಜನೆಯಣುಗಂ . . . ೫೩
ಅಂದರಸುಗೆಯ್ಮೆಯೊಳ್ . ೧೧೯
ಅಂದವಿಗೋಪರ್ಬೈಸೆ . . ೧೬
ಅಂದಾತ್ಮಾನಂ . . ೩೫
ಅಂದಿವನಿನಳ್ಕಿಭಯದಿಂವೆ . ೧೦
ಅಕ್ಕರವೋದುವಂದೆ . . ೩೦
ಅಕ್ಕರಿಗರೆರ್ದೆಗೆ . . . ೩
ಅಡರ್ವರ್ದ್ರಾಂ ಮೇರುಶೃಂಗಕ್ಕೆ . ೭೮
ಅಡವಿರಿಸಿ ಮಕ್ಕಳಂ . . . ೧೧೧
ಅಡಸಿದ ಜಡತನ . . . ೫೧
ಅನಿಬರ್ನಲ್ಲಬ್ಬಿಗರೊಳಂ . . ೩
ಅನುಗೆಟ್ಟೃಗೂರಾಣ್ಮನ . . ೯೧
ಅನುಗೆಯ್ಮೆಯೊನಱಂ . ೯೫
ಅನುವಱಿತಖಿಲಪ್ರಜೆ . ೫೬
ಅಮರ್ದುರ್ಗಗೊರಲೇಸರಂ . . ೮೩
ಅರಸನ್ನೇಹಿಗನೊಲ್ಮೆಗಂ . . ೧೮
ಅಱವಿಂದಂ ತೆಟ್ಟು . . ೭
ಅಳಿಗಳ್ತಾವರೆಗೆತ್ತು . ೮೬
ಅಱಿಕೆಲ್ಲೊಡಂ ಕೊಂಡವರ್ . ೬೨
ಅಱಿಕೆಲೂಡೆಂದೇ . . ೩೧
ಅಱಿದುದು ಮೂಗೆಸವಂತಂಗೆ . ೫೯

(ಆ)

ಆಕೃಷ್ಣವಂಶ . . . ೧
ಆದೊಡದೇವೇಂದ್ರ . . ೨
ಆನಂದೈಕರಸಂ . . ೯
ಆಯುಮೆನಭಿಮತ . . . ೨೦
ಆರಕ್ಕಸಬಿಂದಂ . . . ೮೯
ಆರಯಿ ಕಾಲಕೆ ರಾಯಂ . ೧೮೯
ಆರಯ್ಚಿಕದೇವೇಂದ್ರನ . . ೫೮
ಆಲಿಸಿ ಚಿಕದೇವಕ್ಷ್ಮಾಪಾಲನ . ೭೯
ಆವಂ ಖಳನಾರಯರೊಳ್ . ೧೮೯
ಆವಂಶದತಿಶಯ . . ೧
ಆವನ ಪೊಡೆಯಿಡೆಯೊಳ್ . . ೯೦
ಆವಿಷ್ಣುವಂಶದೊಳ್ . . ೧೫೨
ಆವೇಳೆ ಚೆನ್ನಬಸವಂ . . ೧೩೦

(ಇ)

ಇಂತಿರ್ಕುರ್ಗಂ ನಳ . . ೩೯
ಇಂತೆಣ್ದೆಸೆಗೆಲ್ದು . . . ೨
ಇಂದ್ರಾದಿಗಳೊಡನೆ . . ೫೭
ಇಕ್ಕಿದ ಪಕ್ಕರಕ್ಕೆ . . . ೧೩೩
ಇದಿರಾಂತೆ ಸಂಬು . . . ೮೩
ಇದೆಬಂದರ್ ಮಹಿಶೂರವರ್ ೧೩೮
ಇನ್ನಿದಕೆಣೆಯಿಲ್ಲೆಂಬ . . ೧೩೯
ಇರದೊಱಿಮಾಲಿನೀರ್ಯೊನಲಿಂ . ೬೯
ಇರವಂ ತಿಳಿದು . . . ೮

ಇರವಱಿಯದೆಲ್ಲನಾಡೊಳ್ . ೮೬
ಇವರಱಿವಿಂತಿವರಾರ್ಪಿಂತು . ೧೪೮

(ಈ)

ಈಜಗತಿ ಪಿಂತೆ . . . . ೧೩
ಈತೆಱವಿರುತಿರೆ . . . . ೨
ಈರೋಡುಗೋಂಟೆಯುಂ . ೧೪೫

(ಉ)

ಉದಿಸಿ ಚಿಕದೇವ ... ೬೮

(ಎ)

ಎರಡುಂ ತಟ್ಟಿನ ಬಾಣದ ... ೮೩
ಎಲೆಗೇ ನಿಲ್ ತಲೆವಾಲದಾಕೆ . ೨೫
ಎಲೆಲೆ ಮರಾಟರಿರಾ . ೧೩೭
ಎಲೆಲೇ ರಾವುತ ನಿಲ್ . ೧೪೪

(ಏ)

ಏತೆಱದವರೊಡನಾಡುವರ್ . ೧೨೦
ಏನೆಮಗಾಬಾಂಬಸುವಿಂ . ೪೧

(ಐ)

ಐಗೂರರಸನ ಪೆಂಡಿರ . ೧೧೯

(ಒ)

ಒಂದು ಕಡೆಯೊಳ್ . . . ೬
ಒಂದೇ ತಾನವಿಂತಿನ್ನಿದರ್ಕೆ . ೨೩
ಒಂದೊಂದುಂ ದೊರೆತನದೊಳ್ . ೧೭
ಒಡಲೊಳ್ವೊತ್ತಪನಾವ . ೪೫
ಒರ್ವಗೆಯೊಂದಾನೆಯು . ೭೩
ಒರ್ವನೆ ಪದಿನಾಲ್ಕುಂ . ೪೧
ಒಲಿಯುತೆ ಲೀಲೆಯೊಳ್ . ೬

(ಓ)

ಓಲಗಿಸುವರೆರ್ದೆಬಜ್ಜರ . ೧೩೪

(ಕ)

ಕಂಡಪೆನಖಂಡಧರಣೀ . ೯೩
ಕಂದಂ ಕವಿಕೋಕಿಲ . ೨೯
ಕಟ್ಟಿದದಟ್ಟಿ ಕೈದಳೆದ . . ೨೧
ಕಡುಗಲಿ ಚಿಕದೇವೇಂದ್ರನ . ೧೧೨
ಕಡುಬಡವಾದುದವ್ವೆ . ೧೪೩
ಕಡುಮುನಿಸಿಂದಪ್ರತಿಮಂ . ೧೨೫
ಕಡೆಗಣ್ಣೊಳ್ಸಿರಿ ನಿಲ್ಕೆ . ೪೨
ಕತ್ತರಿಸಿ ನೆತ್ತಿದೊವಲಂ . ೧೩೧
ಕತ್ತಿಯ ಬೆಳಕಿಂ . . ೯೪
ಕನ್ನಡನಾಡೊಳ್ಪ್ರಜೆ . ೧೨೧
ಕನ್ನಡನಾಡೊಳ್ಬೆಳಸುಗಳ್ . ೧೧೪
ಕಬ್ಬದ ಲಕ್ಕಣವುಂ . ೩
ಕರಕರೆಯೇಕೆ . . ೨೩
ಕಲಿದೋಷಂ ತಟ್ಟದವೊಲ್ . ೫೨
ಕ್ರಮವಱಿಯದೆಸವಿದ . ೮೦
ಕಾನಂಗೆ ಗುಂಡು ತಾಕಿದು . ೮೩
ಕಾಮಂ ಕಾಂತಾಬೃಂದಕೆ . . ೪೪
ಕಿಱುಗಿವಿ ದೇಸಿವೆತ್ತಸಿಮೊಗಂ ೧೩೩
ಕೂಡಿಸಿ ದವದೊಳ್ಬಾವವು . ೧೬
ಕೃತಿಪತಿ ಚಿಕದೇವೇಂದ್ರಂ ೨೯, ೮೭
ಕೆಳದಿಯಪೌಜಿನೊಳ್ . ೯೬
ಕೊನದೆಸೆ ರಾಮಚಂದ್ರಂ . ೧೦೮
ಕೊಳುಗುಳದೊಳ್ . . ೧೦೩

(ಗ)
ಗಂಡರ ಗಂಡನುರ್ಕೆರ್ವರವಕ್ಕಳ್ . ೮
ಗಂಟೆಬ್ದ್ದೋಘಮೂರಂ . . . ೩೨
ಗಿರಿದುರ್ಗದಿಂದೆ . . ೮೫
ಗಿರಿಶಿರದೊಳ್ಕಳವೆವೊಲಂ . . ೯೬
ಗರುಡಧ್ವಜನಂ . . ೬೬
(ಚ)
ಚಂದ್ರಂಗಿಂದ್ರಂಗೆ . . ೩೪
ಚದುರಂ ಚಾಗಿಯುಲಂಪುಗಾಱ . ೧೧
ಚಾತುರ್ವರ್ಣಾಶ್ರ್ಯಚಾರದ . ೧೧೫
ಚುರ್ಚಿ ಮಹಿಶೂರ ಬಾಣಂ . ೫೮
ಚೆನ್ನಬಸವನೊಳ್ವೆಂಡಿರ . ೧೨೧
(ಜ)
ಜಗದೇಕವೀರ ನರಪತಿ . ೫೩,೯೯
ಜಗದೊಳ್ ಶ್ರೀಚಿಕದೇವನಿಂ . ೨೧
ಜಡಕನ ದುರ್ಗದಿಂ . ೫೪
ಜಡಿದಿಡೆಯುಪ್ರತಿಮಂ . . ೭೫
(ಡ)
ಡಿಳ್ಳಿಯ ಶಾಸನ ಸುವೆಯುಂ . ೮೫
ಡಿಳ್ಳಿಯ ಕೊಳ್ಳೆಗೊಂಡೆ . ೧೪
(ತ)
ತಗುಳ್ವ ಮಹಿಶೂರ . . ೯೪
ತಡೆವನಿವನಾನೆಯಿಱಿದು . ೧೧೪
ತನ್ನಂ ನೆಱೆ ನೆಮ್ಮಿದರಂ . ೧೦೨
ತನ್ನ ಸಿರಿ ತನ್ನಸೇವಂ . ೩
ತೆಱಸಂದಪ್ರತಿಮಸುಭಟರ್ . ೧೨೯
ತೆಱಬಿ ಮಹಿಶೂರವರ್ ೩೦,೧೫೪
ತೆಱಬಱಬಟ್ಟು . . . ೨೬
ತೆಱಬಿ ಮಹಿಶೂರ ಭಟರೊಂದು ೫೬
ತೆಱವಾಯಿಂದಂ ಪೞರಂ . . ೭೧
ತಾಮೆಳಸಿದಂತೆ . . . ೧೧೬
ತಾಯುಂತೆ ಪೊರೆದು . ೩೩
ತುಡುಕಿದನೊರ್ಮ್ಮೊದಲೇ . ೫೫
ತೆಗೆತೆಗೆದೀಂಟೆಯೀಂಟೆ . . ೧೧
ತೆಪ್ಪನೆ ಬೀಣೆವಾಡದೊಳಗಾಡುವ ೧೫
(ದ)
ದಳಿತಾರೀಭಶಿರಃ . . ೫೦
ದಾನಕ್ಷಾತ್ರಾದಿಗಳಿಂ . ೯೦
ದೇವದ್ವೇಷಿಗಳಿರ . ೧೨೩
ದೇವನಿನ್ನಧಾಟಿಯೊಳ್ . ೨೮
ದೊರೆದೊರೆಗಳಿರಾ . . ೧೦೦
ದೊರೆಯೊಳ್ಸೆಣಸುಗೆ . ೧೦೬
(ಧ)
ದರ್ಮಪುರಿಯೊಳ್ . . ೮೪
ಧರೆ ಸೊಂಪೇಱೆ . . ೫೪,೧೫೩
ಧುರಕಾನೆವೊಗದೊಳ್ . ೧೨೯
(ನ)
ನಡೆದು ಮಹಿಶೂರ ಸುಭಟರ್ . ೮೦
ನಡೆಯಿಂ ಚಿಕದೇವೇಂದ್ರಂ . ೭೩
ನರಪತಿ ಕೇಳ್ನಿನ್ನೊಳ್ . . ೭೪

ನರಪತಿ ಕೇಳರಿನ್ನೃಪತಿಗೆ . ೪೭
ನರಪತಿ ಚಿಕದೇವೇಂದ್ರಂ . ೩,೧೫೦
ನರಪತಿ ಚಿಕದೇವೇಂದ್ರನ ೪೬,೧೨೨
ನರಪತಿ ಪದವಾಂತಿಳೆಯುಂ . ೮೯
ನರಪತಿ ಪೊಲ್ತುಱುವರೆ . ೧೨೬
ನರಪತಿಯಲ್ತುಮರೇಂದ್ರಂ . ೧೦೫
ನರಪತಿಯೊಳ್ಪಗೆಯುಂ . . ೬೭
ನಸುನಸುನಾಣ್ಚುತೊಂದಿನಿಸು . ೧೮
ನಾರಾಯಣನಳೆವಾಗಳ್ . ೪೩
ನಿಗುರಿಸಿ ಗೋಣ್ಗಳಂ . ೧೨
ನಿರುಪಧಿ ಸದ್ಗುಣಾಮೃತ . ೭೦
ನಿರವಿಸಿ ಚಿಕದೇವೇಂದ್ರನ . ೭೦
ನೀಟಿಂಗೆಜಗದ . . ೬೧
ನೀಮಾರಿರ್ಕೆರಿಯುವರ್ . ೧೩೧
ನೀರಕ್ಷೀರಂಗಳ . . . ೫
ನೆಗಱ್ಲಿಂದುಂ ಗುಣದೊಳ್ . ೩೮
ನೆಗಳ್ವಿನ್ನಂ ಬಿಡುಗಣ್ಣರ್ . . ೯
ನೆಲನಚ್ಚರಿಯಂ ಪಡೆ . . ೬,೩೧
ನೆವಮಿನಿತಿಲ್ಲದೊಲ್ಗಂ . ೧೦,೧೦೨
ನೆಱೆವೆಱೆ ಮೊಗದೊಳ್ . ೩೫
ನೆಱೆಸೊಗವಾಂತು . . . ೨೪
ನೇಸರ್ವೆಱಗಳಿರಾ . . . ೪೦
ನೊಂದು ಬಿದಿರೂರು . ೧೧೬
ನೊಂದು ಮಹಿಶೂರ ಭಟರಿಂ . ೧೩೭

(ಪ)

ಪಟ್ಟಂಗೊಳುತಪ್ರತಿಮಂ . ೬೧
ಪಡುವಣ ಮೂಡಣ . . . ೨
ಪಡೆಯುಡಿದುೞಳಂ . . . ೯೯
ಪತಿತದ್ವಿಜನುಂ . . ೬೩
ಪದಪದದಕ್ಕರಕ್ಕರದ . . ೧೩
ಪದಪಿಂ ಮೆಯ್ವೆತ್ತು . ೫೦
ಪರಮೇಷ್ಠಿತಮ್ಮ . . ೫೧
ಪರಿಪಾಲಿಸೆ ಸಾಧುಗಳಂ . . ೧೩೯
ಪಲಪಲರಂ ಪಲ್ಲಟಿಸುವ . ೭೧
ಪಲ್ಲಿಂ ಪೆರ್ಬಾಲೆಯ . ೪೮
ಪವಣಱಿತಾಂತುಬಾಜಿಸುವಿನಂ ೧೩
ಪಸಗೆಡಿಸಿ ಕೆಳದಿ . . ೧೧೦
ಪಳನುಡಿಪಾರ್ವರ್ಗಳುವ . ೪೦
ಪಾರಾವಾರಗಭೀರಂ . ೩೪
ಪಾರ್ವರ್ಪರ್ಳನುಡಿವುರುಳಂ . ೫೮
ಪಿಂತಣ ವಿಕ್ರಮನಳ . . ೨
ಪಿಂತೆಗೆದನೊರ್ಮೆ . . . ೭೧
ಪಿಂಪಳರಾಯರೊಲ್ದುಡಿಸಿದಾ . ೫೧
ಪಿಡಿದು ಮೊಲಗೋಡಿನಲಗಂ . ೧೦೮
ಪಿಡಿವರ್ಪರ್ಂಗಣೆಗಪ್ಪು . . ೮೧
ಪಿರಿದುಂ ಬಲಮಿರ್ಪುದು . . ೧೦೪
ಪುಟ್ಟಿದವೇಕೆ ಪುಟ್ಟಿದೊಡಂ . ೨೬
ಪೂನಿಬಸವಪ್ಪನಾಯಕಂ . . ೮೮
ಪೆರ್ಕಳಿಸುವ ರಕ್ಕಸವಡೆ . . ೬೦
ಪೆಱರೊಳ್ಪೊಣರ್ವಂದ್ಪೈಸೆ . ೧೨೨
ಪೊಡವಿಯ ಪೊತ್ತ ಬಲ್ಪೊಱ . ೮೪

ಪೊಣರ್ದರ್ಂದು ನೊಂದು . ೧೭೩
ಪೊರೆಗೆಂದುಂ ಚಿಕದೇವ . ೭೦
ಪೊರೆದಕೊರ್ಂಗಣಿವರ್ಮ್ಮರ್ . ೯೮
ಪೊಸ ಊರಮುಂದೆ . . ೭೩
ಪೊಸಊರಂ ಮುತ್ತಿದುದಂ . ೩೮
ಪೊಸಯಿಸಿ ಪುಯ್ಯೋಲಗಮುಂ . ೬೮
ಪ್ರಕಟಕಪಟನಾಟಕನಂ . ೩೧
ಪ್ರಜೆಗಳನನುರಂಜಿಸುಗುಂ . ೮೨

(ಬ)

ಬಗೆವಿನಮೆಣ್ದಿಸೆದೊರೆಗಳ . ೧೩೮
ಬಡಗಣಗಡಿಗೋಂಟೆಯು . . ೭
ಬನದೊಳ್ಕೃಷ್ಣಪನಾಯಕನ . ೯೭
ಬವರಕೆ ಮೊಗಲರ್ . ೯೨
ಬಹುವಿಧಮೊಳ್ಪೊಣರ್ದರ್ಂ . ೧೧೩
ಬಳಿಗಳ್ತ್ತಟ್ಗೆ ಕಂಡಂಗಿ . ೧೨
ಬಳಿಗುಂ ಸಂತಸಮುಣ್ಮುಗುಂ . ೫೫
ಬಿದಿಯಿಂದಮೊ . . ೧೭೫
ಬಿನಯದ ಬಿತ್ತು . ೧೫,೧೫೬
ಬಿದಱ ಬಸವಱಿದು . ೯೩
ಬಿದಱ ಬಿಸಂಗೆಟ್ಟೋಡುವ . ೧೦೧
ಬೇಡರಿರಾ ನೀಮುಂ . . ೧೭೮
ಬೇಱವನೋಜೆ . . ೫೩

(ಭ)

ಭವಭೂತಿ ತನ್ನವೊಲ್ . ೧೫೧
ಭೂರಿ ಮಹಿಶೂರ ಭಟರ್ . ೧೭೪

(ಮ)

ಮಂದಮರಾಟರ . ೧೦೩
ಮಧುರೆಯ ವೆಂಕಟಕೃಷ್ಣಂ . ೬೩
ಮನ್ನಣೆಗೆಯ್ದುಪ್ರತಿಮುಂ . ೧೩೬
ಮನ್ನಿಪುದು ಲೇಸು . ೨೬
ಮಯನೋ ಶಂಬರನೋ . ೪೬
ಮಲೆತಂ ಜೈಯ್ತ್ತಾಜಿ . ೧೪೬
ಮಲೆತಿರ್ದರಾಂತು ನಿಲ್ವ . ೪೫
ಮಲೆನಾಡ ಮನ್ನೆಯರಿರಾ . ೩೬
ಮಲೆವರನೊಕ್ಕಲಿಕ್ಕಿ . ೧೪
ಮಸಗಿ ಚಿಕದೇವರಾಯಂ . ೧೧೦
ಮಸಗಿತು ಮಹಿಶೂರವರ್ಗಂ . ೮೬
ಮಸಗಿ ಮಹಿಶೂರವರ್ . . ೬೪
ಮಸಗುವ ಮಧುರಾ . ೨೭
ಮಾರ್ಕೊಂಡುಱುಬುವ . ೧೧೩
ಮಿಸಗುವ ಮುಂಮು . . ೧೪೧
ಮೀಱುವದನೆಳೆಪದಂಗಳ್ . ೪
ಮುತ್ತಿನ ಸರಮುಂ - ೧೧೯,೧೫೫
ಮುನ್ನಂಬಂ ಪಿನ್ನಂಬಿಂ . . ೩೬
ಮುನ್ನಱಿಗಜ್ಜಮದೆನಿತು . ೬೫
ಮುನ್ನಾ ದೇವೇಂದ್ರನಿಂ . ೪೨
ಮುನ್ನಿರ್ದದಮುದರ್ . . ೯೮
ಮುನ್ನಿವನ ತಂದೆ . . ೧೪೫
ಮುನ್ನೀಂ ಕೆಟ್ಟದೆ ಮಾಣ್ದೋ . ೪೪
ಮುಱಿದೋಡಿಯೋಡಿ . ೧೦೭

ಮೂಗಱದಿಸೆವಂತಂ . ೧೨೩

ಮೂಗಲಿಯಿಸೆವಂತಂ . . ೧೪೧

ಮೊಗದೊಳ್ಮೆಯ್ಯೊಳ್ . ೯೮

ಮೊನೆಗಾಱಂ ಬೊಮ್ಮಯ್ಯಂ ೧೩೨

ಮೊಲೆಬಿಣ್ಪಿಂ ಬಿದಿ . . ೨೪

ಮೊಳೆವೆಳದಪ್ಪ . . ೧೮

(ಯ)

ಯದುಕುಲರತ್ನಾಕರ . . ೫೨

(ರ)

ರಣಕೆಣೆಯಿಲ್ಲೆಂಬವೊಲ್ . ೧೦೬

ರಾಮನ ಸತ್ಯಪರಾಕ್ರಮ . ೯೨

ರೀತಿಗಳಿರವಿದು . . . . ೪

(ಲ)

ಲಂಕಾಧೀಶನ ಮೂಲಬಲಂ . ೬೨

(ವ)

ವಲಿತಾರಾತಿಸಿರಾಂಕುರ . ೪೩

ವಸುಧಾರೆಯನಾಕ್ರಮಿಸುವ . ೧೧೨

ವಸುಮತಿ ಪೆತ್ತುದೋ . ೨೫

ವಿತರಣಮುಂ ವಿಕ್ರಮಮುಂ . ೧೦೧

ವ್ಯಕ್ತಮಿದಪ್ರತಿಮನ . ೬೪

ವ್ರತಿಯೆನಿಸುವ ನೃಪತಿಯ . ೧೫೧

(ಶ)

ಶರಣಂ ಶ್ರೀಚಿಕದೇವ ನಿನ್ನ . ೩೧

ಶರಧಿಯೊಳೆಟ್ಟಿ . ೨೩

ಶ್ರೀಮಂತಂ ಯದುಶೈಲ . . . ೮

ಶ್ರೀರಮಣನ ದಿವ್ಯಲೀಲೆವೊಲ್ ೧೧೩

ಶ್ರೀವರನಖಿಲ . . . ೧

ಶ್ರುತಿಯುಂ ಕಾಪಿಟ್ಟು . ೧೧೭, ೧೫೮

(ಸ)

ಸಂಗೀತಾಂಬುಧಿಪಾರಗರ್ . ೪೨

ಸತ್ತ್ರವರೊಡಲೊಟ್ಟಲೊಳ್ . ೧೪೩

ಸಮದೃಷ್ಟಿಯೆನಿಸೆ . . ೧೫೩

ಸಮನಿಸೆ ಮಹಿಶೂರವರರೊಳ್ . ೩೮

ಸಮನಿಸೆ ಸರ್ವಜ್ಞತ್ವಂ . . ೨೮

ಸರಸಿಜಮುದಕದೊಳ್ . . ೮೭

ಸರಿ ಸಗರಂಗೆ . . ೫೯

ಸವನಿಸೆ ನರಪತಿಪದಂ . . ೩೯

ಸಿರಿಕಥಮುಣ್ಬನಿಯುನ . . ೧೩೫

ಸಿರಿದರನ ಬಗೆಯೊಳ್ . . ೭

ಸಿರಿಯುಡಿಗಳ್ಗೆ ಸಾರ್ಚೆ . ೧೪೨

ಸುಗುಣಂಗಳ್ಪದಿದೋಱಿ . ೫, ೬೫

ಸೆಣಸಿ ಚಿಕದೇವರಾಯನೊಳ್ . ೬೭

ಸೆಣಸಿ ಮಹಿಶೂರಭಟರೊಳ್ ೧೦೪, ೧೩೩

ಸೊಗಮಿರ್ಪಳೆ . . ೧೨೩

(ಹ)

ಹಾರೈಸಿ ಹುದುಗ . . . ೩೩